# ಕರ್ನಾಟಕ ವಿಕಾಸ

KARNATAKA VIKAS

ಫೆಬ್ರವರಿ 2013
February





## ರಾಜ್ಯದ ಪಂಚಾಯತ್ ರಾಜ್ ವ್ಯವಸ್ಥೆಯ ಮಾದರಿಯನ್ನು ಮೆಚ್ಚಿದ ಉತ್ತರ ಪ್ರದೇಶ ಸರ್ಕಾರದ ಪಂಚಾಯತ್ ರಾಜ್ ಸಚಿವರು



ಶ್ರೀ ಬಲರಾಮ್ ಯಾದವ್ ಮಾನ್ಯ ಪಂಚಾಯತ್‌ರಾಜ್ ಸಚಿವರು ಉತ್ತರ ಪ್ರದೇಶ ಸರ್ಕಾರ ಅವರಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆಯ ಕುರಿತು ಮಾಹಿತಿ ನೀಡುತ್ತಿರುವ ಶ್ರೀಮತಿ ವಿ. ರಶ್ಮಿ ಕಾರ್ಯದರ್ಶಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ. ಈ ಸಂದರ್ಭದಲ್ಲಿ ಜಂಟಿ ನಿರ್ದೇಶಕರು ಪಂ. ರಾಜ್ ಇಲಾಖೆ ಉತ್ತರ ಪ್ರದೇಶ ಸರ್ಕಾರ ಹಾಗೂ ಶ್ರೀ ಪಿ. ಕುಮಾರ್. ನಿರ್ದೇಶಕರು ಪಂ.ರಾಜ್ ರವರು ಉಪಸ್ಥಿತರಿದ್ದರು.



ಉತ್ತರ ಪ್ರದೇಶ ಸರ್ಕಾರದ ಪಂಚಾಯತ್‌ರಾಜ್ ಸಚಿವರಾದ ಮಾನ್ಯ ಶ್ರೀ ಬಲರಾಮ್ ಯಾದವ್‌ರವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ಅಣ್ಣೇಶ್ವರ ಗ್ರಾ.ಪಂ. ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರೊಂದಿಗೆ ಚರ್ಚಿಸುತ್ತಿರುವುದು.


ಕರ್ನಾಟಕ ವಿಕಾಸ
KARNATAKA VIKAS

ಫೆಬ್ರವರಿ
February
2013

ಸಂಪುಟ : 54
VOLUME
ಸಂಚಿಕೆ : 03
ISSUE : 03

## ಈ ಸಂಚಿಕೆಯೊಳಗೆ


| | | |
|---|---|---|
| 5 | ಸಚಿವಾಲಯದಿಂದ ಸಂದೇಶ | -ಡಾ॥ ಇ.ವಿ. ರಮಣ ರೆಡ್ಡಿ |
| 7 | ಬದುಕುವ ಮಾತು | - ಡಾ॥ ಪಾಟೀಲ ಪುಟ್ಟಪ್ಪ |
| 8 | ಕವಿಯ(ಕ್ಷ) ಪ್ರಶ್ನೆಗಳು | - ಕೆ.ಎಸ್. ಚಂದ್ರಶೇಖರಯ್ಯ |
| 9 | ಕಾವ್ಯ ವಿಕಾಸ | -ಎಂ.ಎಂ. ಸಂಗಣ್ಣನವರ |
| 10 | ಚಿಂತನೆ | -ಪ್ರೊ. ಎ.ಎಚ್. ಮಾಸಾಪತಿ |
| 14 | ಲೇಖನಗಳು | -ಡಾ॥ ಟಿ. ರಮೇಶ್ |
| | | -ಬಸವರಾಜ ಆಕಳವಾಡಿ |
| 20 | ಯಶೋಗಾಥೆಗಳು | -ಮನೋಹರ್. |
| | | ಉಮೇಶ್‌ಹುಲಿಕುಂಟೆ |
| 37 | ಆರೋಗ್ಯ | - ಡಾ॥ ವಾಮನ್‌ರಾವ್ |
| 39 | ಸುತ್ತೋಲೆಗಳು | |


ಪ್ರಕಾಶಕರು
**ಪಿ. ಕುಮಾರ್**
ನಿರ್ದೇಶಕರು (ಪಂ. ರಾಜ್)
ಹಾಗೂ ಸರ್ಕಾರದ ಪದನಿಮಿತ್ತ
ಉಪಕಾರ್ಯದರ್ಶಿಗಳು

ಪ್ರಧಾನ ಸಂಪಾದಕರು
**ಬೂವನಹಳ್ಳಿ ನಾಗರಾಜ್**
ನಿರ್ದೇಶಕರು, ಸುವರ್ಣ ಗ್ರಾಮೋದಯ
ಹಾಗೂ ಸರ್ಕಾರದ ಪದನಿಮಿತ್ತ
ಉಪಕಾರ್ಯದರ್ಶಿಗಳು

ಸಂಪಾದಕರು ಹಾಗೂ
ಸಾರ್ವಜನಿಕ ಸಂಪರ್ಕಾಧಿಕಾರಿಗಳು
**ವೈ. ಮಹಾಂಕಾಳಪ್ಪ**

ಸಹಾಯಕ ಸಂಪಾದಕರು
**ಡಾ॥ ಎಂ.ಎಸ್. ಮಂಜುನಾಥ**
**ನಾಗರಾಜ್ ಬಿ ವಾಗಾ**

**ವಾರ್ಷಿಕ ಚಂದಾ :**
ವ್ಯಕ್ತಿಗಳಿಗೆ ರೂ. 50/–
ಸಂಸ್ಥೆಗಳಿಗೆ ರೂ. 60/–
ಬಿಡಿ ಪ್ರತಿ ರೂ. 5/–
ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಿಮ್ಮ ಅಂಚೆ ವಿಳಾಸದೊಂದಿಗೆ ನಮ್ಮ ಕಚೇರಿ ವಿಳಾಸಕ್ಕೆ ತಲುಪಿಸಬಹುದು.


**ಕಚೇರಿ ವಿಳಾಸ**
ಸಂಪಾದಕರು, 'ಕರ್ನಾಟಕ ವಿಕಾಸ'
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ನಂ. 309, 3ನೇ ಮಹಡಿ, ಗೇಟ್ ನಂ. 1
ಬಹುಮಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ,
ಬೆಂಗಳೂರು–560 001.
ದೂರವಾಣಿ : (080) 22353857
www.rdpr.kar.nic.in
email : kvrdpr@gmail.com

ವಿಶೇಷ ಸೂಚನೆ
ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಆದೇಶ, ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು.

ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯವಲ್ಲ.

ಪತ್ರಿಕೆ ಕುರಿತು

## ನಿಮ್ಮ ನುಡಿ




ಮಾನ್ಯರೆ,

ಜನವರಿ 2013 ನೂತನ ವರ್ಷದ ಕರ್ನಾಟಕ ವಿಕಾಸ ಮಾಸ ಪತ್ರಿಕೆಯು ವಿವಿಧ ಕಾರ್ಯಕ್ರಮಗಳ ಪರಿಚಯಗಳನ್ನು ನೀಡುವಲ್ಲಿ ಯಶಸ್ವಿ ಪತ್ರಿಕೆಯೆಂದು ಹೆಮ್ಮೆಯಿಂದ ಹೇಳಬಹುದು.ಡಾ॥ ವಾಮನ್‌ರಾವ್ ರವರ "ಗ್ರಾಮಗಳ ತ್ಯಾಜ್ಯ ವಸ್ತುಗಳಿಂದ ಬರುವ ರೋಗಗಳನ್ನು ತಡೆಗಟ್ಟುವ ಬಗೆಗಳು" ಲೇಖನವು ಆರೋಗ್ಯ ಕಾಯ್ದುಕೊಳ್ಳುವಲ್ಲಿ ತುಂಬಾ ಪರಿಣಾಮಕಾರಿಯಾಗಿದೆ ಎಂದು ಹೇಳಬಹುದು. ಕರ್ನಾಟಕ ವಿಕಾಸ ಮಾಸ ಪತ್ರಿಕೆಯು ಸಂಗ್ರಾಹ್ಯವಾದ ಪತ್ರಿಕೆಯೆಂದರೆ ಅತಿಶಯೋಕ್ತಿಯೆನಿಸದು.

**–ಶ್ರೀ ಕೊತ್ತಲ ಮಹಾದೇವಪ್ಪ,**
ಸಾಹಿತಿ. ವಿನಾಯಕ ನಗರ, ಲಕ್ಷ್ಮೇಶ್ವರ–582 116 ಗದಗ ಜಿಲ್ಲೆ.

ಕರ್ನಾಟಕ ವಿಕಾಸ ಪತ್ರಿಕೆಯು ಗ್ರಾಮೀಣ ಇಲಾಖೆಯಲ್ಲಿ ಉದ್ಯೋಗ ಕೈಗೊಳ್ಳುವವರಿಗೂ, ಸರ್ಕಾರೇತರ ಸಂಸ್ಥೆಗಳಿಗೂ, ರೈತ ಬಾಂಧವರಿಗೂ ತುಂಬಾ ಉಪಯುಕ್ತವಾಗಿದೆ. ಜನವರಿ 2013ರ ಕರ್ನಾಟಕ ವಿಕಾಸ ಪತ್ರಿಕೆಯಲ್ಲಿ "ಸಾವಯವ ಕೃಷಿಗೆ ಮುಂದಾದ ದೂರದ ಟಿಬೇಟಿಯನ್ನರು" ಸುಂದರವಾಗಿ ಮೂಡಿಬಂದಿದೆ. ಬೇರೆ ಬೇರೆ ಕಡೆ ಗ್ರಾಮಗಳಲ್ಲಿ ನಡೆಯುವಂತಹ ಹೊಸ ಹೊಸ ವಿಚಾರಗಳು ಕರ್ನಾಟಕ ವಿಕಾಸ ಪತ್ರಿಕೆಯಲ್ಲಿ ಪ್ರಕಟವಾಗಲಿ ಎಂಬುದೆ ನನ್ನ ಆಸೆ.

**–ಹಿರೆಗಂಗೂರು ಪ್ರವೀಣ್,**
ಡಿಪ್ಲಮಾ ಇನ್ ಗ್ರಾ.ಅ. ಮತ್ತು ಪಂ.ರಾಜ್., ಭಧ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ

ಜನವರಿ 2013ನೇ ತಿಂಗಳ ಪತ್ರಿಕೆಯಲ್ಲಿ ಪ್ರಕಟವಾದ ಡಾ॥ ಪಾಟೀಲ್ ಪುಟ್ಟಪ್ಪನವರ "ಬದುಕುವ ಮಾತು" ಎಂಬ ಲೇಖನ ತುಂಬಾ ಚನ್ನಾಗಿ ಮೂಡಿ ಬಂದಿದೆ. ಯಾವುದೇ ಕಾರ್ಯವನ್ನು ನಿಷ್ಠೆಯಿಂದ ಮಾಡಿದರೆ ಫಲ ಸಿಕ್ಕೇಸಿಗುತ್ತದೆ. ಎಂಬುದಕ್ಕೆ ನಿದರ್ಶನವಾಗಿದೆ. ಅದರಂತೆ ಮಹಿಳಾ ಸ್ವ–ಸಹಾಯ ಸಂಘಗಳು ಶ್ರಮ ವಹಿಸಿ ಸಂಘ ಬೆಳೆಸಿದರೆ ಕುಟುಂಬವು ಆರ್ಥಿಕವಾಗಿ ಸಬಲವಾಗುವುದು. ಜವನರಿ ತಿಂಗಳ ಪತ್ರಿಕೆಯಲ್ಲಿ ಪ್ರಕಟವಾಗಿರುವ ಎಲ್ಲಾ ಲೇಖನಗಳು ತುಂಬಾ ಉಪಯುಕ್ತವಾಗಿವೆ. ಅದರಲ್ಲಿ ಪ್ರಕಟವಾದ ಸರ್ಕಾರದ ಸುತ್ತೋಲೆಗಳು ಕಡಮೆ ಸಮಯದಲ್ಲಿ ಜನರ ಕೈಸೇರಲು ಅನುಕೂಲವಾಗಿರುತ್ತದೆ. ಒಟ್ಟಾರೆಯಾಗಿ ಈ ಪತ್ರಿಕೆ ಜನರ (ಓದುಗರ) ಮೆಚ್ಚುಗೆ ಪಡೆದಂತ ಪತ್ರಿಕೆಯಾಗಿರುತ್ತದೆ.

**–ಎಲ್.ಭೀ.ಉಪ್ಪಾರ,**
ದ್ವಿತೀಯ ದರ್ಜೆ ಲೆಕ್ಕ ಸಹಾಯಕ, ಗ್ರಾಮ ಪಂಚಾಯತ್,
ನಾಗನೂರ, ತಾಲ್ಲೂಕು ಗೋಕಾಕ, ಜಿಲ್ಲೆ ಬೆಳಗಾವಿ.

ಜನವರಿ 2013ರ ಕನಾಟಕ ವಿಕಾಸ ಮಾಸ ಪತ್ರಿಕೆಯಲ್ಲ ವಿಶೇಷ ಅಭಿವೃದ್ಧಿ ಯೋಜನೆಗಳ ಕುರಿತ ಮಾಹಿತಿಯು ಎಲ್ಲಾ ಜನತೆಗೆ ಉಪಯುಕ್ತವಾಗಿದೆ. ಡಾ॥ ಪಾಟೀಲ್ ಪುಟ್ಟಪ್ಪನವರ "ಕೆಲಸದಲ್ಲಿ ಆಸಕ್ತಿಯಿದ್ದರೆ ಅಸಾಧ್ಯಗಳು ಸಾಧ್ಯವಾಗುತ್ತವೆ" ಎಂಬ ಲೇಖನವು ಮನಮುಟ್ಟುವಂತಿದೆ. ದಿನೇಶ್ ಪಿ.ಟಿ. ಇವರ "ಗ್ರಾಮೀಣಾಭಿವೃದ್ಧಿಯಲ್ಲಿ ಕಿರು ಹಣಕಾಸಿನ ಪಾತ್ರ" ಲೇಖನವು ಜನರಿಗೆ ದಾರಿ ದೀಪವಾಗಿದೆ ಎಂದರೆ ತಪ್ಪಾಗಲಾರದು. ಮುಂದೆಯೂ ಸಹ ಇಂತಹ ಉಪಯುಕ್ತವಾದ ಲೇಖನಗಳು ಪ್ರಕಟವಾಗಲೆಂಬುದೇ ನನ್ನ ಆಶಯ.

**–ನಾಗಣ್ಣಗೌಡ ಮುದಿಗೌಡರ್**
ವಾಹನ ಚಾಲಕರು, ತಾಲ್ಲೂಕು ಪಂಚಾಯತ್ ಕಛೇರಿ, ಶಹಾಪೂರ, ಜಿಲ್ಲೆ ಯಾದಗೀರ

ಸಚಿವಾಲಯದಿಂದ ಸಂದೇಶ

**ಕರ್ನಾಟಕ ಸರ್ಕಾರ ಸಚಿವಾಲಯ**
**ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,**
**ಬಹುಮಹಡಿ ಕಟ್ಟಡ ಬೆಂಗಳೂರು.**

**ಪ್ರಿಯ ಬಂಧುಗಳೇ,**



**ಡಾ. ಇ.ವಿ.ರಮಣ ರೆಡ್ಡಿ.** ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು

## ಯೋಜನೆಗಳ ಉದ್ದೇಶಗಳು ಜನಸಾಮಾನ್ಯರಿಗೆ ತಲುಪಲಿ...


ಕೇಂದ್ರ ಹಾಗೂ ರಾಜ್ಯ ಸಹಯೋಗದೊಂದಿಗೆ ಮಹತ್ವಾಕಾಂಕ್ಷಿ ಯೋಜನೆಯಾದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ರಾಜ್ಯದಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಂಡು ರಾಜ್ಯದಲ್ಲಿ ಅನೇಕ ಅಭಿವೃದ್ಧಿ ಕಾಮಗಾರಿಗಳಿಗೆ ನಾಂದಿಯಾಗಿರುವುದನ್ನು ನಾವೆಲ್ಲಾ ಗಮನಿಸಬಹುದಾಗಿದೆ. ಯೋಜನೆಯ ಸಮರ್ಪಕ ಫಲಿತಾಂಶಗಳಿಗಾಗಿ ಹಲವು ತರಬೇತಿ, ವಿಚಾರ ಸಂಕಿರಣ, ಕಾರ್ಯಾಗಾರ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅನುಷ್ಠಾನಾಧಿಕಾರಿಗಳಿಗೆ ಮಾಹಿತಿಗಳನ್ನು ಕಾಲಕಾಲಕ್ಕೆ ನೀಡಲಾಗುತ್ತಿರುವುದು ಸರಿಯಷ್ಟೆ. ಗ್ರಾಮೀಣ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯಗಳ ಸಮಸ್ಯೆಗಳನ್ನು ನಿವಾರಿಸಲು ಸಮಗ್ರವಾಗಿ ಕಾರ್ಯಚಟುವಟಿಕೆಗಳನ್ನು ನಿರಂತರವಾಗಿ ಹಮ್ಮಿಕೊಳ್ಳಲಾಗಿದೆ. ಇತ್ತೀಚೆಗೆ ಸರ್ಕಾರವು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಭಾಗಿಗಳಾದ ಎಲ್ಲಾ ಅನುಷ್ಠಾನ ಇಲಾಖೆಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ತಮ್ಮ ಇಲಾಖೆಯ ಕಾಮಗಾರಿಗಳ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲು ಪರಿಗಣಿಸಿ ಆದೇಶ ಹೊರಡಿಸಲಾಗಿದೆ. ಉದಾಹರಣೆಗೆ ಅನುಷ್ಠಾನ ಸಂಸ್ಥೆಗಳೆಂದು ಪರಿಗಣಿಸಿರುವ ಅರಣ್ಯ, ತೋಟಗಾರಿಕೆ, ಜಲಸಂಪನ್ಮೂಲ, ಕೃಷಿ, ರೇಷ್ಮೆ, ಪಶುಸಂಗೋಪನಾ ಮತ್ತು ಮೀನುಗಾರಿಕೆ ಇಲಾಖೆಗಳನ್ನು ಅನುಷ್ಠಾನಾಧಿಕಾರಿಗಳೆಂದು ಸ್ಪಷ್ಟಪಡಿಸಲಾಗಿದ್ದು ಅಗತ್ಯ ಅಭಿವೃದ್ಧಿ ಕಾಮಗಾರಿಗಳನ್ನು ಪಂಚಾಯತ್ ಸಂಸ್ಥೆಗಳ ಅನುಮೋದನೆಯೊಂದಿಗೆ ಕೈಗೊಳ್ಳಲು ತೀರ್ಮಾನಿಸಲಾಗಿದೆ.

**ಗ್ರಾಮ ಸಭೆಗಳು ಸಕ್ರಿಯವಾಗಿರಲಿ...**

ಗ್ರಾಮ ಸಭೆಗಳು ಹಳ್ಳಿಯ ವಿಧಾನ ಸಭೆ. ಗ್ರಾಮ ಸಭೆಗಳಲ್ಲಿ ತೆಗೆದುಕೊಂಡ ತೀರ್ಮಾನಗಳ ಯಾವುದೇ ಕಾಮಗಾರಿಗಳ ಅನುಷ್ಠಾನ ವಿಷಯದಲ್ಲಿ ಅಂತಿಮ. ಆದ್ದರಿಂದ ಸ್ಥಳೀಯ ಸಮಸ್ಯೆಗಳಿಗೆ ಸ್ಥಳೀಯರೇ ಗ್ರಾಮಸಭೆಗಳಲ್ಲಿ ಭಾಗವಹಿಸುವುದರ ಮೂಲಕ ಪರಿಹಾರ ಕಂಡುಕೊಳ್ಳಬಹುದಾಗಿದೆ. ಹಾಗಾಗಿ ಗ್ರಾಮಸಭೆಗಳು ನಿಗದಿತ ಅವಧಿಯಲ್ಲಿ ಕಡ್ಡಾಯವಾಗಿ ನಡೆಸಿ ಯೋಜನೆಯ ಮಾರ್ಗಸೂಚಿಗಳನ್ವಯ ನಿಯಮಾನುಸಾರ ಅನುಮೋದನೆ ನೀಡುವಂತಾಗಬೇಕು. ಹಾಗಾದಲ್ಲಿ ಮಾತ್ರ ಸಂಬಂಧಿಸಿದ ಅನುಷ್ಠಾನ ಸಂಸ್ಥೆಗಳು ತಮ್ಮ ಇಲಾಖೆಯ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗುತ್ತದೆ. ಆದ್ದರಿಂದ ಚುನಾಯಿತ ಪಂಚಾಯತ್ ಪ್ರತಿನಿಧಿಗಳು ಹಾಗೂ ಅಧಿಕಾರಿ/ಸಿಬ್ಬಂದಿ ವರ್ಗದವರು ಈ ನಿಟ್ಟಿನಲ್ಲಿ ಸಮರ್ಪಕವಾಗಿ ಕಾರ್ಯನಿರ್ವಹಿಸುವಂತಾಗಬೇಕು.

**ಕುಡಿಯುವ ನೀರಿಗೆ ಆದ್ಯತೆಯಿರಲಿ...**

ರಾಜ್ಯದಲ್ಲಿ ಬೇಸಿಗೆ ಆರಂಭವಾಗುತ್ತಿದೆ. ಇತ್ತೀಚಿನ ದಿನಗಳಲ್ಲಿ ಮಳೆಯೂ ಸಹ ನಿಗದಿತ ಪ್ರಮಾಣದಲ್ಲಿ ಆಗದಿರುವುದರಿಂದ ಬರದ ಛಾಯೆ ಎಲ್ಲೆಲ್ಲೂ ಆವರಿಸುತ್ತಿದ್ದು ಮುಂದಿನ ದಿನಗಳಲ್ಲಿ ಕುಡಿಯುವ ನೀರಿಗೂ ತತ್ವಾರ ಬಂದೊದಗಲಿದೆ. ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರನ್ನು ಸಮರ್ಪಕವಾಗಿ ಸರಬರಾಜು ಮಾಡುವ ಕರ್ತವ್ಯ ಸ್ಥಳೀಯ ಸಂಸ್ಥೆಗಳದ್ದಾಗಿದೆ. ಹಾಗಾಗಿ ನಮ್ಮೆಲ್ಲಾ ಅಧಿಕಾರಿ/ಸಿಬ್ಬಂದಿಗಳು ಕೊಳವೆ ಬಾವಿಗಳು, ನಳ, ಪಂಪ್‌ಸೆಟ್‌ಗಳು ಮುಂತಾದುವುಗಳನ್ನು ಕಾಲಕಾಲಕ್ಕೆ ಸಮರ್ಪಕವಾಗಿ ರಿಪೇರಿ ಅಥವಾ ನಿರ್ವಹಿಸಿಕೊಂಡು, ಜಲ ಸಂಪನ್ಮೂಲಗಳನ್ನು ಸಂರಕ್ಷಿಸಿ, ಅಂತರ್ಜಲ ಮಟ್ಟವನ್ನು ಕಾಪಾಡಿಕೊಳ್ಳಬೇಕು. ಇದಕ್ಕೆ ಸರ್ಕಾರದ ಮಟ್ಟದಲ್ಲಿ ಯಾವುದೇ ಸಹಾಯಕ್ಕಾಗಿ ಬದ್ಧ ಎಂದು ತಿಳಿಸುತ್ತಾ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸರಬರಾಜಿಗೆ ಯಾವುದೇ ರಾಜಿಯಿಲ್ಲ ಎಂದು ಸ್ಪಷ್ಟಪಡಿಸುತ್ತೇನೆ. ಪಂಚಾಯತ್ ಸಂಸ್ಥೆಗಳು ಈ ನಿಟ್ಟಿನಲ್ಲಿ ಸೇವಾ ಮನೋಭಾವದಿಂದ ಕಾರ್ಯನಿರ್ವಹಿಸುವಂತಾಗಲಿ ಎಂದು ಆಶಿಸುತ್ತೇನೆ.



**(ಡಾ॥ ಇ.ವಿ.ರಮಣ ರೆಡ್ಡಿ)**

ಬದುಕುವ ಮಾತು

# ತಪ್ಪನ್ನು ಒಪ್ಪಿಕೊಳ್ಳುವ ಜನರು ತಮ್ಮನ್ನು ತಿದ್ದಿಕೊಳ್ಳುತ್ತಾರೆ



ಡಾ. ಪಾಟೀಲ ಪುಟ್ಟಪ್ಪ

> ನಾವು ಒಂದು ತಪ್ಪಿಗೆ ಅವಕಾಶ ಮಾಡಿಕೊಟ್ಟರೆ, ಅದನ್ನು ಹಿಂಬಾಲಿಸಿಕೊಂಡು ಹತ್ತು ತಪ್ಪುಗಳು ಬರುತ್ತವೆ.

ಒಂದು ದೋಷವೇನಾದರೂ ಇದ್ದರೆ ಅದನ್ನು ತಕ್ಷಣ ಸರಿಪಡಿಸಿಕೊಳ್ಳಬೇಕು. ಸುಮ್ಮನೆ ಬಿಟ್ಟರೆ ತಪ್ಪು ಹೆಪ್ಪುಗಟ್ಟಿಕೊಳ್ಳುತ್ತದೆ. ಘನೀಭೂತವಾಗುತ್ತದೆ. ಇನ್ನೊಬ್ಬರ ತಪ್ಪನ್ನು ಮನುಷ್ಯನು ಕ್ಷಮಿಸಿದರೂ, ತನ್ನ ತಪ್ಪನ್ನು ಮಾತ್ರ ಅವನು ಎಂದೂ ಕ್ಷಮಿಸಬಾರದು.

ತಪ್ಪನ್ನು ಗುರುತಿಸಿಕೊಂಡು ಅದನ್ನು ತಿದ್ದಿಕೊಂಡರೆ, ಅದು ಇನ್ನೊಮ್ಮೆ ಪುನರುಚ್ಚರಿಸಲಾರದು ಆಗ ಅದು ನಿಜವಾದ ಪಶ್ಚಾತ್ತಾಪವೆನಿಸುತ್ತದೆ.

ಆಗಿರುವ ತಪ್ಪನ್ನು ಒಪ್ಪಿಕೊಳ್ಳುವುದು ಸೋಲೇ ಅಲ್ಲ. ನಿಜವಾದ ವಿಜಯ ಒಪ್ಪಿಕೊಳ್ಳುವುದರಲ್ಲಿಯೇ ಇದೆ. ಕಸಕಡ್ಡಿ ಬೆಳೆಯದಿರುವ ಭೂಮಿ ಯಾವುದೂ ಇಲ್ಲ. ಅದೇ ರೀತಿ, ತಪ್ಪು ಮಾಡದೇ ಇರುವ ಹೃದಯ ಯಾವುದೂ ಇಲ್ಲ.

ನಮ್ಮಿಂದ ಒಂದು ತಪ್ಪು ಘಟಿಸೀತು ಎನ್ನುವ ಹೆದರಿಕೆಯಲ್ಲಿ ನಾವು ಬದುಕಿರದೆ ಸರಿಯಾದುದನ್ನು ಶೋಧಿಸುವ ಆಸೆಯಲ್ಲಿಯೇ ನಾವು ಸದಾ ನಮ್ಮನ್ನು ತೊಡಗಿಸಿಕೊಂಡಿರಬೇಕು.

ತಪ್ಪುಗಳಲ್ಲಿಯೇ ನಾವು ಒಂದನ್ನು ಆರಿಸಿಕೊಳ್ಳಬೇಕೆನ್ನುವುದಾದರೆ, ಅತ್ಯಲ್ಪಕಾಲ ಇರುವ ತಪ್ಪನ್ನೇ ನಾವು ಆಯ್ದುಕೊಳ್ಳಬೇಕು. ತಪ್ಪನ್ನು ಸೋಲಿಸಬೇಕೆನ್ನುವವರು ಸತ್ಯವನ್ನು ನೆಲೆಗೊಳಿಸಲು ಮುಂದಾಗಬೇಕು.

ಮನುಷ್ಯನು ಒಂದು ಚೀಲ ಇದ್ದಂತೆ. ಅದರಲ್ಲಿ ಜೋಳ್ಳನ್ನು ತುಂಬಿಕೊಳ್ಳುವುದು ಸಾಧ್ಯ ಇರುವಂತೆ, ಕಾಳನ್ನು ತುಂಬಿಕೊಳ್ಳುವುದೂ ಸಾಧ್ಯವಿದೆ. ಕಾಳನ್ನು ತುಂಬಿಕೊಳ್ಳುವುದು ಸಾಧ್ಯ ಇರುವಾಗ ಅದರಲ್ಲಿ ಜೋಳ್ಳನ್ನು ತುಂಬಿಕೊಳ್ಳಲು ಏಕೆ ಮುಂದಾಗಬೇಕು?

ಆದರೆ ಮನುಷ್ಯ ಸ್ವಭಾವದಲ್ಲಿ ಒಂದು ದೋಷ ಇದೆ. ಸಮೃದ್ಧ ತಪ್ಪನ್ನು ಒಪ್ಪಿಕೊಳ್ಳುವಂತೆ ಮನುಷ್ಯನು ನೋವು ತಿನ್ನುವ ಸತ್ಯವನ್ನು ಒಪ್ಪಿಕೊಳ್ಳುವುದಿಲ್ಲ. ತಪ್ಪು ಯಾವ ಪೊಳ್ಳಿನಿಂದಾದರೂ ಹೇಗಾದರೂ ಮಾಡಿ ನುಸುಳಿಕೊಂಡು ಬರಬಲ್ಲದು; ಆದೆ ಸತ್ಯ ಮಾತ್ರ ತೆರೆದ ಬಾಗಿಲಿನಿಂದಲೇ ಒಳಗೆ ಬರಬೇಕೆನ್ನುತ್ತದೆ.

ನಾವು ಒಂದು ತಪ್ಪಿಗೆ ಅವಕಾಶ ಮಾಡಿಕೊಟ್ಟರೆ, ಅದನ್ನು ಹಿಂಬಾಲಿಸಿಕೊಂಡು ಹತ್ತು ತಪ್ಪುಗಳು ಬರುತ್ತವೆ. ಸುಳ್ಳಿನ ಫಲಗಳನ್ನು ಸವಿಯಬೇಕೆನ್ನುವವರ ಹಾದಿಯಲ್ಲಿ, ಸತ್ಯವೆನ್ನುವುದು ನಿಜವಾದ ಅಡೆತಡೆಯಾಗಿರುತ್ತದೆ. ನಿಜವಾದ ಸುಖವನ್ನು ಅನುಭವಿಸಬೇಕೆನ್ನುವವರು. ಅದಕ್ಕೆ ಸತ್ಯದ ಬೆಲೆಯನ್ನು ಕೊಟ್ಟೇ ಪಡೆದುಕೊಳ್ಳಬೇಕು.

ಯಾವಾಗಲೂ ಮನುಷ್ಯನು ತಪ್ಪುಗಳನ್ನು, ಅರ್ಧಮರ್ಧ ಸತ್ಯಗಳನ್ನು ನಿರಾಕರಿಸಬೇಕು. ಅರ್ಧಮರ್ಧ ಸತ್ಯವು ಸಂಪೂರ್ಣ ಅಸತ್ಯಕ್ಕಿಂತ ಭಿನ್ನವಾದುದೇನೂ ಅಲ್ಲ.

ಸರಿ ಎನ್ನುವುದು ಬೆಳಕು ಇದ್ದಂತೆ. ತಪ್ಪು ಎನ್ನುವುದು ಕತ್ತಲು ಇದ್ದಂತೆ. ಬೆಳಕನ್ನು ಹಿಡಿದು ಹೊರಟವರಿಗೆ ಕತ್ತಲು ಎದುರಾಗುವುದೇ ಇಲ್ಲ.

# ಕೆರೆಯ ಅಂಗಳ

ನಮ್ಮ ನಾಡಿನಲ್ಲಿ ಬಹುಪಾಲು ಪ್ರದೇಶದಲ್ಲಿ ಕೆರೆಗಳಿದ್ದೇ ಇವೆ. ಇವು ಬಹಳಷ್ಟು ಮಟ್ಟಿಗೆ ಮಳೆಯ ಆಸರೆಯಿಂದಲೇ ತುಂಬಿ ತುಳುಕುವಂಥವು. ಇವುಗಳಲ್ಲಿ ಇದ್ದ ನೀರು ಬಿಟ್ಟಾಗ ಮಾತ್ರ ತೂಬುಗಳಲ್ಲಿ ನುಗ್ಗಿ ಕಾಲುವೆಗಳಲ್ಲಿ ಹರಿದು ಗದ್ದೆಗಳಿಗೆ ಹರಿದು ಭತ್ತ ವಗೈರೆ ಬೆಳೆಯಲು ಸಹಕಾರಿಯಾಗುತ್ತದೆ. ಸದರಿ ಕೆರೆಗಳ ಅಂಗಳ ಪ್ರದೇಶ ಎಲ್ಲರ ಕಣ್ಣಿಗೂ ಗೋಚರವಾಗಿರುವುದಾಗಿರುತ್ತವೆ. ಹಿಂದಿನ ಕಾಲದಲ್ಲಿ ಇವುಗಳಲ್ಲಿ ರೈತರು ಹೊಂಗೆ ಗಿಡಗಳನ್ನು ಬೆಳೆಸಿಕೊಂಡು ಫಸಲನ್ನು ಅನುಭವಿಸುತ್ತಿದ್ದರು. ಪಟೇಲ, ಶ್ಯಾನುಭೋಗರುಗಳ ಕಾಲದಲ್ಲಿ ಆ ಮರಗಳಿಗೂ ಸಹ ಕನಿಷ್ಠ ಕಂದಾಯವನ್ನು ವಸೂಲಿ ಮಾಡಲಾಗುತ್ತಿತ್ತು. 'ಹುಂಗೀ ಕಂದಾಯ' ಎಂದು ಒಂದು ಪಟ್ಟಿಯ ದಾಖಲೆಯೂ ಇರುತ್ತಿತ್ತು. ಗದ್ದೆಗಳಿರುವಂತೆಯೆ ಎಲ್ಲ ರೈತರಿಗೂ ಹೊಂಗೆ ಮರಗಳೂ ಇರುತ್ತಿದ್ದವು. ಹಕ್ಕಿನಿಂದಲೇ ರೈತರು ಅವನ್ನು ಅನುಭವಿಸುತ್ತಿದ್ದರು. ಹೊಂಗೆಸೊಪ್ಪನ್ನು ಸಹ ಹಸಿರುಗೊಬ್ಬರವಾಗಿ ಬಳಸುತ್ತಿದ್ದರು. ಆ ಮರಗಳ ಕೆಳಗೆ ಬೆಳೆದ ಹುಲ್ಲು ಎಲ್ಲರ ದನಗಳಿಗೂ ಮೇವಾಗಿ ದೊರೆಯುತ್ತಿತ್ತು. ಅವುಗಳ ಮಧ್ಯೆಯೇ ಕಾಲುದಾರಿ, ಬಂಡಿದಾರಿಗಳೂ ಇರುತ್ತಿದ್ದವು. ಯಾರಿಗೂ ಅಡ್ಡಿ ಆತಂಕಗಳಿರುತ್ತಿರಲಿಲ್ಲ. ಕಾಲಕ್ರಮದಲ್ಲಿ ಕೆರೆಕಟ್ಟೆಗಳ ದುರಸ್ತಿಗೆ ಗಮನ ಕಡಿಮೆಯಾಯಿತು. ಮಳೆಯ ಪ್ರಮಾಣದಲ್ಲಿ ಏರುಪೇರುಗಳುಂಟಾಗಿ ಕೆರೆಗಳು ತುಂಬುವುದು ಅಪರೂಪವಾಯ್ತು. ತುಂಬಿದರೂ ಹೆಚ್ಚುದಿನ ನೀರು ನಿಲ್ಲದೇ ಖಾಲಿಯಾಗತೊಡಗಿದವು. ಬೇಸಿಗೆ ಭತ್ತದ ಬೆಳೆಯಿಲ್ಲವಾಗಿ ಹಸಿರು ಗೊಬ್ಬರದ ಬಳಕೆಯೂ ನಿಂತಿತು. ಮರಗಿಡಗಳ ರಕ್ಷಣೆ ಕಡಿಮೆಯಾಗಿ ಮರಕಡಿಯುವಿಕೆ ಹೆಚ್ಚಾಗಿ ಬಂಜರು ಪ್ರದೇಶ ಕಾಣತೊಡಗಿತು. ರೈತರಲ್ಲೂ ಸ್ವಾರ್ಥ, ಅತಿಯಾಸೆ ಮೂಡುತ್ತ ಒತ್ತುವರಿ, ಅನಧಿಕೃತ ಸಾಗುವಳಿ ಪ್ರಾರಂಭವಾಗಿ ಅಂಗಳ ಕಿರಿದಾಗತೊಡಗಿತು.

**ಈ ನಿಟ್ಟಿನಲ್ಲಿ ಆತ್ಮಾವಲೋಕನಕ್ಕಾಗಿ ಕೆಲವು ಪ್ರಶ್ನೆಗಳು :**

1) ಕೆರೆಯಂಗಳ ಸರ್ಕಾರದ ಮೀಸಲು ಸ್ವತ್ತು. ಇದು ಎಂದೂ ಯಾರಿಗೂ ಮಂಜೂರಾಗದು. ಇದರಲ್ಲಿ ಬೆಳೆಯಿಡುವುದು ಅಕ್ರಮ. ಈ ಬಗ್ಗೆ ರೈತರೇಕೆ ಅರ್ಥಮಾಡಿಕೊಳ್ಳುತ್ತಿಲ್ಲ ?

2) ಕೆರೆಯಂಗಳ ಹಾಗೂ ನೀರನ್ನು ಬಳಸಿ ಬೆಳೆ ತೆಗೆಯುವುದು ಕಾನೂನು ರೀತ್ಯಾ ಅಪರಾಧ. ಈ ಕೃತ್ಯ ಮಾಡಬಾರದೆಂದು ರೈತರಿಗೆ ತಿಳುವಳಿಕೆ ನೀಡುವವರಾರು?

3) ಕಂದಾಯವನ್ನು ಕಟ್ಟದೆ, ಸಾರ್ವಜನಿಕರ ಅಸಮಾಧಾನಕ್ಕೂ ಕಾರಣವಾಗಿ ಅವರ ಸಂಚಾರಕ್ಕೂ ಅಡಚಣೆಯುಂಟುಮಾಡವುದು ಅನ್ಯಾಯವಲ್ಲವೆ?

4) ದನಕರುಗಳ ಮೇವಿಗೂ ಕೊರತೆಯುಂಟಾಗುವಂತೆ ತಾವೊಬ್ಬರೇ ಬೆಳೆಗಳನ್ನಿಟ್ಟುಕೊಂಡರೆ ಸಾರ್ವಜನಿಕರ ಶಾಪಕ್ಕೂ ಗುರಿಯಾಗಬೇಕಲ್ಲವೆ?

5) ಈ ಸ್ಥಿತಿಯಲ್ಲಿ ಸಹೃದಯರಾದ ರೈತರ ಕರ್ತವ್ಯವೇನು?

**ಕೆ.ಎಸ್. ಚಂದ್ರಶೇಖರಯ್ಯ**
ಚಾಂಪಲ್ಲಿ ಗ್ರಾಮ, ರೋಣೂರು ಅಂಚೆ
ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ-563135

**ವಿ.ಸೂ. ಓದುಗರು ಸಹ ತಾವು ನೋಡಿದ ಕೇಳಿದ, ಓದಿದ, ಘಟನೆ ಅದಕ್ಕೆ ಪೂರಕವಾದ ಪ್ರಶ್ನೆಗಳನ್ನು ಬರೆದು ಪ್ರಕಟಣೆಗೆ ಕಳುಹಿಸಬೇಕಾಗಿದೆ. ಆಯ್ಕೆಯಾಗಿ ಪ್ರಕಟವಾದ ಪ್ರಶ್ನೆಗಳಿಗೆ ರೂ. 500/- ಬಹುಮಾನ ನೀಡಲಾಗುವುದು.**

ಕಾವ್ಯ ವಿಕಾಸ

## ಪರಿಸರ ರಕ್ಷಣೆ

ಪರಿಸರ ರಕ್ಷಣೆ ಮಾಡುವ ಭಾರವು
ದೇಶದ ಜನತೆಯ ಮೇಲಿಹುದು
ಸುಂದರ ಪರಿಸರ ಸೊಬಗನು ಸವಿಯಲು
ಜನತೆಗೆ ಹೆಚ್ಚಿನ ಪಾಲಿಹುದು.....!

ಹೊಗೆಯನು ಕಾರುವ ಯಂತ್ರಗಳಿಂದಲೆ
ದೂಷಿತಗೊಳುವುದು ಪರಿಸರವು
ಹರಡುವ ಧೂಮವು ಲೇಪನವಾಗಲು
ಹಾನಿಯ ಪಡೆವುದು ಪರಿಕರವು....

ಬಗೆ ಬಗೆ ಯಂತ್ರದಿ ದೂಷಿತವಾದುದು
ನದಿಯೊಳು ಸೇರಲು ವಿಷಕಾರಿ
ನಂಜಿನ ನೀರನು ಕುಡಿಯುತಲಿದ್ದರೆ
ಬೇಗನೆ ಬರುವಳು ಹೆಮ್ಮಾರಿ...

ಕರ್ಕಶ ಶಬ್ದವ ಕೇಳುತಲಿದ್ದರೆ
ತಾಳದ ತೊಂದರೆ ಕಿವಿಗಳಿಗೆ
ಶಬ್ದದ ಮಲಿನತೆ ತಡೆಯುತಲಿದ್ದರೆ
ಸಂತಸ ದೊರೆವುದು ರಸಗಳಿಗೆ...

ಮರಗಳ ಕಡಿಯದೆ ಬೆಳಗುತಲಿದ್ದರೆ
ಪರಿಸರ ಇರುವುದು ಚೆನ್ನಾಗಿ
ಉತ್ತಮ ಗಾಳಿಯ ಸೇವನೆ ಮಾಡಲು
ನಡೆವುದು ಜೀವನ ಹೊನ್ನಾಗಿ...

ಪರಿಸರ ರಕ್ಷಣೆ ಮಾಡುವ ನೆಪದಲಿ
ನಡೆವುದು ಎಲ್ಲೆಡೆ ಭಾಷಣವು
ಪರಿಸರ ಅಂದವ ಹೆಚ್ಚಳ ಮಾಡಲು
ಎಲ್ಲರ ಬಾಳಿಗೆ ಭೂಷಣವು...

**ಎಂ.ಎಂ. ಸಂಗಣ್ಣನವರ**

ಹುಣಶೀಕಟ್ಟಿ-591153, ತಾ॥ ಬೈಲಹೊಂಗಲ, ಜಿ॥ ಬೆಳಗಾವಿ




# ಜಲಸಂಪನ್ಮೂಲ ಸಂಗ್ರಹಣೆ ಮತ್ತು ನಿರ್ವಹಣೆ



**ಪ್ರೊ. ಎ.ಎಚ್. ಮಾಸಾಪತಿ**
Mobile : 9343535229.

**ನೀರಿನ ಪ್ರಾಮುಖ್ಯತೆಯನ್ನು ಕುರಿತು, ವಿಶ್ವದಾದ್ಯಂತ ಅನೇಕ ಪ್ರಜ್ಞಾವಂತ ನಾಗರಿಕರು ಜಲ~ ಶಾಸ್ತ್ರಜ್ಞರು, ವಿಜ್ಞಾನಿಗಳು ಮತ್ತು ನ್ಯಾಯಾಲಯಗಳ ಉಲ್ಲೇಖನಗಳಿವೆ.**

ವಿಶ್ವಸಂಸ್ಥೆಯು 2003ನೇ ವರ್ಷವನ್ನು'ನೂತನ ಜಲ ವರ್ಷ' ಎಂದು ಪರಿಗಣಿಸಿದೆ. ನೀರಿನ ಸದ್ಬಳಕೆಗಾಗಿ, ನಗರ ಪ್ರದೇಶ ಮತ್ತು ಗ್ರಾಮೀಣ ಸಮುದಾಯಗಳಿಗೆ ಉಪಯುಕ್ತವಾದ ಸಲಹೆ/ಸೂಚನೆಗಳನ್ನು ನೀಡಲಾಗಿದೆ. ಜಲಸಂಪನ್ಮೂಲಗಳ ಬಳಕೆಯನ್ನು, ವೈಜ್ಞಾನಿಕ/ತಾಂತ್ರಿಕ ಮಾರ್ಗದರ್ಶನದಿಂದ ಪ್ರೇರಿತವಾಗಿ ಕೈಕೊಂಡರೆ; ವಿಕಾಸ ಪಥದಲ್ಲಿ ಒಂದು ಮಹತ್ವದ ದಾಖಲೆಯನ್ನು ನಿರ್ವಹಿಸಲು, ಸಾಧ್ಯವಾಗಬಹುದು. ಪ್ರಥಮ ಪಂಚವಾರ್ಷಿಕ ಯೋಜನೆಯ ಆರಂಭದ ಕಾಲದಿಂದಲೂ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು; 'ನೀರಾವರಿ ಸಾಮರ್ಥ್ಯ ನಿರ್ಮಾಣಕ್ಕೆ ಅಧಿಕ ಆದ್ಯತೆ ನೀಡಿವೆ. 1950–51ರಿಂದ 1999–2000 ವರೆಗಿನ ಅವಧಿಯಲ್ಲಿ ಸಣ್ಣ/ಮಧ್ಯಮ ನೀರಾವರಿ ಯೋಜನೆ ಮತ್ತು ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಯೋಜನೆಗಳಲ್ಲಿ; ಲಕ್ಷಾಂತರ ಕೋಟಿ ರೂ.ಗಳನ್ನು ಖರ್ಚುಮಾಡುವುದರ ಜೊತೆಗೆ, ಖಾಸಗಿ ಬಂಡವಾಳವನ್ನೂ ಸಹ; ವಿನಿಯೋಗಿಸಲಾಗಿದೆ.

2025ರ ಜನಸಂಖ್ಯಾಭಿವೃದ್ಧಿಯನ್ನು ಲಕ್ಷ್ಯದಲ್ಲಿಟ್ಟುಕೊಂಡು; ಇತರ ಬೆಳೆಗಳ ಉತ್ಪಾದನೆ ಮಾತ್ರವಲ್ಲದೇ, 350 ದಶಲಕ್ಷಕ್ಕಿಂತಲೂ ಹೆಚ್ಚಿನ ಗ್ರಾಮೀಣ ಹಣಕಾಸು ಸಂಸ್ಥೆಗಳು (RFIS) ಹಾಗೂ ಸರ್ಕಾರ ಕೈಗೊಳ್ಳುವ ಪ್ರಗತಿಪರ ಕ್ರಮಗಳಿಂದ, ನೀರಾರಿ ಬೇಸಾಯ ಮತ್ತು ಬೆಳೆಗಳ ಉತ್ಪಾದನೆಯಲ್ಲಿ ಏರಿಳಿತಗಳನ್ನು ಪ್ರತಿಬಂಧಿಸಿ; ಸ್ಥಿರತೆಯ ಸಾಧನೆಗಾಗಿ ಗಮನವನ್ನು ಕೇಂದ್ರೀಕರಿಸಬೇಕು. ಭವಿಷತ್ತಿನಲ್ಲಿ ನೀರಿಗಾಗಿ ಉಂಟಾಗುವಂತಹ ಅತ್ಯಧಿಕ ಬೇಡಿಕೆಯನ್ನು ನಿರ್ಲಕ್ಷಿಸಬಾರದು ಭಾರತದಲ್ಲಿ ಕೃಷಿಯು ಆರ್ಥಿಕ ವ್ಯವಸ್ಥೆ ಆಧಾರಸ್ಥಂಬವಾಗಿದೆ. ಈ ಕ್ಷೇತ್ರದಲ್ಲಿ ಉದ್ದೇಶಿತ ಅಭಿವೃದ್ಧಿ ದರ ಸಾಧನೆಯ ಧ್ಯೇಯವನ್ನು ಲಕ್ಷ್ಮದಲ್ಲಿಟ್ಟುಕೊಂಡು; ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು, ನೀರಾವರಿ ಸಾಮರ್ಥ್ಯದ ನಿರ್ಮಾಣಕ್ಕಾಗಿ; ಹೆಚ್ಚಿನ ಆದ್ಯತೆ ನೀಡಿವೆ. ಅದಲ್ಲದೆ, ಕೃಷಿಕ್ಷೇತ್ರದ ಸ್ವಾವಲಂಬನೆ, ಸಾಮಾಜಿಕ ನ್ಯಾಯ ಮತ್ತು ಆಧುನೀಕರಣಕ್ಕೆ ಒತ್ತು ನೀಡಲಾಗಿದೆ.

ಮಾನವ ಜನಾಂಗದ ನಾಗರಿಕತೆಯ ಇತಿಹಾಸದಲ್ಲಿ, ಜಲ–ಸಂಪನ್ಮೂಲಗಳಿಗೆ ವಿಶಿಷ್ಟವಾದ ಸ್ಥಾನವಿದೆ. ಅಮೌಲ್ಯವಾದ ನೈಸರ್ಗಿಕ–ಸಂಪನ್ಮೂಲವೆನಿಸಿರುವ ನೀರು ಸಕಲ ಜೀವರಾಶಿಗಳಿಗೆ ಜೀವನಾಧಾರವಾಗಿದೆ. ನೀರನ್ನು ವಿವೇಚನೆ, ವೈಜ್ಞಾನಿಕ ಪ್ರಜ್ಞೆ, ಸಾಮಾಜಿಕ/ನೈತಿಕ ಹೊಣೆಗಾರಿಕೆಯಿಂದ ಪ್ರೇರಿತರಾಗಿ ಬಳಕೆಮಾಡಬೇಕಾಗುತ್ತದೆ. ವಿವಿಧ ಜಲ–ಸಂಪನ್ಮೂಲ ಅಭಿವೃದ್ಧಿ ಕಾರ್ಯಕ್ರಮಗಳು, ಭವಿಷ್ಯತ್ತಿನ ಜನಾಂಗದ ಸಮೃದ್ಧಿಗೆ ಪ್ರೋತ್ಸಾಹನೆ ನೀಡಬೇಕು. ಕೃಷಿ ವಿಜ್ಞಾನ ಕೇಂದ್ರ, ಕೃಷಿ ವಿಶ್ವವಿದ್ಯಾಲಯ ಹಾಗೂ ಪ್ರಗತಿಪರ ಸಂಶೋಧನಾ ಸಂಸ್ಥೆಗಳು; ನೀರು ಬಳಕೆದಾರರ ಸಮುದಾಯಗಳನ್ನು ಜಾಗೃತಗೊಳಿಸಬೇಕು. ನೀರು ಬಳಕೆದಾರರ ಸಂಘ, ಪಂಚಾಯತ್ ರಾಜ್ ಸಂಸ್ಥೆ ಮತ್ತು ಗ್ರಾಮೀಣ ಹಣಕಾಸು ಸಂಸ್ಥೆಗಳಿಗೆ; ನೀರಿನ ಸೂಕ್ತವಾದ ಬಳಕೆಯ ಬಗೆಗೆ ತರಬೇತಿ ನೀಡಲು, ಕ್ರಿಯಾಶೀಲವಾದ ಯೋಜನೆಯನ್ನು ರೂಪಿಸಬೇಕು.

**ಜಲ–ಸಾಕ್ಷರತೆ Water Literacy**

ಹಿಂದುಳಿದ ರಾಷ್ಟ್ರಗಳ ಅನೇಕ ಭಾಗಗಳಲ್ಲಿ, ನೀರು ಸರಬರಾಜು ಸಮಸ್ಯೆಯು; ಗಂಭೀರ ಸ್ವರೂಪ ಹೊಂದಿದೆ. ಯಾವುದೇ ಗ್ರಾಮದ ಎರಡೂವರೆ (2.5) ಕಿ.ಮೀ. ವ್ಯಾಪ್ತಿಯಲ್ಲಿ ಜಲಸಂಪನ್ಮೂಲ ಇಲ್ಲದಿದ್ದರೆ; ಅದನ್ನು 'ಜಲಮೂಲ ರಹಿತ ಗ್ರಾಮ' ಎಂದು, ಕರೆಯಲಾಗುತ್ತದೆ. ಇಂತಹ ಪ್ರದೇಶದ ಮಹಿಳೆಯರು ಕುಡಿಯುವ ನೀರು ತರಲು, ದೊಡ್ಡ ಕೊಡಗಳನ್ನು ಹೊತ್ತುಕೊಂಡು; ಕೆಲವು ಕಿ.ಲೋ. ಮೀಟರ್‌ಗಳಷ್ಟು ದೂರದ ದಾರಿಯನ್ನು ಶ್ರಮಿಸಬೇಕಾಗುತ್ತದೆ. ಗೃಹಕೃತ್ಯ, ಅಡುಗೆಯ ಕಾರ್ಯ, ನೈರ್ಮಲ್ಯ ಸಂರಕ್ಷಣೆ, ಸ್ನಾನ, ಬಟ್ಟೆ/ಪಾತ್ರೆ ತೊಳೆಯುವಿಕೆ, ದನಕರು ಮತ್ತು ಮಕ್ಕಳ ಪಾಲನೆ ಪೋಷಣೆಗಾಗಿ ನೀರು ತರಲು; ಗ್ರಾಮೀಣ ಮಹಿಳೆಯರು ನಿರಂತರವಾದ ಹೋರಾಟ ನಡೆಸುತ್ತಾರೆ. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಶೇಕಡಾ 75ಕ್ಕಿಂತಲೂ

ಹೆಚ್ಚು ಮಹಿಳೆಯರು ಹಾಗೂ ಮಕ್ಕಳು, ಜಲ–ಸಂಬಂಧಿತ ರೋಗಗಳಿಂದ ಪೀಡಿತರಾಗುವುದರಿಂದ; ಅವರ ಮರಣದ ಪ್ರಮಾಣದಲ್ಲಿ ಗಮನಾರ್ಹವಾದ ಏರಿಕೆಯನ್ನು ಕಾಣಬಹುದಾಗಿದೆ. ದೂರದ ಸ್ಥಳದಿಂದ ನೀರು ತರುವ ಚಟುವಟಿಕೆಗಳು, ಮಹಿಳೆಯರ ದೈಹಿಕ/ಮಾನಸಿಕ ಶಕ್ತಿ ಮತ್ತು ಸಮಯದ ಮೇಲೆ ದುಷ್ಪರಿಣಾಮ ಬೀರುತ್ತವೆ. ಅವರು ಶಿಕ್ಷಣ–ಕೌಶಲ್ಯಾಭಿವೃದ್ಧಿ ಹಾಗೂ ಸೂಕ್ತವಾದ ಉದ್ಯೋಗಾವಕಾಶಗಳಿಂದ ವಂಚಿತರಾಗುತ್ತಾರೆ.

ನೀರು ಸರಬರಾಜು ಯೋಜನೆಯನ್ನು ಕುರಿತು, ಮಹಿಳೆಯರ ಸಹಮತಿ, ಹೊಸ ಜಲ–ಸಂಪನ್ಮೂಲಗಳ ಅನುಷ್ಠಾನದಲ್ಲಿ ಮಹಿಳೆಯರ ಪ್ರಾತಿನಿಧ್ಯ, ನೀರಿನ ನೂತನ ಸೌಲಭ್ಯಗಳ ಬಳಕೆಯಲ್ಲಿ ಮಹಿಳೆಯರ ಆಸಕ್ತಿ, ನೀರು ಸಂರಕ್ಷಣೆ/ನಿರ್ವಹಣೆಯಲ್ಲಿ ಮಹಿಳೆಯರ ಕ್ರಿಯಾಶೀಲತೆ, ನೀರಿನ ಮೂಲ ಮತ್ತು ಬಳಕೆಯ ಬಗೆಗಿನ ಸಾಂಸ್ಕೃತಿಕ ಸಮಸ್ಯೆಗಳಿಗೆ ಪರಿಹಾರ, ನೀರು ನಿರ್ವಹಣೆಯಲ್ಲಿ ಕುಟುಂಬದ ಸದಸ್ಯರಿಗೆ ಯೋಗ್ಯವಾದ, ತರಬೇತಿ ಇತ್ಯಾದಿ ಮಹತ್ವದ ಅಂಶಗಳ ಮೇಲೆ ಲಕ್ಷ್ಯವನ್ನು ಕೇಂದ್ರೀಕರಿಸಬೇಕು.

ನೀರು ನಿರ್ವಹಣಾ ಕ್ಷೇತ್ರದಲ್ಲಿ, ಮಹಿಳಾ ಸಬಲೀಕರಣ ಸಾಧನೆಗಾಗಿ, ಜಲ–ಸಾಕ್ಷರತೆಯು ಅಗತ್ಯವಾಗಿದೆ. ಇಂತಹ ಮಹತ್ವದ ರಂಗದಲ್ಲಿ, ಗೃಹವಿಜ್ಞಾನಿಗಳು ವಿಭಿನ್ನ ಪಾತ್ರಗಳನ್ನು ನಿರ್ವಹಿಸಲು ಸಾಧ್ಯವಿದೆ. ಅನೌಪಚಾರಿಕ ಶಿಕ್ಷಕ, ಶಿಕ್ಷಣತಜ್ಞ, ಸಂಶೋಧಕ, ಸಾಮಾಜಿಕ ಕಾರ್ಯಕರ್ತ, ಸಂಪರ್ಕ ಸಾಧಕ, ಸಮನ್ವಯಕಾರ, ಸಮೀಕ್ಷ ಮುಂತಾದ ಪಾತ್ರಗಳ ಮೂಲಕ – 'ಜಲ–ಜಾಗೃತಿ'ಯನ್ನು ಬೆಳೆಸಲು ಅವಕಾಶಗಳಿವೆ. ಗ್ರಾಮೀಣ ಮಟ್ಟದಲ್ಲಿ, ಜಲ–ಸಂಪನ್ಮೂಲ ನಿರ್ವಹಣೆ, ಪರ್ಯಾಯ ನೀರಿನ ಮೂಲಗಳ ಶೋಧ, ಜಲ ಸಂಗ್ರಹಣಾ ವಿದಾನಗಳ ತಿಳುವಳಿಕೆ ಹಾಗೂ ಶುದ್ಧನೀರಿನ ಮಹತ್ವದ ಬಗೆಗೆ ವ್ಯಾಪಕ ಸ್ವರೂಪ ಜಾಗೃತಿಯನ್ನು ವಿಸ್ತರಿಸಬೇಕಾಗಿದೆ. ನೀರು ಸಂಗ್ರಹಣೆ, ಶುದ್ಧೀಕರಣ ಮತ್ತು ನಿರ್ವಗಣೆಗೆ ಸಂಬಂಧಿಸಿದ ಕಾರ್ಯಕ್ರಮಗಳಲ್ಲಿ; ಮಹಿಳೆಯರು ಸೂಕ್ತವಾದ ತರಬೇತಿಯನ್ನು ಪಡೆಯಬೇಕು.

**ನೀರು ನಿರ್ವಹಣಾ ಕೌಶಲ್ಯಗಳು**

**(Water Management Skills )**

ನೀರು ನಿರ್ವಹಣಾ ಪ್ರಕ್ರಿಯೆಯಲ್ಲಿ ಹಲವಾರು ಮಹತ್ವದ ಕೌಶಲ್ಯಗಳನ್ನು ಗುರುತಿಸಿ, ಅಭಿವೃದ್ಧಿಪಡಿಸಬೇಕು:–

1) ಗೃಹ ವಿಜ್ಞಾನಿಗಳು, ನೀರಾವರಿ ತಜ್ಞರು, ಅಂತರ್ಜಲ ಪರಿಣಿತರು, ಕೃಷಿ ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರು ಹಾಗೂ ಸಂಶೋಧಕರು; ನೀರು ನಿರ್ವಹಣಾ ಕ್ಷೇತ್ರದಲ್ಲಿ ನಿರ್ಲಕ್ಷಿತವಾದ ವಿಷಯಗಳನ್ನು ಕುರಿತು ವ್ಯವಸ್ಥಿತವಾದ ಅಧ್ಯಯನ ಕೈಗೊಳ್ಳಬೇಕು. ನೀರು ತರುವ ಕಾರ್ಯದಲ್ಲಿ ಮಹಿಳೆಯರು ಅನುಭವಿಸುತ್ತಿರುವ ಕಷ್ಟ–ಕಾರ್ಪಣ್ಯ, ಕಾಲಹರಣ, ಜಲ–ಜನ್ಯ ರೋಗಗಳ ಸಮಸ್ಯೆ, ನೀರಿನ ಪುನರ್ಬಳಕೆಯ ತಿಳುವಳಿಕೆ, ನೀರು ನಿರ್ವಹಣಾ ಪದ್ಧತಿಗಳನ್ನು ಕಂಡುಹಿಡಿಯಲು ಸಮೀಕ್ಷೆ, ಜಲಶುದ್ಧೀಕರಣ ಘಟಕಗಳ ಸ್ಥಾಪನೆ / ಅನ್ವಯದ ಬಗೆಗಿನ ಕ್ರಿಯಾಯೋಜನೆ, ದೇಶಿಯ ನೀರು ಶುದ್ಧೀಕರಣಗಳ ವಿಧಾನಗಳಿಗೆ ಪ್ರೋತ್ಸಾಹನೆ, ನೀರಿನ ನೂತನ ಮೂಲಗಳ ಶೋಧನೆ, ನೀರು ನಿರ್ವಹಣೆಯ ಸೂಕ್ತವಾದ ಪದ್ಧತಿಗಳನ್ನು ಕುರಿತು ಕಾರ್ಯಾಗಾರ ಮತ್ತು ಪ್ರಾತ್ಯಕ್ಷಿಕೆ, ಪರಿಸರ ಶಿಕ್ಷಣ ಪ್ರಸಾರ ಕಾರ್ಯದಲ್ಲಿ ಮಾಧ್ಯಮಗಳ ಸಮರ್ಥವಾದ ಬಳಕೆ, ಮುಂತಾದ ವಿಷಯಗಳಲ್ಲಿ ಉನ್ನತ ಮಟ್ಟದ ಸಂಶೋಧನೆಗಳನ್ನು ಕೈಗೊಳ್ಳಬೇಕು.
2) ಅತ್ಯುತ್ತಮ ನೀರು ಸರಬರಾಜು ಯೋಜನೆಗಳ ರಚನೆ, ಜಲಶುದ್ಧೀಕರಣ ಸ್ಥಾವರಗಳ ಅಭಿವೃದ್ಧಿ, ಪರ್ವತ ಪ್ರದೇಶಗಳಲ್ಲಿ ನೀರು ಸರಬರಾಜು ತಾಂತ್ರಿಕತೆಯ ಬೆಳವಣಿಗೆ, ಸಮುದ್ರದ ನೀರನ್ನು ಕುಡಿಯಲು ಸಮರ್ಥಗೊಳಿಸುವ ಸಂಶೋಧನೆ, ಜಲ–ಭಾರ ವಿಶ್ಲೇಷಣೆ, ಪ್ರಧಾನ ಕೊಳವೆಗಳಿಂದ ನೀರು ಹರಿಸುವಿಕೆ ಇತ್ಯಾದಿ ಕ್ಷೇತ್ರಗಳಲ್ಲಿ ಆಳವಾದ ಅಧ್ಯಯನಗಳು ನಡೆಯಬೇಕು.
3) ಕುಡಿಯುವ ನೀರಿನ ಯೋಜನೆಗಳ ರಚನೆ ಮತ್ತು ನಿರ್ವಹಣೆಯನ್ನು ಖಾಸಗಿ ವಲಯಕ್ಕೆ ನೀಡಲು ಪ್ರೋತ್ಸಾಹಿಸಬೇಕೆಂದು, ಕೆಲವರು ಸಮರ್ಥಿಸುತ್ತಾರೆ. ಆದರೆ, ಇಂತಹ ದೃಷ್ಟಿಕೋನಗಳು ವಿವಾದಗ್ರಸ್ತವಾಗಿವೆ. ನೀರು ಪೂರೈಕೆಯ ಯೋಜನೆಗಳನ್ನು ಖಾಸಗೀಕರಣಗೊಳಿಸುವುದರಿಂದ, ಸಾರ್ವಜನಿಕರ ಹಿತಾಸಕ್ತಿಗೆ ಗಂಡಾಂತರವಿದೆ.
4) ಕುಡಿಯುವ ನೀರಿನ ಯೋಜನೆಗಳ ನಿರ್ವಹಣೆಯಲ್ಲಿ, 'ಗ್ರಾಮೀಣ ನೀರು ಸಮಿತಿ'ಗಳ ಕ್ರಿಯಾಶೀಲತೆಯನ್ನು ಗುರುತಿಸಬೇಕು. ಈ ಯೋಜನೆಗಳಲ್ಲಿ ಫಲಾನುಭವಿಗಳ ಸಹಭಾಗಿತ್ವಕ್ಕೆ ಅವಕಾಶ ನೀಡಬೇಕು.
5) ನೀರು ಸರಬರಾಜು ಹಾಗೂ ನೀರು ನಿರ್ವಹಣೆಯ ಹೊಣೆಗಾರಿಕೆಯನ್ನು ನಗರ ಮತ್ತು ಗ್ರಾಮೀಣ ಪ್ರದೇಶಗಳ ಸ್ಥಳೀಯ ಸಂಸ್ಥೆಗಳಿಗೆ ಕೊಡಬೇಕು. ಸರ್ಕಾರಿ ಸಂಸ್ಥೆಗಳು ಇಂತಹ ಯೋಜನೆಗಳಿಗೆ ತಾಂತ್ರಿಕ ಮಾರ್ಗದರ್ಶನ ಮಾಡಬೇಕು.
6) ನೀರು ಪೂರೈಕೆಯ ಹೊಸ ಯೋಜನೆಗಳನ್ನು ಕೈಗೊಳ್ಳುವಾಗ; ಪರಿಸರ ನೈರ್ಮಲ್ಯ ಹಾಗೂ ನೀರು ಸರಬರಾಜಿನ ನಡುವಿನ ವ್ಯತ್ಯಾಸವನ್ನು ಸ್ಪಷ್ಟಪಡಿಸಬೇಕು. ಈ ಪ್ರಯತ್ನದಲ್ಲಿ, ಅತ್ಯಲ್ಪ ವೆಚ್ಚದ ವೈಜ್ಞಾನಿಕ/ ತಾಂತ್ರಿಕ ಅಂಶಗಳನ್ನು ಅನ್ವಯಿಸಲು; ಆದ್ಯತೆ ನೀಡಬೇಕು.
7) ನೀರಿನ ಬೇಡಿಕೆಗೆ ಅನುಸಾರವಾಗಿ, ನೀರು ಸರಬರಾಜು, ಸೇವೆಯ ಗುಣಮಟ್ಟದ ಸಂರಕ್ಷಣೆ, ನಿರ್ವಹಣೆ, ಅನುಷ್ಠಾನ ಮತ್ತು ಹಣಕಾಸಿನ ಬಗೆಗೆ; ಬಳಕೆದಾರರಿಗೆ ಮಾಹಿತಿ ಪೂರೈಸಬೇಕು.
8) ಕುಡಿಯುವ ನೀರು ಸರಬರಾಜು ಯೋಜನೆಗಳು ನೀರು ಪೂರೈಕೆಗೆ ಪ್ರೋತ್ಸಾಹನಕಾರಕವಾಗಬೇಕು. ವೈವಿಧ್ಯಮಯ ಬಳಕೆಗೆ ಲಭ್ಯವಾಗುವ ನೀರನ್ನು ಸೂಕ್ತವಾಗಿ ಉಪಯೋಗಿಸಲು ಒತ್ತುನೀಡಬೇಕು.

9) ನೀರು ನಿರ್ವಹಣೆಯಲ್ಲಿ ಮಹಿಳೆಯರ ವಿಶಿಷ್ಟವಾದ ಪಾತ್ರವನ್ನು ಗುರುತಿಸಿ; ಈ ಕ್ಷೇತ್ರದಲ್ಲಿ ಮಹಿಳಾ ಸಬಲೀಕರಣಕ್ಕೆ ಆದ್ಯತೆ ನೀಡಬೇಕು. ನೀರಿಗೆ ಸಂಬಂಧಿಸಿದ ಪ್ರತಿಯೊಂದು ಯೋಜನೆಯಲ್ಲಿ, ಮಹಿಳೆಯರ ಪರಿಶ್ರಮನ್ನು ಕಡಿಮೆ ಮಾಡಿ; ನೀರಿನ ಮರು ಬಳಕೆ ಹಾಗೂ ನೀರು ಶುದ್ಧೀಕರಣದ ಬಗೆಗಿನ ವೈಜ್ಞಾನಿಕ ದೃಷ್ಟಿಕೋನವನ್ನು ಬೆಳೆಸಬೇಕು. ಇಂತಹ ಕ್ರಮದಿಂದ, ನೀರು ನಿರ್ವಹಣೆಯಲ್ಲಿ ನಿರ್ಧಾರ ಕೈಗೊಳ್ಳಲು; ಮಹಿಳೆಯರು ಸಮರ್ಥರಾಗುವರು.

10) ನೀರು ಸರಬರಾಜು ನಿರ್ವಹಣಾ ವ್ಯವಸ್ಥೆಯ ಹಲವಾರು ಲೋಪದೋಷಗಳನ್ನು ಪ್ರತಿಬಂಧಿಸಬೇಕು. ನೀರು ಸೋರಿಕೆಯನ್ನು ತಡೆಗಟ್ಟಲು; ಯೋಗ್ಯವಾದ ಕ್ರಮಗಳನ್ನು ಕೈಗೊಳ್ಳಬೇಕು.

11) ನೀರಿನ ಲಭ್ಯತೆ, ಪ್ರಾಥಮಿಕ ಆರೋಗ್ಯ ಸಂರಕ್ಷಣೆ, ನೈರ್ಮಲ್ಯ ಸೌಲಭ್ಯಗಳ ಪೂರೈಕೆ, ಮಹಿಳಾ ಕಲ್ಯಾಣ ಮುಂತಾದ ಪ್ರಧಾನ ಪರಿಕಲ್ಪನೆಗಳಿಗೆ ಆದ್ಯತೆ ಕೊಡಬೇಕು.

12) ಬಡವರು, ರೈತರು, ಕಾರ್ಮಿಕರು, ಶೋಷಿತರು, ವಿಕಲಚೇತನರು ಮತ್ತು ದುರ್ಬಲ ಸಮುದಾಯಗಳು; ನೀರು ಪೂರೈಕೆಗೆ ಸಂಬಂಧಿಸಿದಂತೆ, ನೀರಿನ ದರ ವಸೂಲಾತಿಯಲ್ಲಿ ವಿನಾಯಿತಿ ಪಡೆಯಬೇಕು.

**ಮಳೆ ನೀರು ಕೊಯ್ಲು / ಸುಗ್ಗಿ (Rain Water Harvesting)**

ನೀರಿನ ಪ್ರಾಮುಖ್ಯತೆಯನ್ನು ಕುರಿತು, ವಿಶ್ವದಾದ್ಯಂತ ಅನೇಕ ಪ್ರಜ್ಞಾವಂತ ನಾಗರಿಕರು ಜಲ-ಶಾಸ್ತ್ರಜ್ಞರು, ವಿಜ್ಞಾನಿಗಳು ಮತ್ತು ನ್ಯಾಯಾಲಯಗಳ ಉಲ್ಲೇಖನಗಳಿವೆ. ನದಿ ಹಾಗೂ ಸಮುದ್ರದ ನೀರಿನಿಂದ ಆವಿಯಾಗಿ, ಆಕಾಶ ಪ್ರವೇಶಿಸುವ ಮೋಡಗಳು ಮಳೆಯ ರೂಪದಲ್ಲಿ ಧರೆಗಿಳಿದು ಬರುತ್ತವೆ ಎಂಬ ಸಂಗತಿಯು, ಸರ್ವವಿಧಿತವಾಗಿದೆ. ನೀರು ಪುನರ್ ಉತ್ಪತ್ತಿ ಆದರೂ ಸಹ, ಅದು ನಿಶ್ಚಿತ ಪ್ರಮಾಣದ ಸಂಪನ್ಮೂಲವಾಗಿದೆ. ಹಿಂದಿನ ಶತಮಾನಗಳಿಗಿಂತಲೂ ಅತ್ಯಧಿಕವಾಗಿ ಕಳೆದ ಒಂದು ಶತಮಾನದ ಅವಧಿಯಲ್ಲಿ; ನೀರಿನ ವಿಪರೀತ ಬಳಕೆಯಾಗಿದೆ. ಅವ್ಯವಸ್ಥಿತ ಔದ್ಯೋಗೀಕರಣದಿಂದ ಜಲ-ಸಂಪನ್ಮೂಲಗಳು ಗಂಡಾಂತರದಲ್ಲಿ ಸಿಲುಕಿವೆ; ಪೃಥ್ವಿಯ ಜಲಚಕ್ರ ವ್ಯವಸ್ಥೆಯು ನೀರಿನ ದುರ್ಬಳಕೆ ಮತ್ತು ಅಪವ್ಯಯದಿಂದ, ಪ್ರಥಮ ಔದ್ಯೋಗೀಕರಣದಿಂದ ಇಂಗಾಲದ ಉತ್ಪತ್ತಿ ಹೆಚ್ಚಾಗಿ ಜಲಚಕ್ರವು ಶಿಥಿಲವಾಗುತ್ತದೆ. ಆದುದರಿಂದ, ಸಮುದ್ರತೀರದ ಪ್ರದೇಶಗಳು (ಅರ್ಥಾತ್, ಇಜಿಪ್ತ್, ಬಾಂಗ್ಲಾದೇಶ, ಮಾಲ್ಡೀವ್ ಇತ್ಯಾದಿ) ಜಲಸಮಾಧಿ ಹೊಂದುವ ಗಂಡಾಂತರವಿದೆ.

ಭಾರತದಲ್ಲಿ ಮಳೆ ನೀರು, ಸಂಗ್ರಹಿಸುವ ಪದ್ಧತಿಗೆ ಶತಮಾನಗಳ ಇತಿಹಾಸವಿದೆ. ಅತಿ ಕಡಿಮೆ ಮಳೆ ಬೀಳುವ ರಾಜ್ಯಗಳಲ್ಲಿ, 'ಮಳೆ ನೀರಿನ ಕೊಯಿಲು' ವಿಧಾನವನ್ನು ಅನುಸರಿಸಲಾಗುತ್ತದೆ. ಇಂತಹ ಪದ್ಧತಿಯು ಪಶ್ಚಿಮ ರಾಜಸ್ಥಾನ್, ಗುಜರಾತ್ ಇತ್ಯಾದಿ ರಾಜ್ಯಗಳಲ್ಲಿ ಅಸ್ತಿತ್ವದಲ್ಲಿದೆ. ಮನೆಯ ಛಾವಣಿಯಿಂದ ಬಂದ ನೀರನ್ನು, ಮನೆಯ ಕೆಳಭಾಗದಲ್ಲಿ ನಿರ್ಮಿಸಿದ, 'ಜಲ ಸಂಗ್ರಾಹದ ಕೊಠಡಿ / ತೊಟ್ಟಿ'ಯಲ್ಲಿ, ಸಂಗ್ರಹಿಸಲಾಗುತ್ತದೆ. ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿತವಾದ ತೊಟ್ಟಿಗಳನ್ನು 'ವಾಂಕಾ' ಎಂದು, ಕರೆಯಲಾಗಿದೆ. ನೀರಿನ ಇತರ ಮೂಲಗಳು ವಿಫಲವಾದ ಸಂದರ್ಭದಲ್ಲಿ, ಟಾಂಕಾದಲ್ಲಿ ಸಂಗ್ರಹಿಸಿದ ನೀರನ್ನು ಬಳಕೆ ಮಾಡುತ್ತಾರೆ. ವಿಶಾಲವಾದ ಮರುಭೂಮಿಯಲ್ಲಿ ಲಭ್ಯವಾಗುವ ಅಲ್ಪ ಪ್ರಮಾಣದ ಮಳೆ ನೀರನ್ನು ಸಂಗ್ರಹಿಸದಿದ್ದರೆ; ಅದು ಉಸುಕಿನಲ್ಲಿ ಅತಿ ಶೀಘ್ರವಾಗಿ ಇಂಗಿಬಿಡುತ್ತದೆ. ಸಾಮಾನ್ಯವಾಗಿ ಪರ್ವತ ಪ್ರದೇಶದ ಗ್ರಾಮ ಹಾಗೂ ನಗರಗಳು ಬೆಟ್ಟದ ಮೇಲಿರುವುದರಿಂದ, ಸಾಕಷ್ಟು ಪ್ರಮಾಣದಲ್ಲಿ ಮಳೆ ಸುರಿದರೂ ಸಹ; ಮಳೆನೀರು ಬಹು ಬೇಗನೆ ಹರಿದು ಹೋಗುತ್ತದೆ. ಆದುದರಿಂದ, ಗುಡ್ಡಗಾಡು ಪ್ರದೇಶದ ಮನೆಗಳ ಛಾವಣಿಯಿಂದ, ಮಳೆನೀರನ್ನು ಸಂಹಿಸಲಾಗುತ್ತದೆ. ಮರುಭೂಮಿಯಲ್ಲಿ 'ಖಂಡ್' ಎಂಬ ಭಾವಿಗಳಲ್ಲಿ ಹಲವಾರು ಸಾವಿರ ಲೀಟರ್‌ಗಳಷ್ಟು ಮಳೆನೀರನ್ನು ಸಂಗ್ರಹಿಸಲಾಗುತ್ತದೆ. ಸುಮಾರು 20 ಮೀಟರ್ ವ್ಯಾಸದ ವೃತ್ತದಲ್ಲಿ ಬೀಳುವಂತಹ ಮಳೆನೀರು; ಒಳಬದಿಗೆ ನಿರ್ಮಿಸಿದಂತಹ ಮುಚ್ಚಳವಿರುವ ಭಾವಿಯಲ್ಲಿ ಸಂಗ್ರಹವಾಗುತ್ತದೆ. ಇಂತಹ ನೀರನ್ನು ಪ್ರಾಣಿ/ಪಕ್ಷಿ, ನೈಸರ್ಗಿಕ ಮತ್ತು ಮಾನವಜನ್ಯ ಮಾಲಿನ್ಯದಿಂದ ಸಂರಕ್ಷಿಸಲಾಗುತ್ತದೆ. ಎರಡು ಲಕ್ಷ ಲೀಟರ್ ಸಾಮರ್ಥ್ಯ ಹೊಂದಿರುವ ಬೃಹದಾಕಾರದ ಭಾವಿಗಳು ಅಧಿಕ ಪ್ರಚಲಿತವಾಗಿವೆ.

ಜಾಗತಿಕ ಸರ್ಕಾರದ ದೃಷ್ಟಿಕೋನದ ಪ್ರಕಾರ, ಪ್ರತಿದಿನ ಒಬ್ಬ ವ್ಯಕ್ತಿಗೆ 40ರಿಂದ 50 ಲೀಟರ್ ನೀರಿನ ಅಗತ್ಯವಿದೆ. ಆದರೆ, ಹಲವಾರು ಹಿಂದುಳಿದ ದೇಶಗಳಲ್ಲಿ, 50 ಲೀಟರ್ ನೀರನ್ನು ಒಂದು ವಾರದವರೆಗೆ ಬಳಕೆ ಮಾಡಬೇಕಾಗುತ್ತದೆ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ, ಓರ್ವ ವ್ಯಕ್ತಿಯು ಪ್ರತಿ ದಿನ 300 ರಿಂದ 400 ಲೀಟರ್ ನೀರನ್ನು ಬಳಕೆ ಮಾಡುತ್ತಾನೆ. ಭಾರತದಂತಹ ದೇಶದಲ್ಲಿ, ಒಂದು ಸರ್ವಸಾಮಾನ್ಯವಾದ 'ಆಶ್ರಯ ಮನೆ'ಗೆ 6 ಅಡಿ ಎತ್ತರ/ಅಗಲದ ತೊಟ್ಟಿ ನಿರ್ಮಿಸಿದರೆ; 10 ಸಾವಿರ ಲೀಟರ್‌ಗಳಷ್ಟು ಮಳೆ ನೀರನ್ನು ಸಂಗ್ರಹಿಸಲು ಸಾಧ್ಯವಿದೆ. ಆದರೆ, ತೊಟ್ಟಿ ನಿರ್ಮಾಣದ ವೆಚ್ಚವು ಮೊದಲಿಗಿಂತಲೂ ಅಧಿಕವಾಗಿದೆ. ಗ್ರಾಮೀಣ ಮತ್ತು ನಗರ ಪ್ರದೇಶದ ಕಡುಬಡವರು 40ರಿಂದ 50 ಸಾವಿರ ರೂ.ಗಳನ್ನು ಖರ್ಚುಮಾಡಿ; ನೀರಿನ ತೊಟ್ಟಿಯನ್ನು ನಿರ್ಮಿಸಲು ಅಸಮರ್ಥರಾಗಿದ್ದಾರೆ.

**ರಚನಾತ್ಮಕ ಸಲಹೆಗಳು**

ಅಂತರ-ರಾಷ್ಟ್ರೀಯ 'ಜಲ ಮತ್ತು ಪರಿಸರ ಸಮಾವೇಶ' (ಡಬ್ಲಿನ್ 1992) ಹಾಗೂ ಸಂಯುಕ್ತ ರಾಷ್ಟ್ರ ಸಂಘದ, 'ಪರಿಸರ ಮತ್ತು ಅಭಿವೃದ್ಧಿ ಸಮ್ಮೇಳನದಲ್ಲಿ ನೀರಿನ ಸೂಕ್ತವಾದ ಬಳಕೆಗಾಗಿ ಒತ್ತು ನೀಡಲಾಗಿದೆ. (ರಿಯೊಡಿ ಜನೆರೊ 1992)

1) ಭೂಮಂಡಲದಲ್ಲಿ ಜಲಸಂಪತ್ತು ಅಪಾರವಾಗಿರುವಂತೆ ಕಂಡುಬಂದರೂ ಸಹ; ಸಿಹಿ ನೀರಿನ ಲಭ್ಯತೆಯು

ಶೇಕಡಾ 1 ರಷ್ಟು ಮಾತ್ರ ಇದೆ. ಶೇಕಡಾ 2.1ರಷ್ಟು ಸಿಹಿನೀರು, ಉತ್ತರ/ದಕ್ಷಿಣ ಧ್ರುವಗಳ ಹಿಮಬಂಡೆ ಹಾಗೂ ಮಂಜು-ನದಿಗಳ ರೂಪದಲ್ಲಿದೆ. ಬಳಕೆಗೆ ಯೋಗ್ಯವಾದ ಸಿಹಿನೀರು ಅತ್ಯಲ್ಪ ಪ್ರಮಾಣದಲ್ಲಿದೆ. ಆದುದರಿಂದ ಜಲ-ಸಂಪನ್ಮೂಲ ಸದ್ಬಳಕೆಯ ತಂತ್ರಜ್ಞಾನದ ಬಗೆಗಿನ ತಿಳುವಳಿಕೆಯನ್ನು ವಿಸ್ತಾರಗೊಳಿಸಬೇಕು.

2) ನಗರಪ್ರದೇಶಗಳಲ್ಲಿ, ಕುಡಿಯುವ ನೀರಿನ ಅಪವ್ಯಯವನ್ನು ವ್ಯಾಪಕ ಸ್ವರೂಪದಲ್ಲಿ ಕಾಣಬಹುದಾಗಿದೆ. ಕೋಟ್ಯಾಂತರ ರೂಪಾಯಿ ವೆಚ್ಚದಲ್ಲಿ ದೂರದ ನದಿಗಳಿಂದ ನೀರನ್ನು ತಂದು, ಸಾರ್ವಜನಿಕರ ಬೇಡಿಕೆಯನ್ನು ಸಮರ್ಪಕವಾಗಿ ಪೂರೈಸುವ ಬದಲು; ಶ್ರೀಮಂತ ಉದ್ದಿಮೆದಾರರು ಮತ್ತು ಜಲ-ಚೋರರಿಗೆ ಸಾಕಷ್ಟು ಅವಕಾಶ ಪ್ರಾಪ್ತವಾಗಿದೆ. ಇಂತಹ ಜಲ ಶೋಷಣೆಯನ್ನು ತಡೆಗಟ್ಟಲು ಸೂಕ್ತವಾದ ಶಾಸನವನ್ನು ರೂಪಿಸಬೇಕು.

3) ಭಾರತದ ಹಲವಾರು ಪ್ರದೇಶಗಳಲ್ಲಿ, ಶುದ್ಧವಾದ ಕುಡಿಯುವ ನೀರಿನ ದುರ್ಬಳಕೆ ಆಗುತ್ತದೆ. ಜಾನುವಾರುಗಳ ಮೈತೊಳೆಯಲು, ಅಡುಗೆಯ ಪಾತ್ರೆ ಹಾಗೂ ವಿವಿಧ ವಾಹನಗಳ ಸ್ವಚ್ಛತೆ ಮೊದಲಾದ ಕಾರ್ಯಗಳಿಗಾಗಿ; ಕುಡಿಯುವ ನೀರನ್ನು ಉಪಯೋಗಿಸಲಾಗುತ್ತದೆ. ಇಂತಹ ಪ್ರವೃತ್ತಿಯನ್ನು ನಿಯಂತ್ರಿಸಬೇಕು.

4) ಕೆಲವು ಪ್ರಗತಿಪರ ಸಂಸ್ಥೆಗಳನ್ನು ಹೊರತುಪಡಿಸಿ; ಭಾರತದ ಹಲವಾರು ಕಂಪನಿಗಳು ನೀರಿನ ಪುನರ್ಬಳಕೆಯ ವ್ಯವಸ್ಥೆಯನ್ನು ಕುರಿತು; ಗಂಭೀರವಾದ ಚಿಂತನೆ ನಡೆಸಿಲ್ಲವೆಂಬಂತೆ ಕಾಣುತ್ತದೆ. ಈ ದಿಶೆಯಲ್ಲಿ, ಕಂಪನಿಗಳ ಸಾಮಾಜಿಕ ಹೊಣೆಗಾರಿಕೆಯನ್ನು ಬೆಳೆಸಬೇಕು.

5) ಅತ್ಯಧಿಕ ಮಳೆ ಆಧಾರಿತ ಒಣ ಭೂಮಿಯನ್ನು ಹೊಂದಿರುವಂತಹ ಕರ್ನಾಟಕದಲ್ಲಿ, ಅಂತರ್ಜಲದ ಲಭ್ಯತೆಯು; ರಾಜಸ್ಥಾನಕ್ಕಿಂತಲೂ ಕಡಿಮೆ ಇದೆ. ಅಂತರ್ಜಲದ ಮಿತಿಮೀರಿದ ಬಳಕೆಯಿಂದ, ಜಲಕ್ಷಾಮವನ್ನು ಎದುರಿಸಬೇಕಾಗಿದೆ. 'ಕೆರೆಗಳ ಜಿಲ್ಲೆ' ಎಂಬ ಖ್ಯಾತಿಗೆ ಪಾತ್ರವಾಗಿದ್ದ ಕೋಲಾರ್ ಜಿಲ್ಲೆಯು; ಅಂತರ್ಜಲದ ಅಭಾವದಿಂದ ಬರಗಾಲ/ಜಲಕ್ಷಾಮದ ಜಿಲ್ಲೆಯಾಗಿದೆ. ಇಂತಹ ಸಮಸ್ಯೆಯ ಪರಿಹಾರಕ್ಕಾಗಿ, ಮಳೆಯ ನೀರಿನ ಸಂಗ್ರಹಣೆಯು, ಒಂದು ಪ್ರಗತಿಪರ ಕ್ರಮವಾಗಿದೆ.

6) ಮಳೆನೀರು ಹಾಗೂ ಮನೆಯ ಛಾವಣಿಯ ನಡುವೆ ನಿಕಟವಾದ ಸಂಬಂಧವಿದೆ. ಮಳೆನೀರಿನ ಕೊಯ್ಲಿಗೆ ಅಹಿತಕಾರಿ ತ್ಯಾಜ್ಯಗಳು ಮತ್ತು ಮಾಲಿನ್ಯಕಾರಕ ಅಂಶಗಳು ಸಮಾವೇಶವಾಗದಂತೆ ಎಚ್ಚರಿಕೆವಹಿಸಬೇಕು. ಛಾವಣಿಯ ಮೇಲೆ ಬಿದ್ದ ಮಳೆನೀರನ್ನು ಕೆಳಗೆ ಒಯ್ಯಲು ಕೊಳವೆ, ಸೋಸುವ ವ್ಯವಸ್ಥೆ ಹಾಗೂ ಗಾಳಿ ಪ್ರತಿಬಂಧಕವಾದ ನೀರು ಸಂಗ್ರಾಹಕ ತೊಟ್ಟಿಯನ್ನು ನಿರ್ಮಿಸಬೇಕು. ವಿಶಿಷ್ಟವಾಗಿ, ಮನೆಯ ಛಾವಣಿಯ ನೈರ್ಮಲ್ಯವನ್ನು ಸಂರಕ್ಷಿಸಬೇಕು.

7) ಜನಸಂಖ್ಯಾ ಬೆಳವಣಿಗೆ, ಕೃಷಿ ಹಾಗೂ ಔದ್ಯಮಿಕ ಚಟುವಟಿಕೆಗಳ ವ್ಯಾಪಕತೆ ಮತ್ತು ಕುಡಿಯುವ ನೀರಿನ ಬೇಡಿಕೆಯ ಹೆಚ್ಚಳದಿಂದ; ಜಲ-ಸಂಪನ್ಮೂಲಗಳು ವಿಪರೀತ ಒತ್ತಡಕ್ಕೆ ಗುರಿಯಾಗಿವೆ. ಸಂಪನ್ಮೂಲಗಳ ಒಡೆತನ/ಸ್ವಾಮಿತ್ವಕ್ಕಾಗಿ; ರಾಜ್ಯ ಹಾಗೂ ರಾಷ್ಟ್ರಗಳ ನಡುವೆ ವೈರತ್ವ ಬೆಳೆದಿದೆ. ಭವಿಷ್ಯತ್ತಿನಲ್ಲಿ, ಜಲ-ಸಮರದ **(water war)** ಸಾಧ್ಯತೆಯನ್ನು ನಿವಾರಿಸಲಾಗದು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ, ನೀರಿನ ಸದ್ಬಳಕೆಯ ತಂತ್ರಜ್ಞಾನವನ್ನು ಕುರಿತು, ವ್ಯಾಪಕವಾದ ತಿಳುವಳಿಕೆಯನ್ನು ಬೆಳೆಸಬೇಕು.

8) ಅಂತರ್ಜಲವನ್ನು ಸ್ವರ್ಣಸದೃಶವೆಂದು, ಕರೆಯಲಾಗಿದೆ. ಆದರೆ ಅದು ಪರಿಶುದ್ಧವಾದ ಬಂಗಾರವಲ್ಲ. ಅಂತರ್ಜಲದಲ್ಲಿ ಕೆಲವು ಅಪಾಯಕಾರಿ ದ್ರವ್ಯ/ವಸ್ತುಗಳು ಕಂಡುಬಂದಿವೆ. ಅದನ್ನು ಶುದ್ಧೀಕರಣಗೊಳಿಸಿ, ಬಳಕೆ ಮಾಡಿದರೆ; ಜಲಸಂಬಂಧಿತ ರೋಗಗಳನ್ನು ಪ್ರತಿಬಂಧಿಸಲು ಸಾಧ್ಯವಾಗುವುದು.

9) ಸಮುದ್ರಗಳ್ಳರು ಮಹಾಸಾಗರಗಳಲ್ಲಿ ಆದಿಪತ್ಯ ಸಾಧನೆಯ ತಂತ್ರಗಳನ್ನು ರೂಪಿಸುವಂತೆ; ಭೂಮಿಯ ಮೇಲೆ ನೆಲಗಳ್ಳರು ಮತ್ತು ನೀರುಗಳ್ಳರು ಸ್ವಾಮಿತ್ವ ಸ್ಥಾಪಿಸಲು ಸಂಚು ನಡೆಸುತ್ತಾರೆ. 'ಸರ್ವಮ್ ಚೋರಮಯಂ ಇದಮ್'; ಎಂಬ ಗಂಡಾಂತರಕಾರಿ ಪರಿಸ್ಥಿತಿಯಲ್ಲಿ; ಕಡು ಬಡವರು ಹಾಗೂ ದುರ್ಬಲ ಸಮುದಾಯಗಳ ನೆಲ ಮತ್ತು ನೀರಿನ ಹಕ್ಕನ್ನು ಸಂರಕ್ಷಿಸಲು ನಿರಂತರವಾಗಿ ಹೋರಾಡಬೇಕಾಗುತ್ತದೆ.

10) ಅಪಾಯಕಾರಿ ಔದ್ಯೋಗೀಕರಣ ಹಾಗೂ ವಸಾಹತುಶಾಹಿ ಕಾರ್ಯವಿಧಾನದಿಂದ ಜಲ-ಸಂಪನ್ಮೂಲಗಳನ್ನು ಖಾಸಗೀಕರಣಗೊಳಿಸುವ ತಂತ್ರಗಳನ್ನು ರೂಪಿಸಲಾಗುತ್ತದೆ. ಆದರೆ ಭಾರರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ, ಸಾರ್ವಜನಿಕ ಆರೋಗ್ಯ ರಕ್ಷಣೆಗಾಗಿ; ಇಂತಹ ಸಾಮಾಜಿಕ ಅನ್ಯಾಯವನ್ನು ಪ್ರತಿಭಟಿಸಲು, ಒತ್ತಡದ ಗುಂಪುಗಳನ್ನು ರಚಿಸಬೇಕು.

---

* ನಿರ್ದೇಶಕರು, ವಿಕಾಸ ಪ್ರಕಾಶನ, ನಂ. 1/4, 1ನೇ ಅಡ್ಡರಸ್ತೆ, ಕೆ.ಎಚ್.ಬಿ. ರಸ್ತೆ,
ಸುಲ್ತಾನ್‌ಪಾಳ್ಯ, ಬೆಂಗಳೂರು-560 032.

# ಮಳೆ ನೀರು ಕೊಯ್ಲು
# ಜಲ ಸಮಸ್ಯೆಗೆ ಪರಿಹಾರ



**ಡಾ. ಟಿ. ರಮೇಶ್**
Mobile: 9844775678

ನೀರಿನ ಸಮಸ್ಯೆಯನ್ನು ತಪ್ಪಿಸಲು ಅನೇಕ ಸರಳ ಸೂಕ್ತ ಉಪಯೋಗಳಿಗೆ ಇವುಗಳ ಬಗ್ಗೆ ಒಂದು ಕಿರುಚಿತ್ರಣ.

ಹೆಚ್ಚುತ್ತಿರುವ ಜನಸಂಖ್ಯೆಯ ಜೊತೆಗೆ ಅವನ ಅಪರಿಮಿತ ಬಯಕೆಗಳು ಪ್ರಕೃತಿ ಸಂಪತ್ತನ್ನು ಬರಿದು ಮಾಡುತ್ತಿವೆ. ಹೀಗೆ ಬರಿದಾಗುತ್ತಿರುವ ಪ್ರಾಕೃತಿಕ ಸಂಪತ್ತಿನಲ್ಲಿ ಬದುಕಲು ಜೀವಾಳವಾಗಿರುವ ಜಲಸಂಪತ್ತು ಒಂದು. ನಾಗರಿಕತೆಯ ಎತ್ತರದಲ್ಲಿರುವ ಮನುಕುಲದ ವಿಲಾಸಿ ಜೀವನಕ್ಕೆ ನೀರಿನ ಅವಶ್ಯಕತೆ ತುಂಬಾ ಇದೆ, ಆದರೆ ಇಂದು ನೀರಿನ ಸಮರ್ಪಕ ಸರಬರಾಜಿಲ್ಲದೆ ಕುಡಿಯುವ ನೀರಿಗೂ ಪರದಾಡುವ ಕಷ್ಟ ಒದಗಿದೆ. ಇದು ಭಾರತವೊಂದೇ ಎದುರಿಸುತ್ತಿರುವ ಸಮಸ್ಯೆ ಏನಲ್ಲ. ಇದು ವಿಶ್ವವ್ಯಾಪಿ ಸಮಸ್ಯೆಯಾಗಿದ್ದು, ಜಗತ್ತಿನ ಅನೇಕ ರಾಷ್ಟ್ರಗಳಲ್ಲಿ ನೀರಿಗಾಗಿ ಚಿಂತಿಸುವ ಪರಿಸ್ಥಿತಿ ಇತ್ತು. ಸಧ್ಯದ ಈ ಪರಿಸ್ಥಿತಿಯಿಂದ ಪಾರಾಗಲು ಹುಡುಕಿಕೊಂಡ ಬಹಳ ಸೂಕ್ತ ಪರಿಹಾರವೇ "ಮಳೆ ನೀರು ಕೊಯ್ಲು" (Rainwater Harwesting). ಇತ್ತೀಚೆಗೆ ಜಗತ್ತಿನಾದ್ಯಂತ ಈ ಪದ ಬಹು ಪ್ರಚಾರದಲ್ಲಿದೆ. ಹಾಗೆಂದ ಮಾತ್ರಕ್ಕೆ ಮಳೆ ನೀರು ಕೊಯ್ಲು ಹೊಸದಾಗಿ ಅವಿಷ್ಕಾರಗೊಂಡ ನೀರುಸಂಗ್ರಹಣಾ ವಿಧಾನವೇನಲ್ಲ. ಇದಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಪುರಾತತ್ವ ಶಾಸ್ತ್ರಜ್ಞರ ಪ್ರಕಾರ ನಾಲ್ಕು ಸಾವಿರ ವರ್ಷಗಳ ಹಿಂದೆಯೇ ಗ್ರೀಸ್, ರೋಮ್ ಮೊದಲಾದ ದೇಶಗಳಲ್ಲಿ ಈ ವ್ಯವಸ್ಥೆ ಬಳಕೆಯಲ್ಲಿತ್ತೆಂದು ತಿಳಿಯಬಹುದು. ಬಿಟಿಷರು ಭಾರತಕ್ಕೆ ಬರುವ ಮೊದಲೇ ಭಾರತದಲ್ಲಿ ಈ ವ್ಯವಸ್ಥೆ ಇದ್ದಿತ್ತೆಂಬುದು ಇತಿಹಾಸ ಪುಟಗಳಿಂದ ಸಾಬೀತಾಗಿದೆ. ಇಂದು ಈ ವ್ಯವಸ್ಥೆ ಕಾನೂನಿನ ಮುಖಾಂತರ ಪ್ರತಿ ಮನೆಗಳಲ್ಲೂ ಕಡ್ಡಾಯವಾಗಿರುವುದು ಜರ್ಮನಿಯ ಹೆಸೇನ್ ರಾಜ್ಯದಲ್ಲಿ ಕಂಡುಬಂದಿದೆ. ಇಷ್ಟೊಂದು ಉಪಯುಕ್ತ ಹಾಗೂ ಮಹತ್ವಪೂರ್ಣವಾದ ಪೂರಕ ನೀರಿನ ವ್ಯವಸ್ಥೆಯ ಬಗೆಗೆ ಸಾರ್ವಜನಿಕರಲ್ಲಿ ಪ್ರಾಥಮಿಕ ತಿಳುವಳಿಕೆಯಾದರೂ ಇರಬೇಕೆಂಬ ಆಶಯದೊಂದಿಗೆ ಈ ಲೇಖನ ಬರೆದಿದ್ದೇನೆ.

ಆಧುನಿಕ ಜಗತ್ತು ತಾಂತ್ರಿಕ ಆವಿಷ್ಕಾರಗಳಿಂದ ತುಂಬಿದೆ ನಿಜ, ಆದರೆ ಈ ತಾಂತ್ರಿಕ ಜ್ಞಾನ ಸಾಮಾನ್ಯ ಜನರ ಬದುಕಿನಿಂದಾಚೆಗಿತ್ತು ಎಂಬ ನಂಬಿಕೆ ಇತ್ತು. ಮಳೆ ನೀರು ಕೊಯ್ಲು ಪದ್ಧತಿಯಿಂದಾಗಿ ತಂತ್ರಜ್ಞಾನ ಎಂಬುದು ಜನಸಾಮಾನ್ಯನ ಜೀವನಕ್ರಮವೂ ಆಗಬಹುದೆಂಬುದನ್ನು ಸಾಬೀತು ಪಡಿಸಿದೆ. ಮಳೆ ನೀರನ್ನು ಒದಗಿಸಲು, ಜಾನುವಾರುಗಳಿಗೆ ನೀರುಣಿಸಲು, ಗೃಹಬಳಕೆಗಾಗಿ, ನೀರಾವರಿಗಾಗಿ ನೀರಿನ ವ್ಯವಸ್ಥೆ ಮಾಡಲು, ಅಂತರ್ಜಲ ಪುನಭರ್ತಿಕಾರ್ಯಕ್ಕೆ ಮಳೆನೀರುಕೊಯ್ಲು ಪದ್ಧತಿಯನ್ನು ಬಳಸಿಕೊಂಡು ಬರಲಾಗಿದೆ.

ಮಳೆನೀರುಕೊಯ್ಲು ವ್ಯವಸ್ಥೆಯನ್ನು ಜಾರಿಗೆ ತರಲು ಮೊದಲು ಮಾಡಬೇಕಾದದ್ದು ಮಳೆ ಸಂಗ್ರಹಣೆ ಕಾರ್ಯ. ಈ ಮಳೆ ಸಂಗ್ರಹಣೆಯನ್ನು ಮಳೆಬಂದ ಸಮಯದಲ್ಲಿ ಮನೆಗಳು, ಗುಡಾರಗಳು ಮತ್ತು ಸ್ಥಳೀಯ ಸಾರ್ವಜನಿಕ ಕಟ್ಟಡಗಳ ಛಾವಣಿಗಳಿಂದ ಹರಿದು ಹೋಗುವ ಮುನ್ನ ಶೇಖರಿಸಬೇಕು. ಹೀಗೆ ಶೇಖರಿಸಿದ ನೀರನ್ನು ಭೂಮಿಯ ಮೇಲ್ಭಾಗದ ತೊಟ್ಟಿಗಳಲ್ಲಿ ಸಂಗ್ರಹಿಸಿ ತಕ್ಷಣಕ್ಕೆ ಬೇಕಾದರೂ ಬಳಸಬಹುದು ಅಥವಾ ಭೂಮಿಯ ಒಳಬಾಗ ಅಂದರೆ ಬಾವಿ, ಕೊಳವೆ ಬಾವಿ ಅಥವಾ ಇಂಗುಗುಂಡಿಗಳ ಮೂಲಕ ಇಂಗಿಸಿ ನಂತರ ಬೇಕಾದರೂ ಬಳಸಬಹುದು.

ಮಳೆನೀರು ಸುಲಭವಾಗಿ ಲಭ್ಯವಿರುವ ಮಿತವ್ಯಯದ ನೀರಿನ ಮೂಲವಾಗಿದೆ. ಸ್ಥಳೀಯವಾಗಿ ದೊರೆಯುವ ಹೆಚ್ಚು ದುಬಾರಿಯಲ್ಲದ ಸಾಮಗ್ರಿಗಳಿಂದ ಮಳೆನೀರುಕೊಯ್ಲಿನ ವ್ಯವಸ್ಥೆಗಳನ್ನು ಸರಳವಾಗಿ ನಿರ್ಮಿಸಬಹುದು. ಹೀಗಾಗಿ "ಮಳೆನೀರುಕೊಯ್ಲು" ಪದ್ಧತಿಯ ಅಳವಡಿಕೆ ಯಶಸ್ವಿ ಕಾರ್ಯ ಯೋಜನೆಯಾಗಿರುತ್ತದೆ.

**ಮಳೆನೀರು ಸಂಗ್ರಹಣಾ ವಿಧಾನ :**

ಮಳೆನೀರನ್ನು ಎರಡು ರೀತಿಯಾಗಿ ಸಂಗ್ರಹಿಸಬಹುದಾಗಿದೆ. ಮೊದಲನೆಯದಾಗಿ ನೆಲದ ಸಂಗ್ರಹಣೆ ಮೂಲಕ ಮಳೆ ನೀರನ್ನು ಸಂಗ್ರಹಿಸಬಹುದು ಇದಕ್ಕೆ ನಲದ ಸಂಗ್ರಹಣಾ ವ್ಯವಸ್ಥೆ ಎಂದು ಹೆಸರು. ಮಳೆನೀರನ್ನು ಸಿದ್ಧಪಡಿಸಲಾದ ಸಂಗ್ರಹಣಾ ಪ್ರದೇಶದಿಂದ ಶೇಖರಣಾ ಪ್ರದೇಶಕ್ಕೆ ಹರಿಸುವ ಮೂಲಕ ನೀರನ್ನು ಸಂಗ್ರಹಿಸಬಹುದು. ಇದು ಪ್ರತ್ಯೇಕ ಮನೆಗಳಿಗಿಂತ ಒಂದು ಗುಂಪಿನ ಮನೆಗಳಿಗೆ ಅನ್ವಯಿಸಿದರೆ ಹೆಚ್ಚು ಉಪಯುಕ್ತ ನೆಲದ ಸಂಗ್ರಹಣಾ ವ್ಯವಸ್ಥೆಯನ್ನು ಸರಿಯಾಗಿ ರೂಢಿಸಿದ್ದೇ ಆದರೆ ಅವು ಬೃಹತ್ ಪ್ರಮಾಣದ ಮಳೆನೀರನ್ನು ಸಂಗ್ರಹಿಸಲು ಸಹಕಾರಿಯಾಗಿದೆ.

ಎರಡನೆಯದಾಗಿ ಛಾವಣಿಗಳ ಮೂಲಕ ಸಂಗ್ರಹಿಸುವುದರಿಂದ ಛಾವಣಿ ಸಂಗ್ರಹಣಾ ವಿಧಾನ ಎಂದು ಹೆಸರು. ಛಾವಣಿಗಳ ಮೇಲೆ ಬೀಳುವ ಮಳೆನೀರನ್ನು ಸೂರು ದೋಣಿಗಳು ಮತ್ತು ಕೊಳಾಯಿಗಳ ಒಂದು ವ್ಯವಸ್ಥೆಯ ಮೂಲಕ ಶೇಖರಣಾ ವ್ಯಸ್ಥೆಯೊಳಗೆ ಬೀಳುವಂತೆ ಮಾಡಬೇಕು. ಬೇಸಿಗೆ ನಂತರ ಮೊದಲ ಮಳೆ ನೀರನ್ನು ಸಂಗ್ರಹಿಸಬಾರದು. ಅದನ್ನು ಹರಿದು ಹೋಗಲು ವ್ಯವಸ್ಥೆ ಮಾಡಬೇಕು ಏಕೆಂದರೆ ಅದುವರೆಗೆ ಸೂರು ದೋಣಿಗಳಲ್ಲಿ ಸಮಗ್ರಹವಾದ ಕಸ, ಕಡ್ಡಿ, ಹಕ್ಕಿಹಿಕ್ಕೆ ಮೊದಲಾದ ಕಲ್ಮಶಗಳನ್ನು ಶೇಖರಣೆ ಮಾಡಿದರೆ ಉತ್ತಮ ಫಲಿತಾಂಶ ದೊರೆಯುವುದಿಲ್ಲ. ಹಾಗಾಗಿ ಮೊದಲ ಮಳೆಯ ನೀರನ್ನು ಸೂರುದೋಣಿಗಳು ಶುಚಿಯಾಗಲು ಹರಿಬಿಟ್ಟು ನಂತರದ ದಿನಗಳಲ್ಲಿ ಬೀಳುವ ಮಳೆಯನ್ನು ಸಂಗ್ರಹಿಸಬೇಕು. ಸೂರುದೋಣಿಗಳ ಮೂಲಕ ನೀರು ಇಳಿಕೊಳವೆಗಳಿಗೆ ಬರುವ ಹಾಗೆ ಮಾಡಬೇಕು, ಅಲ್ಲಿಂದ ಶೋಧಕ ತೊಟ್ಟಿಯಲ್ಲಿ ನೀರನ್ನು ಚೆನ್ನಾಗಿ ಶೋಧಿಸಬೇಕು. ಇಳಿಕೊಳವೆಗೆ ಜಾಲರಿ ಅಥವಾ ಸ್ಪಾಂಜ್ ಇಟ್ಟು ಶೋಧಿಸಬಹುದು ಅಥವಾ ಜಲ್ಲಿ ಹಾಗೂ ಮರುಳು ತುಂಬಿರುವ ಶೋಧಕ ತೊಟ್ಟಿಯನ್ನು ಕಟ್ಟಿಸಿ ಮಳೆನೀರನ್ನು ಅದರ ಮುಖಾಂತರ ಹರಿಸಿ ನೀರಿನಲ್ಲಿರುವ ಮಣ್ಣಿನ ಕಣಗಳನ್ನು ಬೇರ್ಪಡಿಸಬಹುದು. ಮುಂದಿನ ಹಂತದಲ್ಲಿ ಸೇಖರಣಾ ತೊಟ್ಟಿಗೆ ಶುಚಿಗೊಂಡ ನೀರು ತಲುಪುವಂತೆ ಮಾಡಬೇಕು. ನಂತರ ಅಗತ್ಯವಿದ್ದಾಗ ನೀರನ್ನು ಬಳಸಬಹುದು.

ಛಾವಣಿ ನೀರನ್ನು ಸಮತಟ್ಟಾದ ಮನೆ ಅಥವಾ ಕಟ್ಟಡ ಹಾಗೂ ಇಳಿಜಾರು ಮನೆಗಳೆರಡರ ಮೂಲಕವೂ ಸಂಗ್ರಹಿಸಬಹುದು. ಶುದ್ಧೀಕರಿಸಿದ ಮಳೆ ನೀರನ್ನು ಭೂಮಿಯ ಒಳಭಾಗದಲ್ಲಿ ಶೇಖರಿಸಿದರೆ ನೀರು ಹೆಚ್ಚು ಕಾಲ ಶುದ್ಧವಾಗಿರುತ್ತದೆ. ನೀರು ಮಲಿನಗೊಳ್ಳಲು ಗಾಳಿ, ಬೆಳಕು, ನೀರಿನಲ್ಲಿ ಬೆರೆತ ಜೈವಿಕ ಪದಾರ್ಥಗಳು ಕಾರಣ ಆದ್ದರಿಂದ ಗಾಳಿ ಬೆಳಕು ತೂರದಂತೆ ನೀರನ್ನು ಭೂಮಿಯ ಒಳಭಾಗದಲ್ಲಿ ಶೇಖರಿಸುವುದು ಸೂಕ್ತ.

ಮಳೆ ನೀರಿನಿಂದ ಅನೇಕ ಬಗೆಯ ಪ್ರಯೋಜನಗಳಿದ್ದು ಇದು ನಗರ ಮತ್ತು ಗ್ರಾಮೀಣ ಭಾಗದವರೆಲ್ಲರ ಅವಶ್ಯಕತೆಗಳನ್ನು ಪೂರೈಸಬಲ್ಲುದು. ತೋಟಗಾರಿಕೆ, ವಾಹನಗಳನ್ನು ತೊಳೆಯಲು ಬಟ್ಟೆ ಒಗೆಯಲು, ಪಾತ್ರೆ ತೊಳೆಯಲು, ಸ್ನಾನ, ಶೌಚಾಲಯ, ಮನೆ ಶುಚಿಗೊಳಿಸಲು, ಕಾರ್ಖಾನೆಯ ಕೆಲಸಗಳು ಹೀಗೆ ಬಹು ಉಪಯೋಗಿಯಾಗಿ ಈ ನೀರನ್ನು ಬಳಸಬಹುದು.

- **ಮಳೆನೀರು ಕೊಯ್ಲು ವಿಧಾನದಿಂದ ಮೇಲ್ಮೈಮಣ್ಣು ಕೊಚ್ಚಿಹೋಗುವುದು ತಪ್ಪುತ್ತದೆ.**
- **ನೀರಿಗಾಗಿ ದುಬಾರಿ ಖರ್ಚು ಮಾಡುವುದು ತಪ್ಪುತ್ತದೆ.**
- **ಅಂತರ್ಜಲ ಮಟ್ಟ ಬತ್ತದೆ ಇರುವುದರಿಂದ ಭೂಕುಸಿತ ಉಂಟಾಗುವುದಿಲ್ಲ.**
- **ಎಲ್ಲಕ್ಕಿಂತ ಮುಖ್ಯವಾಗಿ ಮುಂದಿನ ಪೀಳಿಗೆಗೆ ನೀರನ್ನು ಉಳಿಸಿದ ಪುಣ್ಯ ದೊರಕುತ್ತದೆ.**

ನೀರಿನ ಅಭಾವ ತಪ್ಪಿಸಲು ಇಷ್ಟೊಂದು ಸರಳ, ಸೂಕ್ತ ಪರಿಹಾರ ಬೇರೊಂದಿಲ್ಲ. ಜನ ಸಾಮಾನ್ಯನ ಬಳಿಯಲ್ಲಿಯೇ ಇರುವ ಈ ತಾಂತ್ರಿಕತೆ ಎಲ್ಲರ ಬದುಕನ್ನು ಹಸಿರಾಗಿಸುವಲ್ಲಿ ಸಫಲವಾಗುತ್ತದೆ ಅದನ್ನು ಅಳವಡಿಸಿಕೊಳ್ಳುವ ಮನಸ್ಸು ಮಾಡಬೇಕಷ್ಟೆ.

ಉಪನ್ಯಾಸಕರು, ಬಾಸುದೇವ್ ಸೋಮಾನಿ ಕಾಲೇಜು,
ಕುವೆಂಪುನಗರ, ಮೈಸೂರು-570023

# ಜನಪದರಲ್ಲಿ ಮಹಾಶಿವರಾತ್ರಿ ಆಚರಣೆ



ಬಸವರಾಜ ಆಕಳವಾಡಿ
ಮೋ : 9482938917,

**ಬೇಡ ಬೇಟೆಗೆ ಹೋಗಿ, ಬಿಲ್ವ ಪತ್ತರಿ ಕೊಯ್ದು**
**ಬೇಡ ಕನ್ನಯ್ಯ ಶಿವಪೂಜೆ । ಮಾಡಿದರ**
**ನಾಡೊಳಗೆ ನೋಡು ಶಿವರಾತ್ರಿ.**

ಮಾಘ ಮಾಸದ ಬಹುಳ ಚತುರ್ದಶಿಯಂದು ಶಿವರಾತ್ರಿ ಅಮಾವಾಸ್ಯೆ ಬರುವುದು. ಇದಕ್ಕೆ 'ಮಹಾಶಿವರಾತ್ರಿ' ಎಂದು ಭಾವಿಸಿ ವಿಶೇಷವಾಗಿ ಶಿವನಿಗೆ ಪೂಜೆ ಸಲ್ಲಿಸುವುದು ಬೆಳೆದುಬಂದಿದೆ. ಅಮವಾಸ್ಯೆಯ ಹಿಂದಿನ ದಿನವನ್ನು 'ಶಿವಯೋಗ' ಎನ್ನುವರು. ಪ್ರಪಂಚಕ್ಕೆ ತಂದೆಯೆನಿಸಿದ ಶಿವನ ಆರಾಧನೆಗೆ ಪ್ರಶಸ್ತವಾದ ದಿನ. ಅಪಾರವಾದ ಸಂಸಾರದಲ್ಲಿ ಜನಿಸಿದ ಮನುಷ್ಯನಿಗೆ ಈಶ್ವರ ಆರಾಧನೆಯೇ ಸಾರ. ವ್ಯಾಧಿ ನಿವಾರಣೆಗೆ, ಆಯುರಾರೋಗ್ಯ, ಐಶ್ವರ್ಯಕ್ಕೆ ಶಿವಾರಾಧನೆಯೇ ರಾಮಬಾಣವಾಗಿದೆ. ಶಿವನಿಗೆ ಅನೇಕ ಹೆಸರುಗಳಿವೆ.

ಶಿವನನ್ನು ಅನಂತ ನಾಮಗಳಿಂದ ಬಣ್ಣಿಸಿದರೂ ಸಾಲದು. ಶಿವನು ಮಹತ್ತರವಾದ ಈಶ್ವರತ್ವವುಳ್ಳವನು. ಶಿವನ ಶರೀರ ಜ್ಯೋತಿರ್ಮಯ. ಶಿವನ ಜ್ಞಾನರೂಪವೇ ಚಂದ್ರ. ಮನ್ಮಥನನ್ನು ನಿಗ್ರಹಿಸಿದವನಾದ್ದರಿಂದ ಕಾಮಾರಿಯೆಂದೂ, ಹಾಲಾಹಲವನ್ನು ಕುಡಿದು ಲೋಕ ಸಂರಕ್ಷಣೆ ಮಾಡಿದ್ದರಿಂದ ಶ್ರೀಕಂಠನೆಂದೂ, ಭಕ್ತರಿಗೆ ಕಲ್ಯಾಣವನ್ನುಂಟು ಮಾಡುವವನಾದುದರಿಂದ ಶಂಕರನೆಂದೂ, ತ್ರಿಪುರಾಂತಕನೆಂದೂ,

ಮಾನವನ ಅಲ್ಲದೆ ಸಕಲ
ಜೀವರಾಶಿಗಳು ಏನೇ
ಸೌಲಭ್ಯ ಪಡೆಯಲು
ಶಿವನ ಪ್ರೇರಣೆ ಅಗತ್ಯ.
ಶಿವನ ಕೃಪೆ ಇಲ್ಲದೆ ಒಂದು
ಗರಿಕೆಯೂ ಅಲ್ಲಾಡದು
ಎಂದು ಭಕ್ತರ ನಂಬಿಕೆ.
ಮಹಾಶಿವರಾತ್ರಿಯ
ಪ್ರಯುಕ್ತ ಈ ಲೇಖನ.



ಇತ್ಯಾದಿ ಹೆಸರುಗಳಿಂದ ಕರೆಯಲಾಗುತ್ತಿದೆ. ಶಿವ ದಿವ್ಯ ಬೆಳಕಿನ ರೂಪ. ಪರಮಾತ್ಮನು ಶರೀರ ಧರಿಸಿದ ಜಡ ಮಾನವನಲ್ಲ. ಆತ ಜಂಗಮ, ಆತ ಬೆಳಗು, ಚೈತನ್ಯ ಸ್ವರೂಪ. ಅವನಿಗೆ ಹುಟ್ಟಿನ ಮೆಟ್ಟು ಇಲ್ಲ, ಸಾವಿನ ಕಟ್ಟು ಇಲ್ಲ ! 'ಶಿವ' ಅಂದರೆ 'ಪರಂಜ್ಯೋತಿ', ಶಿವನೆಂದರೆ ಪರಮ ಮಹಾಸತ್ಯದ ದೇವರು. ಭುವನದ ಸಕಲ ಧರ್ಮಗಳ ಏಕೇಶ್ವರ ಪರಿಕಲ್ಪನೆಯೇ ಶಿವ, ತತ್ವದರ್ಶನದ ಸಾರ ಸಂಪತ್ತು. ಪರಮಾತ್ಮನು ಸಕಲ ಜ್ಯೋತಿಗಳಿಗೂ ಶ್ರೇಷ್ಠನಾದ ಪರಮಜ್ಯೋತಿ. ಪರಶಿವನ ಪೂಜೆಗೆ ಮಹಾಶಿವರಾತ್ರಿಯು ಬಹು ಪ್ರಶಸ್ತವಾದ ದಿನ.

**ಹಿನ್ನೆಲೆ:** ಹಿಂದೆ ಸಮುದ್ರ ಮಥನ ಕಾಲದಲ್ಲಿ ಕಾಮಧೇನು, ಕಲ್ಪವೃಕ್ಷ, ಕೌಸ್ತುಭ ಮಣಿ, ಅಪ್ಸರೆಯರು, ಅಮೃತ, ಮುಂತಾದವು ಹುಟ್ಟಿದಾಗ ತನಗೆ, ತನಗೆ ಎಂದು ಸಾಮಾನ್ಯ ಮನಷ್ಯರಂತೆ ದೇವಾನುದೇವತೆಗಳೂ ಕಚ್ಚಾಡಿದರು. ಈ ಮಧ್ಯೆ ಭೀಕರ ಕಾಲಕೂಟ ವಿಷ ಹುಟ್ಟಿದಾಗ ಹಾಲಾಹಲ–ಕೋಲಾಹಲವುಂಟಾಗಿ, ನನಗೆ ಬೇಡ–ನನಗೆ ಬೇಡ ಎಂದು ಎಲ್ಲರೂ ದಿಕ್ಕೆಟ್ಟು ಓಡಿದರು. ಕಷ್ಟದ ವೇಳೆಯಲ್ಲಿ 'ಅದು ನನಗಿರಲಿ' ಎಂದು ಪಡೆದು, ಕುಡಿದು ಜಗತ್ತನ್ನೇ ಉದ್ಧರಿಸಿದ ದೇವನನ್ನು ಪೂಜಿಸುವ ದಿನವೂ ಇದಾಗಿದೆ.

ಶಿವ ಶಿವ ಎಂದರೆ ಸಿಡಿಲೆಲ್ಲ ಬಯಲಾಗಿ
ಕಲ್ಲು ಬಂದೆರಗಿ ಕಡೆಗಾಗಿ । ಎಲೆ ಮನವೆ
ಶಿವನೆಂಬ ಶಬುದ ಬಿಡಬ್ಯಾಡ

ಮನುಷ್ಯನಿಗೆ ಎಂಥ ಕಷ್ಟಗಳು ಬಂದರೂ 'ಶಿವ' ಎಂಬ ಶಬ್ದ ನೆನೆಯುವುದರಿಂದಾಗಿ ಎಲ್ಲ ಕಷ್ಟಗಳು ಬಯಲಾಗುತ್ತವೆ ಎನ್ನುವ ಜನಪದರ ನಂಬುಗೆ ಅಚಲವಾದುದು. ಶಿವಧ್ಯಾನದಿಂದಲೇ ಸದ್ಗತಿ ಕಂಡ ಶರಣರ ನಿದರ್ಶನಗಳು ನಮ್ಮ ಕಣ್ಮುಂದೆ ಇವೆ.

ಮುತ್ತಿನ ಮೂಗುತಿ ಮುತ್ಯಾ
ಮಾಡಿಸಿಕೊಟ್ಟ ಮುತ್ತೈದಿತನವ
ಶಿವಕೊಟ್ಟ । ಮೇಲಿರುವ
ಮುಕ್ಕಣ್ಣ ಕೊಟ್ಟ ಮಕ್ಕಳನ.

ಮಾನವನ ಅಲ್ಲದೆ ಸಕಲ ಜೀವರಾಶಿಗಳು ಏನೇ ಸೌಲಭ್ಯ ಪಡೆಯಲು ಶವನ ಪ್ರೇರಣೆ ಅಗತ್ಯ. ಶಿವನ ಕೃಪೆ ಇಲ್ಲದೆ ಒಂದು ಗರಿಕೆಯೂ ಅಲ್ಲಾಡದು. ಶಿವನ ಪ್ರೇರಣೆಗೆ ಒಳಗಾಗಿದ್ದರಿಂದಲೆ ತನ್ನ ಮುತ್ತೈದೆ ಭಾಗ್ಯ ಉಳಿದಿತೆಂದೂ, ಮುಕ್ಕಣ್ಣ ಮಕ್ಕಳ ಸಂತತಿಯನ್ನು ನೀಡಿ ಉಪಕರಿಸಿದ್ದಾನೆ. ಅಂತಹವನನ್ನು ಸದಾ ನೆನೆಯುವುದು ಮಾನವ ಧರ್ಮ ಎನ್ನುವ ಹಳ್ಳಿಯ ಹೆಣ್ಣುಮಕ್ಕಳ ನಂಬಿಕೆ ಅಚಲವಾದುದು.

ಹರನು ನಮ್ಮ ತಂದೆ, ಗಿರಿಜೆ ನಮ್ಮ ತಾಯಿ
ಶರಣರು ನಮ್ಮ ಬಳಗ । ಕೈಲಾಸದ
ಗಿರಿ ಕಾಣೆ ನಮ್ಮ ತವರೂರು.

ಶಿವ–ಪಾರ್ವತಿಯರು ಜಗದಾದಿ ದಂಪತಿಗಳು. ಇವರನ್ನು ಕುರಿತು ಮಾಡುವ ಪೂಜೆ ಜಪ, ತಪಗಳು ಪವಿತ್ರ ಕಾಯಕಗಳು ಆಗಿವೆ. ಜನಪದರ ಬಾಳಿನ ದೈವವೂ ಆಗಿರುವ ಹರ–ಗಿರಿಜೆ ನಮ್ಮ ತಂದೆ ತಾಯಿಗಳು. ಶರಣರು ನಮ್ಮ ಬಳಗ, ಹಾಗೂ ಕೈಲಾಸದ ಗಿರಿ ನಮ್ಮ ತವರೂರು ಎಂದು ಹೇಳುವ ಗ್ರಾಮೀಣ ಹೆಣ್ಣುಮಕ್ಕಳ ಶಿವನ ಬಗೆಗಿನ ಪರಿಕಲ್ಪನೆ ಅಗಾಧ ಹಾಗೂ ಅನುಪಮವಾದುದು.

ಹೂವಿನ್ಯಾಗ ಹುದುಗ್ಯಾನ,
ಮಾಲ್ಯಾಗ ಮಲಗ್ಯಾನ
ಮೊಗ್ಯಾಗ ಕಣ್ಣು ತೆರೆದಾನ ।
ಲಿಂಗಯನ ನೋಡಟಗೆ ನಿದ್ದೆ ಬಯಲಾಗಿ.
ಕನಸ ಬಿದ್ದಿತ ಗೆಳತಿ ನಿನಗ ಹೇಳೂದ ಮರತೆ
ಶಿವ ಕಂಚಿಪುರದ ಎಲಿದೋಟ ।
ಒಳಗಿರುವ ಶಿವನು ಬಂದಿದ್ದ ಮನದಾಗ.

'ಶಿವ' ಲಿಂಗ ಪ್ರತೀಕ. ಲಿಂಗ 'ಬ್ರಹ್ಮಾಂಡ ಪ್ರತೀಕ'. ಶಿವ ಸಾಕಾರವೂ ಅಲ್ಲ, ನಿರಾಕಾರವೂ ಅಲ್ಲ. ಲಿಂಗ ಪೂಜೆ ನಮ್ಮನ್ನು ಸಾಕಾರದಿಂದ ನಿರಾಕಾರದತ್ತ, ಸಗುಣೋಪಾಸನೆಯಿಂದ ನಿರ್ಗುಣೋಪಾಸನೆಯತ್ತ ಕರೆದೊಯ್ಯುತ್ತದೆ. ಶಿವ ಹೂವಿನಲ್ಲಿ ಹುದುಗಿ, ಮೊಗ್ಗಿನಲ್ಲಿ ಕಣ್ಣು ತೆರೆಯುವನು, ಕನಸಿನಲ್ಲಿ ಶಿವ ಬರುವುದು, ನೆನೆದವರ ಮನದಾಗ ಎನ್ನುವಂತೆ ಶಿವನ ಜಪ ತಪಗಳಲ್ಲಿಯೇ ನಿರತರಾಗಿರುವ ನಮ್ಮ ಜನಪದರಿಗೆ ಶಿವ ಕನಸಿನಲ್ಲಿಯೂ ಪ್ರತ್ಯಕ್ಷನಾವುದು ನಿಜ ಭಕ್ತಿಯ ಪ್ರತೀಕವಾಗಿದೆ.

**ಆಚರಣೆ :** ಶಿವರಾತ್ರಿಯ ದಿನ ಬೆಳಿಗ್ಗೆ ಬೇಗ ಎದ್ದು, ಸ್ನಾನಾದಿಗಳನ್ನು ಮುಗಿಸಿ ಶುಭ್ರ ವಸ್ತ್ರಗಳನ್ನು ಉಟ್ಟುಕೊಳ್ಳುವರು. ಅಸಂಖ್ಯಾತ ಭಕ್ತರು ನದಿ, ಸಮುದ್ರ ಹಾಗೂ ಸಂಗಮ ಸ್ಥಳಗಳಿಗೆ ಹೋಗಿ ಪವಿತ್ರ ಸ್ನಾನ ಮಾಡಿ, ಶಿವನಿಗೆ ಪವಿತ್ರ ಪೂಜೆ ಸಲ್ಲಿಸುವರು.

ಸಮಸ್ತ ಪಾಪ ನಿವಾರಣೆಗಾಗಿಯೂ, ಜ್ಞಾನ, ಮೋಕ್ಷ ಪ್ರಾಪ್ತಿಗಾಗಿಯೂ ಶಿವರಾತ್ರಿ ವ್ರತ ಆಚರಿಸಲಾಗುವುದು.

ತ್ರಯೋದಶಿಯಂದು ಒಪ್ಪತ್ತು ಊಟ ಮಾಡುವರು. ಚತುರ್ದಶಿಯಂದು ಪೂರ್ಣ ನಿರಾಹಾರವಾಗಿದ್ದು, ಅಮವಾಸ್ಯೆಯಂದು ಪಾರಣೆ ಮಾಡುವರು. ದೈಹಿಕವಾಗಿ ಅಶಕ್ತರಾಗಿರುವವರು, ಕ್ಷೀರಾಹಾರ ಅಥವಾ ಫಲಾಹಾರ ಸ್ವೀಕರಿಸಬಹುದು. ಪ್ರದೋಷ ಕಾಲಕ್ಕೆ ಶಿವ ದೇವಾಲಯಗಳಿಗೆ ತೆರಳಿ, ರಾತ್ರಿ ನಾಲ್ಕು ಯಾಮಗಳಲ್ಲಿ ರುದ್ರಾಭಿಷೇಕ, ಪೂಜೆ, ಹರಿಕಥೆ, ಸತ್ಸಂಗ ಕಾರ್ಯಕ್ರಮಗಳಲ್ಲಿ ಮಗ್ನರಾಗುವರು. ಶಿವನಿಗೆ ತುಪ್ಪ, ಹಾಲು, ಜೇನು, ಬಾಳೆಹಣ್ಣಿನ ಅಭಿಷೇಕ ಮಾಡಿಸುವರು. ಉಪವಾಸ ಮಾಡುವುದು ಎಂದರೆ ಕೇವಲ ಊಟೋಪಚಾರ ಬಿಟ್ಟು, ಫಲಾಹಾರ, ಅವಲಕ್ಕಿ, ಮೊಸರು, ಖರ್ಜೂರ ಮೆಲ್ಲುವ ಅಲ್ಪೋಪಹಾರ ಉಪವಾಸವಲ್ಲ. 'ಉಪ' ಅಂದರೆ 'ಹತ್ತಿರ', 'ವಾಸ' ಅಂದರೆ 'ವಾಸವಾಗಿರುವಿಕೆ' ಉಪವಾಸವೆಂದರೆ ಶಿವನ ಹತ್ತಿರ ಮಾನಸಿಕವಾಗಿ ಇರುವುದು ಎಂದು ಅರ್ಥ.

ಶಿವನಿಗೆ ರುದ್ರಾಭಿಷೇಕ ಪ್ರಿಯವಾದುದು. ಮನುಷ್ಯ ಹುಟ್ಟಿದಾಗಿನಿಂದ ಜೀವನ ಅಳುವಿನಿಂದ ಪ್ರಾರಂಭವಾಗುತ್ತದೆ. ಆರೋದನವನ್ನು ದೂರ ಮಾಡುವವನೇ ರುದ್ರ. ಶಿವ ತನ್ನ ಭಕ್ತರಿಗೆ ರುದ್ರ, ಶಿವಶಂಕರ, ಹಾಗೂ ಶುಭಂಕರ, ಪ್ರಪಂಚದ ಸಕಲ ಚರಾಚರ ವಸ್ತುಗಳು ರುದ್ರಾಂಶಗಳೆ. ಮೃತ್ಯುಂಜಯನಲ್ಲಿ ಮನೆಯ ಬಾಲಕರು, ಪಾಲಕರು, ಯುವಕರು, ರಕ್ಷಕರು ಹಾಗೂ ಮುದುಕರನ್ನು ಕಾಪಾಡಿ ಅಪಮೃತ್ಯು ತಪ್ಪಿಸೆಂದು ಶಿವರಾತ್ರಿಯಂದು ಶಿವನಲ್ಲಿ ಪ್ರಾರ್ಥಿಸುವರು. ನಾಲ್ಕು ಯಾಮಗಳಲ್ಲಿ ರುದ್ರಾಭಿಷೇಕ ಮಾಡಿದರೆ ಅದಕ್ಕೆ



ನಾಲ್ಕು ವೇದಾಭಿಷೇಕದಷ್ಟೇ ಫಲ ದೊರೆಯುವುದೆಂದು ನಂಬಲಾಗಿದೆ.

ಜ್ಞಾನವನ್ನು ಈಶ್ವರನಲ್ಲಿ ಬೇಡಬೇಕು. ಜ್ಞಾನ ಶಕ್ತಿಯೇ ಮನುಷ್ಯನನ್ನು ಪ್ರಾಣಿಗಳಿಂದ ಉನ್ನತನನ್ನಾಗಿ ಮಾಡಿದೆ. ಶಿವರಾತ್ರಿಯಂದು ಪೂಜೆ ಮುಗಿಸಿ, ಕಷ್ಟಮಯವಾದ ಈ ಸಂಸಾರ ಸಾಗರದಲ್ಲಿ ಮುಳುಗಿದ ನಮ್ಮನ್ನು ಅದರಿಂದ ಪಾರು ಮಾಡಿ, ಉದ್ಧರಿಸು ಎಂಬುದು ಶಿವನಲ್ಲಿ ಭಕ್ತರ ಒಕ್ಕೊರಲಿನ ಮೊರೆ. ಶಿವರಾತ್ರಿ ಈ ಮನುಕುಲಕ್ಕೆ ಕರಾಳ ರಾತ್ರಿಯಾಗದೆ ಖರ್ಜೂರ–ತುಪ್ಪದ ಚರಿತ್ರೆಯಾಗಲಿ ಎಂಬುದೆ ಶಿವನಲ್ಲಿ ಭಕ್ತರ ಸದಾಶಯ.

### ಶಿವರಾತ್ರಿಯ ದೃಷ್ಟಾಂತ :

**ಭಕ್ತ ಬೇಡನಿಗೊಲಿದ ಶಿವ :** ಶಿವಲಿಂಗಾಮೃತದಲ್ಲಿ ಶಿವನೇ ಪಾರ್ವತಿಗೆ ಈ ಕಥೆಯನ್ನು ಹೇಳಿದ್ದಾನೆ. ಪ್ರತ್ಯಂತವೆಂಬ ದೇಶದಲ್ಲಿ ಒಬ್ಬ ಬೇಡನಿದ್ದ. ಅವನು ಸದಾ ಬೇಟೆಯಾಡಿ ಜೀವಿಸುತ್ತಿದ್ದ. ಒಂದು ದಿನ ಹಗಲೆಲ್ಲ ಅಲೆದರೂ ಅವನಿಗೆ ಬೇಟೆ ಸಿಗಲಿಲ್ಲ. ರಾತ್ರಿ ಸರೋವರವೊಂದರ ಬಳಿ ಇದ್ದ ಬಿಲ್ವ ವೃಕ್ಷವನ್ನೇರಿ ಕುಳಿತುಕೊಂಡ. ಅಲ್ಲಿಗೆ ನೀರು ಕುಡಿಯಲು ಬರುವ ಪ್ರಾಣಿಗಳನ್ನು ಕೊಲ್ಲಲು ಹೊಂಚು ಹಾಕುತ್ತಿದ್ದ. ಅಂದು ಶಿವರಾತ್ರಿಯಾಗಿತ್ತು. ಆದರೆ ಬೇಡನಿಗೆ ಇದರ ಪರಿವೆ ಇರಲಿಲ್ಲ. ಬಿಲ್ವಪತ್ರೆ ವೃಕ್ಷದಡಿಯಲ್ಲಿ ಒಂದು ಬಯಲು ಲಿಂಗವಿತ್ತು. ಲಿಂಗದ ಬಗ್ಗೆಯೂ ಅವನಿಗೆ ಅರಿವು ಇರಲಿಲ್ಲ. ಅವನಿಗೆ ಅರಿವಿಲ್ಲದಂತೆ ದೃಷ್ಟಿಗೆ ಅಡ್ಡ ಬಂದ ಬಿಲ್ವಪತ್ರ ಎಲೆಗಳನ್ನು ಕಿತ್ತು ಬೀಸಾಡುತ್ತಲಿದ್ದ. ಮರದಡಿಯಲ್ಲಿದ್ದ ಶಿವಲಿಂಗವನ್ನು ಅವು ಮುಚ್ಚಿ ಹಾಕಿದವು. ಆ ಸಮಯಕ್ಕೆ ಒಂದು ತುಂಬು ಗರ್ಭಿಣಿಯಾದ ಜಿಂಕೆ ನೀರು ಕುಡಿಯಲು ಅಲ್ಲಿಗೆ ಬಂದಿತು. ಬೇಡ ಬಾಣ ಬಿಡಲು ಸನ್ನದ್ಧನಾದ ಇದನ್ನು ತಿಳಿದ ಜಿಂಕೆ ಬೇಡನಿಗೆ ಹೇಳಿತು. "ತುಂಬು ಗರ್ಭಿಣಿಯಾದ ನನ್ನನ್ನು ಕೊಂದು ಭ್ರೂಣ ಹತ್ಯಾ ಪಾಪಕ್ಕೆ ಗುರಿಯಾಗಬೇಡ. ಸ್ವಲ್ಪ ಸಮದಲ್ಲೇ ಪ್ರಸವಿಸಿದ ಬಳಿಕ ನಾನಾಗಿ ಇಲ್ಲಿಗೆ ಬಂದು ದೇಹ ಅರ್ಪಿಸುವೆ. ಶಿವನಾಣೆ ! ಶಿವನಾಣೆ !!" ಎಂದಿಂತು. ಬೇಡನಿಗೆ ಶಿವ ಶಬ್ದ ಕೇಳುತ್ತಲೇ ಅದರ ಮೇಲೆ ದಯೆ ತೋರಿ ಬಿಟ್ಟು ಬಿಟ್ಟನು. ನಿದ್ರೆ ತಡೆಯಲು ಪತ್ರೆ ಕಿತ್ತು ಎಸೆಯುತ್ತಲೇ ಇದ್ದನು. ಎರಡನೇ ಯಾಮದಲ್ಲಿ ಇನ್ನೊಂದು ಜಿಂಕೆ ಮೂರು ಮರಿಗಳೊಂದಿಗೆ ನೀರು ಕುಡಿಯಲು ಬಂದಿತು.

ಅದೂ ಸಹ ಬೇಡನನ್ನು ಕುರಿತು “ ಈ ಮರಿಗಳನ್ನು ಪತಿಯ ಹತ್ತಿರ ಬಿಟ್ಟು ಬರುವ ತನಕ ತಾಳಿಕೊ. ಇಲ್ಲವಾದರೆ ಅವು ನಾಶವಾಗುತ್ತವೆ” ಎಂದಾಗ ದಯೆ ಹುಟ್ಟಿ ಅದನ್ನೂ ಬೇಡ ಬಿಟ್ಟು ಬಿಟ್ಟ. ನಂತರ ಒಂದು ಗಂಡು ಜಿಂಕೆ ಬಂದಿತು. ಅದಕ್ಕೆ ಬಾಣ ಗುರಿಯಿಟ್ಟು ಹೊಡೆದನು. ಆಗ ಆ ಜಿಂಕೆ “ಶಿವ ಶಿವಾ ! ನನ್ನನ್ನೇಕೆ ಕೊಲ್ಲುವೆ ? ಈ ಮೊದಲು ದಯೆತೋರಿ ಬಿಟ್ಟ ಜಿಂಕೆಗಳು ನನಗಾಗಿ ಕಾಯುತ್ತಿವೆ. ಅವುಗಳೊಂದಿಗೆ ತಪ್ಪದೇ ಇಲ್ಲಿಗೆ ಬರುವೆ, ಶಿವನಾಣೆ” ಎಂದಾಗ ಮನಸ್ಸು ಕರಗಿ ಅದನ್ನು ಬಿಟ್ಟು ಬಿಟ್ಟ.

ರಾತ್ತಿ ಕೊಟ್ಟ ಮಾತಿನಂತೆ ಎಲ್ಲಾ ಜಿಂಕೆಗಳು, ಮರಿಗಳು ಬಂದು, ಈಗ ನಮ್ಮನ್ನು ಕೊಂದು ತಿನ್ನಬಹುದು ಎಂದಾಗ ಬೇಡನಲ್ಲಿ ತಳಮಳ ಶುರುವಾಯಿತು. ಉಷಃಕಾಲ ಸಮೀಪಿಸಿತ್ತು. ಬೇಡನ ಮನಸ್ಸು ಪರಿವರ್ತನೆಯಾಗಿತ್ತು. ಆಗ ಬೇಡನು, ಶಿವ! ಶಿವ!! ನಿಮ್ಮನ್ನು ಕೊಂದು ನಾನಾವ ನರಕಕ್ಕೆ ಹೋಗಲಿ ? ಎಂದು ಹೇಳಿ ಬಿಲ್ಲು, ಬಾಣ ಸರೋವರಕ್ಕೆ ಎಸೆದ. ಆ ದಿನ ಬೇಡನಿಗರಿವಿಲ್ಲದಂತೆ ನಿರಾಹಾರ, ಲಿಂಗಾರ್ಚನೆ, ಜಾಗರಣೆ, ಶಿವನಾಮ ಸ್ಮರಣೆ ಎಲ್ಲಾ ಆಗಿ, ಕಟ್ಟಾ ಶಿವರಾತ್ರಿಯ ಆಚರಣೆ ನಡೆದಿತ್ತು. ಶಿವನು ಬೇಡನ ಬಗ್ಗೆ ಪ್ರಸನ್ನನಾಗಿದ್ದ, ಕೂಡಲೇ ಅಲ್ಲಿಗೆ ಬಂದ ಶಿವಗಣಗಳು ಪುಷ್ಪಕ ವಿಮಾನದಲ್ಲಿ ಆ ಜಿಂಕೆಗಳೊಂದಿಗೆ ಕುಟುಂಬ ಸಹಿತ ಬೇಡನನ್ನು ಕುಳ್ಳಿರಿಸಿಕೊಂಡು ಕೈಲಾಸಕ್ಕೆ ಕರೆದೊಯ್ದರು. ಅವನನ್ನು ಬರಮಾಡಿಕೊಂಡ ಶಿವನು, ನಿನಗಷ್ಟೇ ಅಲ್ಲ, ನಿನ್ನ ಕಥೆ ಕೇಳಿದವರಿಗೂ ಕೈಲಾಸ ಪದವಿ ಖಚಿತ ಎಂದು ಭೂಲೋಕಕ್ಕೆ ಆಶ್ವಾಸನೆಯಿತ್ತನು. ಶಿವರಾತ್ರಿಯಂದು ಜಾಗರಣೆ, ಉಪವಾಸ ವ್ರತಾಚರಣೆ ಮಾಡುವುದರಿಂದ ಶಿವಸಾಕ್ಷಾತ್ಕಾರವಾಗುವುದೆಂಬ ನಂಬಿಕೆ ಬಲವಾಗಿದೆ.

**ಚಂದ್ರಸೇನ ದೊರೆಗೆ ಶಿವಾನುಗ್ರಹ :**

ಉಜ್ಜಯನಿಯ ಚಂದ್ರಸೇನ ದೊರೆ ಮಹಾ ಶಿವಭಕ್ತನಾಗಿದ್ದ. ನಿತ್ಯ ಅಲ್ಲಿಯ ಮಹಾ ಕಾಲೇಶ್ವರನನ್ನು ಪೂಜಿಸುತ್ತಿದ್ದ. ಶಿವಾನುಗ್ರಹ ಮತ್ತು ಅಂಗರಕ್ಷಕನಾದ ಮಣಿಭದ್ರನು ಕೊಟ್ಟ ಚಿಂತಾಮಣಿ ರತ್ನದ ಪ್ರಭಾವದಿಂದ ಇಂದ್ರನನ್ನು ಮೀರಿಸುವಷ್ಟು ಅಷ್ಟೈಶ್ವರ್ಯ, ಶ್ರೀಮಂತನಾಗಿದ್ದ. ಚಿಂತಾಮಣಿ ರತ್ನದ ಪ್ರಭಾವ ಕೇಳಿದ ಶತ್ರು ರಾಜರು ಆ ರತ್ನ ಕೇಳಿದರೂ ದೊರೆ ಕೊಡಲಿಲ್ಲ. ಇದರಿಂದ ಸಿಟ್ಟಿಗೆದ್ದ ಅವರೆಲ್ಲಾ ಸೇರಿ ರಾಜನ ಮೇಲೆ ಎರಗಿದರು.

ಅಂದು ಶನಿವಾರ ಶಿವರಾತ್ರಿ. ಅನಿರೀಕ್ಷಿತ ದಾಳಿಯಿಂದ ದಿಕ್ಕು ತೋಚದ ಚಂದ್ರಸೇನ ರಾಜ ಮಹಾಕಾಲೇಶ್ವರನನ್ನೇ ಮೊರೆಹೊಕ್ಕು ಪೂಜಾ ನಿರತನಾದ. ಆ ದೇವಾಲಯದ ಹೊರವಲಯದಲೇ ಬಡವಿಯೊಬ್ಬಳ ಗುಡಿಸಲಿತ್ತು. ಅವಳ ಐದು ವರ್ಷದ ಮಗ ಶ್ರೀಕರ, ರಾಜಾಚಂದ್ರಸೇನನು ಮಾಡುವ ಪೂಜೆ ನೋಡಿ, ತಾನೂ ಮಣ್ಣಿನ ಲಿಂಗ ಮಾಡಿ ಪೂಜಿಸತೊಡಗಿದ. ಅದೇ ಶನಿವಾರ ಶಿವರಾತ್ರಿಯ ಪ್ರದೋಷ ಕಾಲ. ತಾಯಿ ಮಗನ ಚೇಷ್ಟೆ ಕಂಡು, ಲಿಂಗ ಕಿತ್ತೆಸೆಯಲು ಹೊರಟಳು. ಶ್ರಿಕರ ಅಯ್ಯೋ ಎಂದು ಅಳುತ್ತ ಸ್ವಾಮಿ ‘ನನ್ನ ಸೇವೆ ಸ್ವೀಕರಿಸು, ನನ್ನ ತಾಯಿಗೆ ಒಳ್ಳೆ ಬುದ್ದಿ ಕೊಡು’ ಎಂದು ಒಂದೇ ಸಮನೆ ಬೇಡಿಕೊಳ್ಳತೊಡಗಿದ. ಅಗ ಹೊಳೆಯುವ ಚಿನ್ನದ ಲಿಂಗವಾಗಿ ಪ್ರಜ್ವಲಿಸಿತು. ಸ್ವರ್ಣ ದೇವಾಲಯ ನಿರ್ಮಾಣವಾಯಿತು. ಈ ಸುದ್ದಿ ಎಲ್ಲಡೆ ಹರಡಿತು. ಕೇಳಿದವರಿಗೆಲ್ಲ ಆಶ್ಚರ್ಯವಾಯಿತು. ಶತ್ರು ರಾಜರೂ ಈ ಸುದ್ದಿ ಕೇಳಿ ಆಶ್ಚರ್ಯಗೊಂಡರು. ವೈರತ್ವ ಬಿಟ್ಟು ಶಿವದರ್ಶನಕ್ಕೆ ಬಂದರು. ಚಂದ್ರಸೇನನೊಂದಿಗೆ ಮಿತ್ರತ್ವ ಬೆಳೆಸಿ, ಎಲ್ಲಾ ಒಟ್ಟಾಗಿ ಶಿವರಾತ್ರಿಯಂದು ಶಿವಪೂಜೆ, ಭಜನೆ, ಪಂಚಾಕ್ಷರಿ, ಕೀರ್ತನೆಗಳನ್ನು ವೈಭವದಿಂದ ನಡೆಸಿದರು. ಅವರೆಲ್ಲರಿಗೂ ಶಿವಾನುಗ್ರಹದಿಂದ ಇಹ-ಪರ, ಸುಖ-ಸಂಪತ್ತು ಸದ್ಗತಿ ದೊರಕಿದವು.

ಶಿವಾರಾಧನೆಗೆ ಐಶ್ವರ್ಯ, ಸಂಪತ್ತು, ಆಡಂಬರ ಯಾವುದೂ ಬೇಕಿಲ್ಲ. ಬೆಟ್ಟದ ಪತ್ರೆ, ಭಾವಿಯ ನೀರು, ಒಳ್ಳೆಯ ಭಾವನೆ ಇದ್ದರೆ ಸಾಕು. ಹೀಗೆ ಮಹಾಶಿವರಾತ್ರಿ ಪ್ರಾಂತ ಭೇದವಿಲ್ಲದೆ ಇಡೀ ದೇಶಾದ್ಯಂತ ಆಚರಿಸುವ ಉಪವಾಸ, ಜಾಗರಣೆ ಪ್ರಧಾನ ಹಬ್ಬವಾಗಿದೆ. ಇಂದ್ರಿಯ ನಿಗ್ರಹ, ದೇಹ ದಂಡನೆ ಇಲ್ಲಿ ಪ್ರಧಾನ್ಯವಾಗಿದೆ.

ವಿಳಾಸ : ಬಸವರಾಜ ಆಕಳವಾಡಿ, ಜಿಲ್ಲಾ ವಾರ್ತಾಧಿಕಾರಿ(ನಿವೃತ್ತ), ಸಂತೋಷ ನಿಲಯ,
ಸತ್ಯಧ್ಯಾನಪುರ ಬಡಾವಣೆ, ಕೊಪ್ಪಳ-583231.

ಯಶೋಗಾಥೆ

# ಸುವರ್ಣ ಗ್ರಾಮೋದಯ
# ನನದಿ ಗ್ರಾಮದ ಯಶೋಗಾಥೆ




**ಉಮೇಶ್‌ಹುಲಿಕುಂಟೆ**
ಮೊಬೈಲ್ : 9980801103


ಯಾವುದೇ ಯೋಜನೆಗಳು ಯಶಸ್ವಿಯಾಗಬೇಕಾದಲ್ಲಿ ಸ್ಥಳೀಯ ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿ ಸಿಬ್ಬಂದಿಗಳ ಪಾತ್ರ ಮಹತ್ತರವಾದುದ್ದು. ಇದಕ್ಕೆ ಉತ್ತಮ ಉದಾಹರಣೆ ಬೆಳಗಾವಿ ಜಿಲ್ಲೆಯ ನನದಿ ಗ್ರಾಮ. "ಸುವರ್ಣಗ್ರಾಮೋದಯ' ಯೋಜನೆಯ ಯಶಸ್ವಿ ಅನುಷ್ಠಾನದ ಯಶೋಗಾಥೆಯ ಚಿತ್ರಣ ಇಲ್ಲಿದೆ.

ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಹಾಗೂ ಡಾ: ಅಬ್ದುಲ್ ಕಲಾಂರವರ ಕನಸಿನಂತೆ ಹಳ್ಳಿಗಳನ್ನು ನಗರದ ಮಾದರಿಯಲ್ಲಿ ಅಭಿವೃದ್ಧಿಪಡಿಸುವ ಹಿನ್ನೆಲೆಯಲ್ಲಿ 'ಸುವರ್ಣ ಗ್ರಾಮೋದಯ' ಎಂಬ ವಿನೂತನ ಯೋಜನೆಯನ್ನು ಕರ್ನಾಟಕ ಸರ್ಕಾರವು ಐವತ್ತು ವರ್ಷಗಳು ತುಂಬಿದ ಸಂದರ್ಭದಲ್ಲಿ ಸಂಭ್ರಮಾಚರಣೆಯ ಸವಿನೆನಪಿಗಾಗಿ ರಾಜ್ಯಾದ್ಯಂತ ವಿವಿಧ ಹಂತಗಳಲ್ಲಿ ಜಾರಿಗೆ ತರಲಾಗಿದೆ.

ಸರ್ಕಾರಿ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದಲ್ಲಿ ಗ್ರಾಮಗಳ ಮೂಲ ಚಿತ್ರಣವೇ ಬದಲಾಗಿ ಹಳ್ಳಿಗಳ ಪರಿಸರ ಹಾಗೂ ಹಳ್ಳಿಗರ ಜೀವನ ಹಸನಾಗುತ್ತದೆ ಎಂಬುದು ನಿಜಕ್ಕೂ ಸತ್ಯ. ಈ ಆಶಯವನ್ನು ವಾಸ್ತವಕ್ಕೆ ತಂದು ಒಂದು ಮಾದರಿ ಯಶೋಗಾಥೆಯಾದ ಬೆಳಗಾವಿ ಜಿಲ್ಲೆ, ಚಿಕ್ಕೋಡಿ ತಾಲ್ಲೂಕಿನ ನನದಿ ಗ್ರಾಮದ ನೈಜ ಕಥೆ ಇದಾಗಿದೆ.

ಮೂರನೆಯ ಹಂತದ ಸುವರ್ಣ ಗ್ರಾಮೋದಯ ಯೋಜನೆಯಡಿ ಬೆಳಗಾವಿ ಜಿಲ್ಲೆ, ಚಿಕ್ಕೋಡಿ ತಾಲ್ಲೂಕಿನ ನನದಿ ಗ್ರಾಮ ಪಂಚಾಯತಿ ವ್ಯಾಪ್ತಿಯ ನನದಿ ಗ್ರಾಮವು ಸಹ ಒಂದಾಗಿದೆ. ಈ ಗ್ರಾಮವು 5030 ಜನಸಂಖ್ಯೆಯನ್ನು ಹೊಂದಿದ್ದು ಈ ಪೈಕಿ ಒಟ್ಟು ಹೆಣ್ಣು ಮಕ್ಕಳ ಸಂಖ್ಯೆ 2430 ಇದ್ದು ಅಭಿವೃದ್ಧಿಯಿಂದ ವಂಚಿತವಾಗಿದ್ದು ಅಷ್ಟೇ ಸತ್ಯವಾಗಿತ್ತು.

### ಯೋಜನೆಗಳ ಅನುದಾನ ಬಳಕೆ – ಸುವರ್ಣ ಗ್ರಾಮದ ಅಭಿವೃದ್ಧಿಗೆ ಬುನಾದಿ

ಈ ಸಂದರ್ಭದಲ್ಲಿ ಗ್ರಾಮದ ಸರ್ವತೋಮುಖ ಅಭಿವೃದ್ಧಿಗೆ ಸುವರ್ಣ ಗ್ರಾಮೋದಯ ಯೋಜನೆಯ ಮೂರನೇ ಹಂತದ ಯೋಜನೆಯಡಿಯಲ್ಲಿ ರೂ. 97.615 ಲಕ್ಷಗಳ ಅನುದಾನವನ್ನು ಸರ್ಕಾರವು ಬಿಡುಗಡೆ ಮಾಡಿರುತ್ತದೆ. ಈ ಅನುದಾನವಲ್ಲದೆ ವಿಶೇಷ ಘಟಕ ಯೋಜನೆಯಡಿಯ ಅನುದಾನವನ್ನು ಸುವರ್ಣ ಗ್ರಾಮೋದಯ ಯೋಜನೆಯ ಅನುದಾನದೊಂದಿಗೆ ಒಗ್ಗೂಡಿಸಿ ನನದಿ ಗ್ರಾಮದೊಳಗಿನ ರಸ್ತೆಗಳನ್ನು ಡಾಂಬರು ಮತ್ತು ಕಾಂಕ್ರೀಟ್‌ನಿಂದ ಅಭಿವೃದ್ಧಿಪಡಿಸಲಾಗಿದೆ.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುದಾನದಲ್ಲಿ ಚರಂಡಿಗಳನ್ನು ಪ್ರತ್ಯೇಕವಾಗಿ ಅಭಿವೃದ್ಧಿಪಡಿಸಲಾಗಿದೆ. ಈ ಕಾರಣದಿಂದಾಗಿ ನನದಿ ಗ್ರಾಮವು ಸುಂದರವಾಗಿ ಅಭಿವೃದ್ಧಿಗೊಳ್ಳಲು ಕಾರಣವಾಗಿರುತ್ತದೆ.





ಅಲ್ಲದೇ ಯೋಜನೆಯ ಅಡಿಯಲ್ಲಿ ಗ್ರಾಮದ ಮೂವತ್ತೊಂಭತ್ತು ಮಂದಿ ಯುವತಿಯರಿಗೆ ಹೊಲಿಗೆ ಮತ್ತು ಕಸೂತಿ ತರಬೇತಿ ಹಾಗೂ ಐವತ್ತು ಮಂದಿ ಯುವಕ ಯುವತಿಯರಿಗೆ ಕಂಪ್ಯೂಟರ್ ತರಬೇತಿ ನೀಡಲಾಗಿದೆ.

### ಸುಂದರ ಸಮುದಾಯ ಭವನ

ನನದಿ ಗ್ರಾಮದ ಎಲ್ಲಾ ಜನರಅನುಕೂಲಕ್ಕಾಗಿ ಸಭೆ ಸಮಾರಂಭಗಳನ್ನು ನಡೆಸಲು ಅನುಕೂಲವಾಗುವಂತೆ ಸಮುದಾಯ ಭವನ (ಅಂದಾಜು ವೆಚ್ಚ 33.10 ಲಕ್ಷಗಳು) ವನ್ನು ಅತ್ಯಂತ ಅಚ್ಚುಕಟ್ಟಾಗಿ ಸುಂದರವಾಗಿ ನಿರ್ಮಿಸಲಾಗಿದೆ. ಇದರಿಂದಾಗಿ ಸರ್ಕಾರಿ ಕಾರ್ಯಕ್ರಮಗಳನ್ನಲ್ಲದೇ ಊರಿನ ಧಾರ್ಮಿಕ ಹಾಗೂ ಮದುವೆ ಸಮಾರಂಭಗಳನ್ನು ನಡೆಸಲಾಗುತ್ತಿದೆ.

### ಗ್ರಾಮದ ಅಭಿವೃದ್ಧಿಯಲ್ಲಿ ಕ್ರಿಯಾಶೀಲ ಅಧಿಕಾರಿಗಳ ಪಾತ್ರ

ಯಾವುದೇ ಸರ್ಕಾರದ ಸವಲತ್ತುಗಳು ಜನರಿಗೆ ತಲುಪಿದಾಗ ಅವರ ಅಭಿವೃದ್ಧಿಯಲ್ಲಿ ಬದಲಾವಣೆಯನ್ನು ಕಾಣಬಹುದು. ಅದೇ ರೀತಿ ಅಭಿವೃದ್ಧಿ ಕಾಮಗಾರಿಗಳು ಗುಣಮಟ್ಟದೊಂದಿಗೆ ಅನುಷ್ಠಾನಗೊಂಡಾಗ ಗ್ರಾಮದ ಅಭಿವೃದ್ಧಿಯನ್ನು ನೋಡಬಹುದು. ನನದಿ ಗ್ರಾಮದ ಅಭಿವೃದ್ಧಿಯ ನೋಟದಲ್ಲಿ ಯೋಜನೆಯ ಅನುಷ್ಠಾನದ ಹೊಣೆಹೊತ್ತ ಕೆಆರ್‌ಐಡಿಎಲ್ ಸಂಸ್ಥೆ ಚಿಕ್ಕೋಡಿಯ ಉಪನಿರ್ದೇಶಕರಾದ ಟಿ.ಎಸ್. ಕಲಾದಗಿಯವರ ಕ್ರಿಯಾಶೀಲತೆಯನ್ನು ಕಾಣಬಹುದಾಗಿದೆ. ಇವರ ಮಾರ್ಗದರ್ಶನದಲ್ಲಿ ಕೆಆರ್‌ಐಡಿಎಲ್ ಸಂಸ್ಥೆಯ ಸ್ಥಳೀಯ ಶಾಖಾಧಿಕಾರಿ ಜಿ.ಎಸ್.ಕಲ್ಲೂರರವರ ಬದ್ಧತೆಯನ್ನು ಅಲ್ಲಿನ ಅಭಿವೃದ್ಧಿಯಲ್ಲಿ ಗುರುತಿಸಬಹುದಾಗಿದೆ. ಈ ಇಬ್ಬರನ್ನೂ ಅಲ್ಲಿನ ಜನತೆ ಸ್ಮರಿಸುವುದನ್ನು ಕೇಳಿ ಅಚ್ಚರಿಪಟ್ಟಿದ್ದೇನೆ. ಈ ಉತ್ತಮವಾದ ಕಾರ್ಯದಲ್ಲಿ ಜಿಲ್ಲಾ ಪಂಚಾಯ್ತಿ ಉಪಕಾರ್ಯದರ್ಶಿ (ಅಭಿವೃದ್ಧಿ) ಶ್ರೀ ಟಿ.ಎಂ.ಶಶಿಧರ್ ಅವರ ಪಾತ್ರ ಸ್ತುತ್ಯಾರ್ಹವಾದುದು. ಇಲ್ಲಿ ಗಮನಿಸಬೇಕಾದ ವಿಶೇಷವಾದ ಅಂಶಗಳೆಂದರೆ:

* ಕಾಮಗಾರಿಗಳನ್ನು ನಿರ್ವಹಿಸುವಾಗ ಯಾವುದೇ ಹಂತದಲ್ಲಿ ಗುಣಮಟ್ಟದಲ್ಲಿ ಕೊರತೆ ಉಂಟಾಗದಂತೆ ನಿರ್ವಹಣೆ ಮಾಡಲಾಗಿದೆ.
* ಕಾಮಗಾರಿಗಳನ್ನು ವೈಜ್ಞಾನಿಕವಾಗಿ ನಿರ್ವಹಿಸಿರುವುದು.
* ರಸ್ತೆಗಳಲ್ಲಿ ನೀರು ಸರಾಗವಾಗಿ ಚರಂಡಿಗಳಿಗೆ ಹರಿದುಹೋಗುವಂತೆ ನೋಡಿಕೊಂಡಿರುವುದು.
* ರಸ್ತೆ ಮಧ್ಯ ತಗ್ಗುಗಳು/ಹಳ್ಳಗಳು ಉಂಟಾಗದಂತೆ ನೋಡಿಕೊಂಡಿರುವುದು.
* ಸಮುದಾಯ ಭವನಗಳನ್ನು ಅತ್ಯಂತ ಗುಣಾತ್ಮಕವಾಗಿ ಹಾಗೂ ಆಕರ್ಷಕವಾಗಿರುವಂತೆ ನಿರ್ಮಿಸಿರುವುದು.
* ವಿವಿಧ ಯೋಜನೆಗಳ ಅನುದಾನವನ್ನು ಒಗ್ಗೂಡಿಸಿ ಅಭಿವೃದ್ಧಿಯನ್ನು ಕೈಗೊಂಡಿರುವುದು.

### ಹಾರ ತುರಾಯಿ ಬಯಸದ ಅಭಿವೃದ್ಧಿಯನ್ನು ಜಪಿಸುವ ಶಾಸಕ ಶ್ರೀ ಪ್ರಕಾಶ ಬಾ ಹುಕ್ಕೇರಿ



ಹಾರ ತುರಾಯಿ ಬಯಸದ, ಅಭಿವೃದ್ಧಿಯ ಕ್ರಿಯಾಶೀಲ, ದಣಿವರಿಯದ ಶ್ರಮಗಾರ, ಮಾತಿಗಿಂತ ಕೃತಿಲೇಸು, ಕಾಯಕವೇ ಕೈಲಾಸವೆಂದರಿತ ಅವಿರತ ದುಡಿಮೆಗಾರ, ಜನಾನುರಾಗಿ, ಸಮಾಜಮುಖಿ ಚಿಂತಕ ಸ್ಥಳೀಯ ಶಾಸಕರಾದ ಶ್ರೀ ಪ್ರಕಾಶ ಬಾ ಹುಕ್ಕೇರಿ ಅವರ ನಿರಂತರ ಶ್ರಮದ ಫಲವಾಗಿ ನನದಿ ಗ್ರಾಮವು ಉತ್ತಮವಾಗಿ ಅಭಿವೃದ್ಧಿ ಹೊಂದಿದೆ. ನಿಜಕ್ಕೂ "ಸುವರ್ಣ ಗ್ರಾಮ" ಎಂಬ ಹೆಸರಿಗೆ ತಕ್ಕಂತೆ ಯೋಜನೆಯ ಸಾಫಲ್ಯಕ್ಕೆ ಕಾರಣರಾಗಿದ್ದಾರೆ. ಶ್ರೀಯುತರು ತನ್ನ ಕ್ಷೇತ್ರದ ಅಭಿವೃದ್ಧಿಗಾಗಿ ಕಳಕಳಿಯಿಂದ ಕೆಲಸ ಮಾಡಿರುವುದನ್ನು ಗುರುತಿಸಿದ್ದೇವೆ.

### ಜನ ಹಾಗೂ ಜನಪ್ರತಿನಿಧಿಗಳ ಸಹಕಾರ

ಯಾವುದೇ ಒಂದು ಅಭಿವೃದ್ಧಿ ಯೋಜನೆಯನ್ನು ಅನುಷ್ಠಾನಗೊಳಿಸಿದ ನಂತರ ಭೌತಿಕ ರಚನೆಗಳ ಬಳಕೆ ಹಾಗೂ ನಿರ್ವಹಣೆ ಬಹಳ ಪ್ರಾಮುಖ್ಯತೆಯನ್ನು ವಹಿಸುತ್ತದೆ. ಈ ನಿಟ್ಟಿನಲ್ಲಿ ನನದಿ ಗ್ರಾಮದ ಜನತೆ ಹಾಗೂ ಜನ ಪ್ರತಿನಿಧಿಗಳು ಅಧಿಕಾರಿಗಳಿಗೆ ಉತ್ತಮ ಸಹಕಾರ ನೀಡಿರುತ್ತಾರೆ.

**ಸಂಸ್ಥಾಪಕರು, ಜೆಮ್ ಇಂಡಿಯಾ ಸಂಸ್ಥೆ ನಂ.5, 'ಕಲಾಭಾರತಿ' ನಿಲಯ, 4ನೇ ಕ್ರಾಸ್, ಎಂ.ಜಿ.ರಸ್ತೆ, ತುಮಕೂರು-572101.**

ಯಶೋಗಾಥೆ

# ಮಾದರಿಯಾಗುತ್ತಿರುವ ಕಡಬಗೆರೆ ಗ್ರಾಮ ಪಂಚಾಯಿತಿ

ಬೆಂಗಳೂರು ಜಿಲ್ಲೆಯ ಬೆಂಗಳೂರು ಉತ್ತರ ತಾಲ್ಲೂಕಿನ ದಾಸನಪುರ ವ್ಯಾಪ್ತಿಯಲ್ಲಿರುವ ಕಡಬಗೆರೆ ಗ್ರಾಮೊಂಚಾಯಿತಿ ಪ್ರಗತಿಪಥದತ್ತ ಸಾಗಿರುವ ಕುರಿತು ಕಿರು ಪರಿಚಯ.

ನಮ್ಮ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಮಹತ್ತರವಾದ ಜವಾಬ್ದಾರಿಯನ್ನು ನೀಡಲಾಗಿದೆ. ಸಂವಿಧಾನದ 73ನೇ ತಿದ್ದುಪಡಿಯ ಮೂಲಕ ಅನುಷ್ಠಾನಕ್ಕೆ ತರಲಾಗಿರುವ ಮೂರು ಹಂತಗಳ ಪಂಚಾಯತ್ ರಾಜ್ ವ್ಯವಸ್ಥೆಯು ಗ್ರಾಮೀಣಾಭಿವೃದ್ಧಿಯ ತಳಹದಿಯಾಗಿದೆ. ಪಂಚಾಯತ್ ರಾಜ್ ವ್ಯವಸ್ಥೆಯನ್ನು ನೇರ ಪ್ರಜಾಪ್ರಭುತ್ವ ಬುನಾದಿ ಎಂದೂ ಸಹ ಕರೆಯುತ್ತಾರೆ. ಪಂಚಾಯತ್ ರಾಜ್ ಸಂಸ್ಥೆಗಳ ಮೂರು ಹಂತಗಳಲ್ಲಿ ಜನರಿಗೆ ತೀರ ಹತ್ತಿರವಿರುವ ಸ್ಥಳೀಯ ಸರಕಾರ ಗ್ರಾಮ ಪಂಚಾಯತ್‌ಗಳು ಆರೋಗ್ಯಪೂರ್ಣವಾಗಿದ್ದು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾದರೆ ಮಾತ್ರ ಅಭಿವೃದ್ಧಿ ಕಾರ್ಯಕ್ರಮಗಳನ್ನು ವ್ಯವಸ್ಥಿತವಾಗಿ ಪಾರದರ್ಶಕತೆ ಅನುಷ್ಠಾನ ಮಾಡಲು ಸಾದ್ಯವಿದೆ. ಅಧಿಕಾರ ವಿಕೇಂದ್ರಿಕರಣ ಆಶಯಗಳಿಗೆ ಅನುಗುಣವಾಗಿ ಕಡಬಗೆರೆ ಗ್ರಾಮ ಪಂಚಾಯಿತಿಯು ಅಭಿವೃದ್ಧಿ ಪಥದಲ್ಲಿದೆ. ಇದನ್ನು ಮಾದರಿ ಗ್ರಾಮ ಪಂಚಾಯಿತಿಯಾಗಿಸುವಲ್ಲಿ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ಅವಿರತ ಪ್ರಯತ್ನ ಸಾಗಿದೆ.

ಬೆಂಗಳೂರು ಉತ್ತರ ತಾಲ್ಲೂಕು ದಾಸನಪುರ ಹೋಬಳಿಯಲ್ಲಿ ಬರುವ ಕಡಬಗೆರೆ ಗ್ರಾಮ ಪಂಚಾಯಿತಿಯಲ್ಲಿ ಹನ್ನೊಂದು ಗ್ರಾಮಗಳಿದ್ದು 2001ರ ಸಮೀಕ್ಷೆಯ ಪ್ರಕಾರ ಒಟ್ಟು ಜನಸಂಖ್ಯೆ 10550, ಹಾಗೂ 2284 ಕುಟುಂಬಗಳು ವಾಸವಾಗಿದೆ. ಈಗ 2012ರಲ್ಲಿ ಸುಮಾರು 18000ದಷ್ಟು ಜನಸಂಖ್ಯೆ ಹೆಚ್ಚಿದೆ. ಇಲ್ಲಿನ ಗ್ರಾಮಸ್ಥರಲ್ಲಿ ಶೇಕಡ 20ರಷ್ಟು ಮಾತ್ರ ವ್ಯವಸಾಯವನ್ನು ಅವಲಂಭಿಸಿದ್ದು ಉಳಿದವರು ಕಾರ್ಖಾನೆಗಳಲ್ಲಿ ಹಾಗೂ ಹಲವು ಉದ್ದಿಮೆಗಳಲ್ಲಿ ದಿನಗೂಲಿ ನೌಕರರಾಗಿ ಕೆಲಸ ಮಾಡುತ್ತಾರೆ.





**ಕಡಬಗೆರೆ ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಕಾರ್ಯಕ್ರಮಗಳು.**

### ನೀರು ಸರಬರಾಜು ವ್ಯವಸ್ಥೆ :–

ಸರ್ಕಾರ ರಚಿಸಿದ ನಿಯಮಗಳಿಗೊಳಪಟ್ಟು ನೀರು ಸರಬರಾಜಿನ ನಿರ್ವಹಣೆ, ನೀರಿನ ವಿತರಣೆ ವ್ಯವಸ್ಥೆ ಹಾಗೂ ನೀರಿನ ಯೋಜನೆಗಳ ರಕ್ಷಣೆಯನ್ನು ಮಾಡಲು ಗ್ರಾಮ ಪಂಚಾಯಿತಿಯು ಉಪವಿಧಿಗಳನ್ನು ರಚಿಸಬಹುದಾಗಿದೆ.

ಈ ಹಿಂದೆ ಕಡಬಗೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನೀರಿನ ಅತಿಯಾದ ಬಳಕೆಯಾಗುತ್ತಿದ್ದು ಗ್ರಾಮಸ್ಥರು ತೋಟ, ಹೊಲಗದ್ದೆಗಳಿಗೆ ಗ್ರಾಮ ಪಂಚಯಿತಿಯ ನೀರನ್ನೇ ಬಳಸುತ್ತಿದ್ದರು. ಒಂದೆಡೆ ಕೆಲವರು ಹೆಚ್ಚಿನ ಪ್ರಮಾಣದ ನೀರನ್ನು ಬಳಸುತ್ತಿದ್ದು ಇನ್ನೊಂದೆಡೆ ಜನರು ನೀರಿನ ಅಭಾವ ಅನುಭವಿಸಬೇಕಾಯಿತು. ಇದನ್ನು ಮನಗಂಡ ಗ್ರಾಮ ಪಂಚಾಯಿತಿಯು ನೀರಿನ ಸಮಸ್ಯೆಗೆ ಸೂಕ್ತ ಪರಿಹಾರ ಕಂಡುಹಿಡಿಯಲು ನಿರ್ಧರಿಸಿತು.

ಬೆಳೆಯುತ್ತಿರುವ ಜನಸಂಖ್ಯೆ, ಅಭಾವವಾಗುತ್ತಿರುವ ಜೀವಜಲ, ಬತ್ತಿ ಹೋಗುತ್ತಿರುವ ಅಂತರ್ಜಲ ಜೊತೆಗೆ ವ್ಯರ್ಥವಾಗಿ ಬಳಕೆಯಾಗುತ್ತಿರುವ ಜಲವನ್ನು ಸಮರ್ಪಕವಾಗಿ ನಿರ್ವಹಿಸಿ ಗ್ರಾಮ ಪಂಚಾಯಿತಿಯ ಎಲ್ಲಾ ಜನರಿಗೂ ನೀರನ್ನು ಒದಗಿಸುವ ದೃಷ್ಟಿಯಿಂದ ಕಡಬಗೆರೆ ಗ್ರಾಮ ಪಂಚಾಯಿತಿಯು 2012–13ನೇ ಸಾಲಿನಲ್ಲಿ ಮಹತ್ವದ ತೀರ್ಮಾನವೊಂದನ್ನು ಕೈಗೊಂಡಿತು. ಅದರಂತೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮನೆಗಳಿಗೆ ನೀರಿನ ಸಂಪರ್ಕ ಪಡೆಯುವ ಪ್ರತಿ ಸಂಪರ್ಕಕ್ಕೆ ಮೀಟರ್‌ಗಳನ್ನು ಅಳವಡಿಸಿ ಮಾಸಿಕವಾಗಿ ನೀರಿನ ದರವನ್ನು ವಸೂಲಿ ಮಾಡಲು ನಿರ್ಧರಿಸಿತು. ಈ ನಿರ್ಧಾರ ಕೇವಲ ನಿರ್ಧಾರವಾಗದೆ ಕಾರ್ಯಗತವಾಗಿದೆ. ಇದರ ಪ್ರಕಾರ ಪ್ರತಿ ಸಂಪರ್ಕಕ್ಕೆ ಮೀಟರ್ ಅಳವಡಿಕೆ ವೆಚ್ಚವಾಗಿ 2000ರೂಗಳನ್ನು ಹಾಗೂ 3ಲೀಟರ್‌ಗೆ 10ಪೈಸೆಯಂತೆ ನೀರಿನ ದರವನ್ನು ನಿಗದಿಗೊಳಿಸಲಾಗಿದೆ. ಬಳಸಿದ ಒಟ್ಟು ನೀರಿನ ಪ್ರಮಾಣಕ್ಕನುಗುಣವಾಗಿ ಮಾಸಿಕವಾಗಿ ನೀರಿನ ದರವನ್ನು ವಸೂಲಿ ಮಾಡಲು ಕ್ರಮಕೈಗೊಳ್ಳಲಾಗಿದೆ. ಮೀಟರ್‌ಗಳನ್ನು ಅಳವಡಿಸಲಾಗಿದ್ದು ನೀರಿನ ಸಮಸ್ಯೆ ಬಹು ಪಾಲು ಕಡಮೆಯಾಗಿದೆ ನೀರು ಮಿತಬಳಕೆಯಾಗುತ್ತಿದ್ದು, ನೀರು ವ್ಯರ್ಥವಾಗುವುದು ಕಡಿಮೆಯಾಗಿದೆ. ನೀರಿನ ವಂತಿಗೆಯಿಂದ ಬಂದ ಹಣವನ್ನು ಮತ್ತೆ ಕುಡಿಯುವ ನೀರಿನ ನಿರ್ವಹಣೆಗೆ ಉಪಯೋಗಿಸಲಾಗುತ್ತಿದೆ.

### ಸಾಮಾನ್ಯ ಸಭೆಯ ನೇರಪ್ರಸಾರ :–

ಅಧಿಕಾರ ವಿಕೇಂದ್ರಿಕರಣ ವ್ಯವಸ್ಥೆಯಲ್ಲಿ ಮೂರು ಹಂತಗಳ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಸಂವಿಧಾನದ 73ನೇ ತಿದ್ದುಪಡಿಯ ಮೂಲಕ ನಾವು ಅಳವಡಿಸಿಕೊಂಡಿದ್ದೇವೆ. ಮೂರು ಹಂತಗಳ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಅತ್ಯಂತ ತಳಹಂತದಲ್ಲಿರುವ ಗ್ರಾಮ ಪಂಚಾಯತ್‌ಗಳನ್ನು ಗ್ರಾಮ ಸರ್ಕಾರಗಳೆಂದು ಕರೆಯುತ್ತಾರೆ. ಜನರಿಗೆ ತೀರ ಹತ್ತಿರದಲ್ಲಿರುವ ಗ್ರಾಮ ಪಂಚಾಯಿತಿಗಳು ಜನರಿಗೆ ಉತ್ತರದಾಯಿತ್ವವನ್ನು ಹೊಂದಿದ್ದು ಅವರ ಆಶೋತ್ತರಗಳನ್ನು ಈಡೇರಿಸುವಲ್ಲಿ ಪ್ರಾಮಾಣಿಕವಾಗಿ ಮತ್ತು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಬೇಕಾಗಿದೆ. ಈ ನಿಟ್ಟಿನಲ್ಲಿ ಕಡಬಗೆರೆ ಗ್ರಾಮ ಪಂಚಾಯಿತಿಯ ಮಾಸಿಕ ಸಾಮಾನ್ಯ ಸಭೆಯನ್ನು ಸ್ನೇಹ ಚಾನಲ್ ಮುಖಾಂತರ ದೂರದರ್ಶನದಲ್ಲಿ ಪ್ರಸಾರ ಮಾಡಲು 2012–13ನೇ ಸಾಲಿನಿಂದ ಆರಂಭಿಸಿದ್ದು ಇದುವರೆವಿಗೂ 7 ಸಾಮಾನ್ಯ ಸಭೆಗಳನ್ನು ನಡೆಸಲಾಗಿದೆ. 2 ದಿನಗಳ ಮೊದಲೇ ಸಾಮಾನ್ಯ ಸಭೆ ನಡೆಯುವ ವೇಳೆಯನ್ನು ಜನಸಾಮಾನ್ಯರಿಗೆ ತಿಳಿಸಲಾಗಿರುತ್ತದೆ. ಈ ಸಾಮಾನ್ಯ ಸಭೆಯ ನೇರ ಪ್ರಸಾರವು ಕಡಬಗೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲದೆ ನೆರೆಯ ತಾವರೆಕೆರೆ ಹಾಗೂ ಕಿತ್ತನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ

ಗ್ರಾಮಗಳಲ್ಲೂ ಸಹ ಭಿತ್ತರವಾಗುತ್ತಿದೆ. ಇದರಿಂದ ಗ್ರಾಮಪಂಚಾಯಿತಿಯ ಆಡಳಿತದಲ್ಲಿ ಪಾರದರ್ಶಕತೆ ಸಾಧಿಸಲಾಗಿದ್ದು, ಜನರಿಗೆ ವಿವಿಧ ಯೋಜನೆಗಳು ಹಾಗೂ ಚರ್ಚಿಸಲಾದ ಹಲವು ವಿಚಾರಗಳ ಬಗ್ಗೆ ಮಾಹಿತಿಯನ್ನು ನೇರವಾಗಿ ಒದಗಿಸಲಾಗುತ್ತಿದೆ. ಜನರಿಗೆ ತಮ್ಮ ಸ್ಥಳೀಯ ಸರ್ಕಾರ ಹಾಗೂ ಜನಪ್ರತಿನಿಧಿಗಳ ಸಂಪೂರ್ಣ ಮಾಹಿತಿ ಲಭ್ಯವಾಗುವುದರೊಂದಿಗೆ ಆಡಳಿತದಲ್ಲಿ ಭಾಗವಹಿಸುವಿಕೆಯ ಅರ್ಥವನ್ನು ಸಾಕಾರಗೊಳಿಸಿದಂತಾಗಿದೆ. ಲೋಕಸಭೆ, ವಿಧಾನಸಭೆ ಅಧಿವೇಶನಗಳನ್ನು ಪ್ರಸಾರಮಾಡಿದ ರೀತಿಯಲ್ಲಿ ಸ್ಥಳೀಯ ಸಂಸ್ಥೆಗಳ ಸಭೆಯ ನೇರಪ್ರಸಾರದಿಂದ ಜನರಿಗೆ ಗ್ರಾಮ ಪಂಚಾಯಿತಿಗಳ ಕಾರ್ಯ ವೈಖರಿ ಬಗ್ಗೆ ಸ್ಪಷ್ಟ ಚಿತ್ರಣ ದೊರೆಯುತ್ತದೆ.

ಪ್ರಸ್ತುತವಾಗಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಸ್ನೇಹ ಚಾನಲ್ ಕೇಬಲ್ ಮಾಲೀಕರು ಸಾಮಾನ್ಯ ಸಭೆಯನ್ನು ಮಾತ್ರ ನೇರ ಪ್ರಸಾರವನ್ನು ಉಚಿತವಾಗಿ ಪ್ರಸಾರಪಡಿಸುತ್ತಿದ್ದು ಇನ್ನು ಮುಂದೆ ಗ್ರಾಮ ಸಭೆ ಹಾಗು ವಿಶೇಷ ಗ್ರಾಮ ಸಭೆಗಳನ್ನು ಸಹ ಪ್ರಸಾರ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಪಂಚಾಯಿತಿ ವ್ಯಾಪ್ತಿಯ ಬೇರೆ ಯಾವುದೇ ಕೇಬಲ್ ಆಪರೇಟರ್‌ಗಳು ಸಭೆಯ ನೇರ ಪ್ರಸಾರವನ್ನು ಮಾಡಲು ಇಚ್ಛಿಸಿದಲ್ಲಿ ಗ್ರಾಮ ಪಂಚಾಯಿತಿಯು ಅವರನ್ನು ಸ್ವಾಗತಿಸುತ್ತದೆ.

* 2012-13ನೇ ಸಾಲಿಗೆ ಗ್ರಾಮ ಪಂಚಾಯಿತಿಗೆ ನಿಗದಿಯಾದ ಡಿಸಿಬಿ ರೂ.7866941/-ಗಳು 2012ರ ಡಿಸೆಂಬರ್ ವೇಳೆಗೆ ಗ್ರಾಮ ಪಂಚಾಯಿತಿಯ ವಸೂಲಾತಿ ರೂ.8364554/-ಗಳಾಗಿದೆ.

* ಗ್ರಾಮ ಪಂಚಾಯಿತಿಯ ಸುಸಜ್ಜಿತವಾದ ಹಾಗೂ ವಿಶಾಲವಾದ ಕಟ್ಟಡವನ್ನು ಸ್ಥಳೀಯ ಜನಪ್ರತಿನಿಧಿಗಳು, ಗ್ರಾಮಸ್ಥರು ಹಾಗು ದಾನಿಗಳು ಸ್ವಯಂ ಪ್ರೇರಣೆಯಿಂದ ನಿರ್ಮಿಸಿದ್ದು ಇತರೆ ಯಾವುದೇ ಯೋಜನೆಯಡಿ ನಿರ್ಮಿಸಿರುವುದಿಲ್ಲ. ಈ ಕಛೇರಿಯಲ್ಲಿ ಸಾರ್ವಜನಿಕರಿಗೆ ಹಾಗೂ ಸಿಬ್ಬಂದಿಗೆ ಅನುಕೂಲಕರವಾದ ವಾತಾವರಣವನ್ನು ಕಲ್ಪಿಸಿದ್ದು, ಆಕ್ವಗಾರ್ಡ್ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಲಾಗಿದೆ.

* 2011-12ರಲ್ಲಿ ಇಂದಿರಾ ಆವಾಜ್ ವಸತಿ ಯೋಜನೆಯಡಿ ಅನುಮೋದಿತವಾದ 36 ಫಲಾನುಭವಿಗಳಲ್ಲಿ 26 ಫಲಾನುಭವಿಗಳ ಮನೆಗಳು ಪ್ರಗತಿಯಲ್ಲಿದ್ದು 2012-13ನೇ ಸಾಲಿನಲ್ಲಿ 9 ಲಕ್ಷ ರೂಗಳ ಸಹಾಯಧನ ನೀಡಲಾಗಿದೆ.

* 2012-13ನೇ ಸಾಲಿಗೆ ವರ್ಗ 1 ರಡಿ ರೂ.5482568/- ಲಕ್ಷಗಳ ಕಾಮಗಾರಿಗಳನ್ನು ಮಾಡಿದ್ದು, ಗ್ರಾಮ ಪಂಚಾಯಿತಿಯ ಬಹುತೇಕ ಎಲ್ಲಾ ಗ್ರಾಮಗಳಿಗೆ ಉತ್ತಮ ಕಾಂಕ್ರೀಟ್ ರಸ್ತೆ ಹಾಗೂ ಚರಂಡಿ ವ್ಯವಸ್ಥೆಯನ್ನು ಮಾಡಲಾಗಿದೆ.

* 13ನೇ ಹಣಕಾಸಿನಡಿ 2012-13ನೇ ಸಾಲಿನಲ್ಲಿ ಬಿಡುಗಡೆಯಾದ ರೂ.916267/- ಅನುದಾನದಲ್ಲಿ ರೂ.718072/-ಗಳನ್ನು ಕುಡಿಯುವ ನೀರಿನ ಪೈಪ್ ಲೈನ್ ಕಾಮಗಾರಿ ಹಾಗೂ ಅಂಗನವಾಡಿ ಕಟ್ಟಡಕ್ಕಾಗಿ, 113121ರೂಗಳನ್ನು ಮೋಟಾರ್‌ಗಳ ಖರೀದಿಗೆ ಹಾಗೂ ಸೆಸ್‌ಗಾಗಿ ರೂ.35872/- ಗಳನ್ನು ಪಾವತಿಸಲಾಗಿದೆ.

* 22.5 ರ ಕಾರ್ಯಕ್ರಮದಡಿ ಪರಿಶಿಷ್ಟ ಜಾತಿ ಜನತೆಗೆ ಮೀಸಲಿಟ್ಟ ರೂ.1439665/- ಗಳಲ್ಲಿ ಎಸ್.ಸಿ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯಗಳಾದ ರಸ್ತೆ, ಚರಂಡಿ ಹಾಗು 2011-12ನೇ ಸಾಲಿನಲ್ಲಿ 7ನೇ ಹಾಗೂ 10ನೇ ತರಗತಿಯಲ್ಲಿ ಅಧಿಕ ಅಂಕಗಳಿಸಿ ಉತ್ತೀರ್ಣರಾದ ಸರ್ಕಾರಿ ಶಾಲೆಯ ಮಕ್ಕಳಿಗೆ ಪ್ರೋತ್ಸಾಹ ಧನವನ್ನು ನೀಡಲಾಯಿತು.

* ಕಡಬಗೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಾಗಡಿ ಮುಖ್ಯರಸ್ತೆಯಿಂದ ಕಡಬಗೆರೆ ಗ್ರಾಮ ಪಂಚಾಯಿತಿವರೆಗೆ ರಸ್ತೆಯ ಬದಿಯಲ್ಲಿ ಮರ್‌ಕ್ಯುರಿ ಬೀದಿ ದೀಪಗಳನ್ನು ಅಳವಡಿಸಲಾಗಿದೆ.

* ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸರ್ಕಾರದ ಆದೇಶದಂತೆ ಸಿ.ಎಫ್.ಎಲ್ ಬಲ್ಬುಗಳನ್ನು ಹಾಗೂ ಐಮಾಸ್ಕ್ ಲೈಟನ್ನು ಅಳವಡಿಸಲಾಗಿದೆ.

* ಕಡಬಗೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಮಾಗಡಿ ಮುಖ್ಯರಸ್ತೆಯಲ್ಲಿ ಅರ್ಕಾವತಿನಗರದಲ್ಲಿ ಹೈಮಾಸ್ಕ್ ಅಳವಡಿಸಿದ್ದು ಹಾಗೂ ಪಾರ್ಕ್ ನಿರ್ಮಿಸಿ ಅಭಿವೃದ್ಧಿಪಡಿಸಲಾಗಿದೆ.

ಯಶೋಗಾಥೆ

## ಯಶಸ್ವಿಯತ್ತ ದಾಪುಕಾಲು ಹಾಕುತ್ತಿರುವ ಲಾಯಿಲ ಗ್ರಾಮ ಪಂಚಾಯತ್

ಸಂಪೂರ್ಣ ಸ್ವಚ್ಛತಾ ಆಂದೋಲನ ಕಾರ್ಯಕ್ರಮದಲ್ಲಿ ರಾಜ್ಯಕ್ಕೆ ಮಾದರಿಯಾಗಿ ಗ್ರಾಮ ಪಂಚಾಯತ್ ಮಟ್ಟದಲ್ಲಿ ಘನ ತ್ಯಾಜ್ಯ ನಿರ್ವಹಣಾ ಘಟಕ ರಚಿಸಿ ತ್ಯಾಜ್ಯದಿಂದ ಲಾಯಿಲ ಗೋಲ್ಡ್ ಎಂಬ ಹೆಸರಿನಲ್ಲಿ ಕೃಷಿಗೆ ಅವಿಭಾಜ್ಯವಾದ ಸಾವಯವ ಗೊಬ್ಬರದ ಉತ್ಪಾದನೆಯನ್ನು ಮಾಡಲಾಗಿದೆ.

ಪ್ರಕೃತಿ ಮಾತೆಯ ಮಡಿಲಲ್ಲಿ ಪಸರಿಸಿರುವ ಮಲೆನಾಡ ತಪ್ಪಲಿನ ಬುಡದಲ್ಲಿ ಪಚ್ಚೆ ಪೈರಿನ ಮಧ್ಯೆ ಇಕ್ಕೆಲಗಳಲ್ಲಿ ಹರಿಯುತ್ತಿರುವ ನೇತ್ರಾವತಿ ನದಿಯ ಕಿನಾರೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಲಾಯಿಲ ಗ್ರಾಮ ಪಂಚಾಯತ್, ಶ್ರೀ ಕ್ಷೇತ್ರ ಧರ್ಮಸ್ಥಳ ಮಂಜುನಾಥನ ಕೃಪೆಯಿಂದ ಹತ್ತು ಹಲವು ವೈಶಿಷ್ಟ್ಯತೆಗಳೊಂದಿಗೆ ತಲೆ ಎತ್ತಿ ನಿಂತಿದೆ.

ಒಂದೆಡೆಯಿಂದ ಹೆಡೆ ಎತ್ತಿ ನಿಂತು ಪ್ರವಾಸಿಗರನ್ನು ಕೈ ಬೀಸಿ ಕರೆಯುತ್ತಿರುವ ಪುರಾತನ ಪ್ರಸಿದ್ಧ ಜಮಲಾಬಾದ್ ಕೋಟೆ ಎಂದು ನಾಮಾಂಕಿತ 'ಗಡಾಯಿ ಕಲ್ಲು'. ಅದರ ಬುಡದಲ್ಲಿ ಮಾಜಿ ಪ್ರಧಾನಿಯೋರ್ವರು ಮಹಾ ಚಂಡಿಕಾ ಯಾಗ ನಡೆಸಿದ ಪ್ರಸಿದ್ದ ಚಂದ್ಕೂರು ದುರ್ಗಾಪರಮೇಶ್ವರಿ ದೇವಸ್ಥಾನ, ಅನತಿ ದೂರದಲ್ಲಿ ಶ್ರೀ ವೆಂಕಟರಮಣ ದೇವಸ್ಥಾನ ಇವೆಲ್ಲದರ ಮಧ್ಯೆ 1859 ಹೆಕ್ಟೇರ್ ಭೌಗೋಳಿಕ ವಿಸ್ತೀರ್ಣ ಹೊಂದಿ 7280 ಜನಸಂಖ್ಯೆ ಇರುವ ಲಾಯಿಲ ಗ್ರಾಮ ಪಂಚಾಯಿತಿಯು ಸದ್ದಿಲ್ಲದೆ ರಾಮ ರಾಜ್ಯದ ಕನಸನ್ನು ಹೊತ್ತು ಅಭಿವೃದ್ಧಿ ಪಥದತ್ತ ಅಂಬೆಗಾಲಿಡುತ್ತಿದೆ.

ಈಗಾಗಲೇ ಕೇಂದ್ರ ಸರಕಾರದಿಂದ "ನಿರ್ಮಲ ಗ್ರಾಮ ಪುರಸ್ಕಾರ"ವನ್ನು ಪಡೆದು ಗ್ರಾಮವನ್ನು ಸ್ವಚ್ಛತೆಯೆಡೆಗೆ ಕೊಂಡೊಯ್ಯುವಲ್ಲಿ ಸಫಲತೆಯನ್ನು ಕಂಡಿದೆ. ಹಾಗೂ ಗ್ರಾಮ ಸಭೆಯನ್ನು ಮತ್ತು ಗ್ರಾಮ ಸಭೆಗಳಲ್ಲಿ ಜನರಿಂದ ಬಂದ ಬೇಡಿಕೆಗಳಿಗೆ ಉತ್ತಮವಾಗಿ ಸ್ಪಂದಿಸಿ ಕೇಂದ್ರ ಸರಕಾರದಿಂದ ರಾಷ್ಟ್ರೀಯ ಗೌರವ ಗ್ರಾಮ ಸಭಾ ಪುರಸ್ಕಾರವನ್ನು ಪಡಕೊಂಡಿರುತ್ತದೆ. ಹಿಂದು, ಮುಸ್ಲಿಂ. ಕ್ರೈಸ್ತ ಬಂಧುಗಳು ಅನ್ಯೋನ್ಯತೆಯಿಂದ ಬದುಕುತ್ತಿರುವ ಈ ಪಂಚಾಯತ್ ವ್ಯಾಪ್ತಿಯಲ್ಲಿ ಅಡಿಕೆ, ಭತ್ತ, ತೆಂಗು, ಕುಂಬಾರಿಕೆ, ರಬ್ಬರ್





ಕೃಷಿಗಳ ಜತೆಗೆ ಬೀಡಿ ಕಾರ್ಮಿಕರು, ಕೂಲಿ ಕಾರ್ಮಿಕರು ಅತ್ಯಂತ ಸಹೃದಯ ಸಹಕಾರದಿಂದ ಬದುಕುತ್ತಿದ್ದಾರೆ. ಪ್ರಸ್ತುತ ಲಾಯಿಲ ಗ್ರಾಮ ಪಂಚಾಯಿತಿಯಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು ಸೇರಿ 19 ಮಂದಿ ಸದಸ್ಯರಿರುತ್ತಾರೆ. ಶ್ರೀಮತಿ ಜಯಂತಿ ಅಧ್ಯಕ್ಷರಾಗಿ, ಶ್ರೀ ಕೆ. ಸದಾನಂದ ಶೆಟ್ಟಿ ಉಪಾಧ್ಯಕ್ಷರಾಗಿ, ಶ್ರೀ ಪಿ.ಹೆಚ್ ಪ್ರಕಾಶ್ ಶೆಟ್ಟಿ ನೊಚ್ಚ ಇವರು ಅಭಿವೃದ್ಧಿ ಅಧಿಕಾರಿಯಾಗಿ ಸಿಬ್ಬಂದಿ ವರ್ಗದ ಸಹಯೋಗದಿಂದ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಾ, ಸರಕಾರದ ವಿವಿಧ ಯೋಜನೆಗಳನ್ನು ಗ್ರಾಮೀಣ ಪರಿಸರದ ಜನರ ಮನೆ ಬಾಗಿಲಿಗೆ ಮುಟ್ಟಿಸುವಂತಹ ಪ್ರಮಾಣಿಕ ಪ್ರಯತ್ನದಲ್ಲಿ ಗ್ರಾ.ಪಂ. ತನ್ನನ್ನು ತಾನು ತೊಡಗಿಸಿಕೊಂಡಿದೆ.

### ಸಂಪೂರ್ಣ ನೈರ್ಮಲ್ಯ ಆಂದೋಲನ ಫಲಶ್ರುತಿ – ಬಯಲು ಮಲ ವಿಸರ್ಜನೆ ಮುಕ್ತ ಗ್ರಾಮ:

ಲಾಯಿಲ ಗ್ರಾಮ ಪಂಚಾಯತ್ ವ್ಯಾಪ್ತಿಯ ಎಲ್ಲಾ ಮನೆಗಳು ಕಡ್ಡಾಯ ಶೌಚಾಲಯವನ್ನು ಹೊಂದಿದ್ದು,



ಶೇ 100 ರಷ್ಟು ಪ್ರಗತಿ ಸಾಧಿಸಿದೆ. ಬಡಕುಟುಂಬಗಳಿಗೆ ಗ್ರಾಮ ಪಂಚಾಯತದಿಂದ ಆರ್ಥಿಕ ನೆರವು ನೀಡಿ ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಗ್ರಾಮದಲ್ಲಿ ಸಂಪೂರ್ಣ ಬಯಲು ಮಲ ವಿಸರ್ಜನೆಯನ್ನು ನಿಷೇದ ಮಾಡಲಾಗಿದೆ ಮತ್ತು ಸ್ವಚ್ಛತಾ ನೀತಿಯನ್ನು ಜಾರಿ ಮಾಡಲಾಗಿದೆ. ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸುವಂತಹ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಸ್ವಚ್ಛತಾ ಉತ್ಸವ, ಸ್ವಚ್ಛತಾ ಜಾಥಾ, ಬೀದಿ ನಾಟಕ, ವಿಶ್ವ ಕೈ ತೊಳೆಯುವ ದಿನಾಚರಣೆ ಮತ್ತು ಮನೆ ಮನೆಗೆ ತೆರಳಿ ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸಲಾಗಿದೆ.

### ಪ್ಲಾಸ್ಟಿಕ್ ಮುಕ್ತ ಗ್ರಾಮದಡೆಗೆ ಹೆಜ್ಜೆ :

ಪ್ಲಾಸ್ಟಿಕ್ ಬಳಕೆಯನ್ನು ಗ್ರಾಮದಲ್ಲಿ ಸಂಪೂರ್ಣ ನಿಷೇದಿಸಿ ಸಾಂಕೇತಿಕವಾಗಿ ಗ್ರಾಮ ಪಂಚಾಯತ್‌ದಿಂದ



ಬಟ್ಟೆ ಕೈ ಚೀಲಗಳನ್ನು ಬಿಡುಗಡೆ ಮಾಡಲಾಗಿದೆ ಜನರಿಗೆ ಪ್ಲಾಸ್ಟಿಕ್ ದುಷ್ಪರಿಣಾಮದ ಬಗ್ಗೆ ಅರಿವು ಜಾಗೃತಿ ಮೂಡಿಸಲಾಗಿದೆ. ಗ್ರಾಮ ಪಂಚಾಯತ್ ಸಾಮಾನ್ಯ ಸಭೆಯ ನಿರ್ಣಯದಂತೆ ದಿ: 1.12.2012 ರಿಂದ ಪ್ಲಾಸ್ಟಿಕ್ ಬಳಕೆಯ ನಿಯಂತ್ರಣಕ್ಕಾಗಿ ಕ್ರಮಕೈಗೊಳ್ಳಲಾಗುತ್ತಿದೆ.

### ದಿನ ನಿತ್ಯದ ತ್ಯಾಜ್ಯದಿಂದ ಸಾವಯವ ಗೊಬ್ಬರ :

ಮುಂದುವರಿದು ನೈರ್ಮಲ್ಯದಡಿ ಸುಸ್ಥಿರತೆಯನ್ನು ಕಾಯ್ದುಕೊಳ್ಳುವ ಉದ್ದೇಶದಿಂದ ಸಂಪೂರ್ಣ ಸ್ವಚ್ಛತಾ ಆಂದೋಲನ (ನಿರ್ಮಲ ಭಾರತ್ ಅಭಿಯಾನ) ಕಾರ್ಯಕ್ರಮದಲ್ಲಿ ರಾಜ್ಯಕ್ಕೆ ಮಾದರಿಯಾಗಿ ಗ್ರಾಮ ಪಂಚಾಯತ್ ಮಟ್ಟದಲ್ಲಿ ಘನ ತ್ಯಾಜ್ಯ ನಿರ್ವಹಣಾ ಘಟಕ ರಚಿಸಿ ತ್ಯಾಜ್ಯದಿಂದ ಲಾಯಿಲ ಗೋಲ್ಡ್ ಎಂಬ ಹೆಸರಿನಲ್ಲಿ ಕೃಷಿಗೆ ಅವಿಭಾಜ್ಯವಾದ ಸಾವಯವ



ಗೊಬ್ಬರದ ಉತ್ಪಾದನೆಯನ್ನು ಮಾಡಲಾಗಿದೆ.

ನಿರ್ಮಲ ಗ್ರಾಮ ಪುರಸ್ಕಾರ ಪಡೆದ ಲಾಯಿಲ ಗ್ರಾಮ ಪಂಚಾಯತ್‌ನ ಆಯಾಯ ಪ್ರದೇಶದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯಗಳ ವಿಧ, ಪ್ರಮಾಣಕ್ಕೆ ಅನುಗುಣವಾಗಿ ಸರಳ ಮಿತವ್ಯಯ ವೈಜ್ಞಾನಿಕ ನಿರ್ವಹಣೆಗೆ ಮೈಸೂರಿನಲ್ಲಿ ಭಗೀರಥ ಸಂಸ್ಥೆಯ ತಂತ್ರಜ್ಞಾನದ ಬಗ್ಗೆ ಅಧ್ಯಾಯನ ನಡೆಸಿ ಬಹಳ ಆಸಕ್ತಿಯಿಂದ ಯೋಜನೆಯನ್ನು ತನ್ನಾದಾಗಿಸಿಕೊಂಡ ಲಾಯಿಲ ಗ್ರಾಮ ಪಂಚಾಯತ್ ಘನ ತ್ಯಾಜ್ಯ ವಿಲೇವಾರಿಗಾಗಿ ರೂ 9.00 ಲಕ್ಷದ ಕ್ರಿಯಾಯೋಜನೆಯನ್ನು ತಯಾರಿಸಿ ಯಶಸ್ವಿಯಾಗಿ ಕ್ಲಿಷ್ಟ ಸಮಯದಲ್ಲಿ ಕಾಮಾಗಾರಿಯನ್ನು ಪೂರ್ಣ ಗೊಳಿಸಿ ಕಸ ವಿಲೇವಾರಿ ಪ್ರಕ್ರಿಯೆಯನ್ನು ಕಳೆದ 2 ವರ್ಷಗಳಿಂದ ನಿರ್ವಹಿಸುತ್ತಿದೆ.

ಲಾಯಿಲ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಪ್ಲಾಸ್ಟಿಕ್ ಸೌಧಗಳನ್ನು ಕಟ್ಟಲಾಗಿದ್ದು, ಅದರಲ್ಲಿ ಪ್ಲಾಸ್ಟಿಕ್, ಕಬ್ಬಿಣ ಮತ್ತು ಕರಗುವ ಕಸಗಳನ್ನು ಪ್ರತ್ಯೇಕವಾಗಿ ಹಾಕಲು ವ್ಯವಸ್ಥೆ ಮಾಡಲಾಗಿದೆ. ಮನೆ ಮನೆಗಳಿಂದ ಮತ್ತು ವಾಣಿಜ್ಯ ಸಂಕೀರ್ಣಗಳಲ್ಲಿ ಗ್ರಾಮ ಪಂಚಾಯತ್‌ನಿಂದ ನೀಡಲ್ಪಟ್ಟ ಕೆಂಪು ಮತ್ತು ಹಸಿರು ಬಣ್ಣದ ಡಬ್ಬಗಳಲ್ಲಿ ಪ್ಲಾಸ್ಟಿಕ್ ಮತ್ತು ಕರಗುವ ಕಸವನ್ನು ಪ್ರತ್ಯೇಕವಾಗಿ ಸಂಗ್ರಹಿಸಿಟ್ಟ ತ್ಯಾಜ್ಯಗಳನ್ನು ಸ್ವಚ್ಛತಾ ವಾಹನದ(ಅಪೆವಾಹನದ) ಮೂಲಕ ಸಂಗ್ರಹಿಸಿ ಜೈವಿಕ ಘಟಕದಲ್ಲಿ ಕೂಲಿ ಆಳುಗಳ ಮೂಲಕ ವಿಂಗಡಿಸಿ ಕೊಳೆಯುವ ತ್ಯಾಜ್ಯಗಳನ್ನು ಘಟಕದ ಪ್ಲಾಟ್ ಫಾರಂನಲ್ಲಿ ಹಾಕಿ ಭಗೀರಥ ಸಂಸ್ಥೆಯಿಂದ ನೀಡಿದ ಓಎಸ್.–1 ಜೈವಿಕ ದ್ರಾವಣವನ್ನು ಸಿಂಪಡಿಸಲಾಗುತ್ತದೆ. 1 ವಾರದ ಕಸವನ್ನು 1 ಪ್ಲಾಟ್ ಪಾರಂನಲ್ಲಿ ಹಾಕಿ ಪ್ರತೀ ಬಾರಿ ಓ.ಎಸ್ ದ್ರಾವಣವನ್ನು ಸಿಂಪಡಿಸಲಾಗುತ್ತಿದೆ.

ಹೀಗೆ 7 ವಾರದ ಕಸ 7 ಪ್ಲಾಟ್ ಪಾರಂಗಳಲ್ಲಿಭರ್ತಿ ಆದ ನಂತರ 8 ನೇ ವಾರಕ್ಕೆ 1 ಪ್ಲಾಟ್ ಪಾರಂನ ಕಸ ಕಾಂಪೋಸ್ಟ್ ಆಗಿರುತ್ತದೆ. ಇದನ್ನು ಸಾಣಿಗೆಯಲ್ಲಿ ಹಾಕಿ ಅದರಲ್ಲಿ ಇರುವ ಕರಗಲಾಗದ ಅತೀ ಸೂಕ್ಷ್ಮ ಒಣ ಕಸಗಳನ್ನು ಬೇರ್ಪಡಿಸಿದಾಗ ಸಾವಯವ ಗೊಬ್ಬರ ಸಿದ್ದವಾಗುತ್ತದೆ. ಈ ಗೊಬ್ಬರವನ್ನು ಮೈಸೂರಿನ ದೃಡೀಕೃತ ಪ್ರಯೋಗಾಲಯದಲ್ಲಿ ಪರಿಶೀಲಿಸಲಾಗಿದ್ದು ಇದರಲ್ಲಿ ಎನ್.ಪಿ.ಕೆ ಪ್ರಮಾಣವು ಮಾರುಕಟ್ಟೆಯಲ್ಲಿ ದೊರೆಯುವ ರಾಸಾಯನಿಕ ಗೊಬ್ಬರದಲ್ಲಿ ಇರುವುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಇರುವುದು ದೃಢೀಕೃತವಾಗಿರುವುದು.

28.09.2011 ರಂದು ಈ ಸಾವಯವ ಗೊಬ್ಬರವನ್ನು ಲಾಯಿಲ ಗೋಲ್ಡ್ ಎಂಬ ಹೊಸ ಹೆಸರಿನಲ್ಲಿ ಮಾರುಕಟ್ಟೆಗೆ ಬಿಡುಗಡೆ ಮಾಡಲಾಗಿರುತ್ತದೆ. ಕೆಜಿಗೆ ರೂ 8/– ರಂತೆ ಮಾರಾಟ ಮಾಡುತ್ತಿದ್ದು ಸ್ಥಳೀಯ ರೈತರಿಂದ ಬಹಳ ಬೇಡಿಕೆಗೆ ಪಾತ್ರವಾಗಿದೆ. ಗೊಬ್ಬರದ ಮಾರಾಟದಿಂದ ಆದಾಯವನ್ನು ಘಟಕದ ನಿರ್ವಹಣೆಗೆ ಬಳಸಲಾಗುತ್ತಿದೆ.



ಘನ ತ್ಯಾಜ್ಯ ವಿಲೇವಾರಿ ಬಗ್ಗೆ ಜನ ಸಮುದಾಯದಲ್ಲಿ ತಪ್ಪು ತಿಳುವಳಿಕೆ ಇದ್ದು ಇದನ್ನು ಹೋಗಲಾಡಿಸುವ ಉದ್ದೇಶದಿಂದ ಘನ ತ್ಯಾಜ್ಯ ವಿಲೇವಾರಿ ಘಟಕದೊಳಗೆ ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಸ್ವಚ್ಛತಾ ಉದ್ಯಾನವನ ನಿರ್ಮಿಸಿ ಪರಿಸರ ಸಂರಕ್ಷಣೆಗೂ ಮಹತ್ವವನ್ನು ನೀಡಲಾಗಿದೆ.

ಯಶೋಗಾಥೆ


# ಜಲ ನಿರ್ಮಲ ಯೋಜನೆಯಡಿ ಕುಡಿಯುವ ನೀರಿನ ಯೋಜನೆ–ಗ್ರಾಮ ಸಮುದಾಯದ ಸಮರ್ಥ ನಿರ್ವಹಣೆ

*–ಮನೋಹರ್.*

ಉತ್ತರ ಕನ್ನಡ ಜಿಲ್ಲೆಯ ಅಂಕೋಲ ತಾಲ್ಲೂಕಿನ ವಂದಿಗೆ ಗ್ರಾಮಪಂಚಾಯಿತಿಯು ಕುಡಿಯುವ ನೀರಿನ ಯೋಜನೆಯ ನಿರ್ವಹಣೆಯಲ್ಲಿ ಇತರೆ ಗ್ರಾಮ ಪಂಚಾಯಿತಿಗಳಿಗೆ ಮಾದರಿಯಾಗುವ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ.

ಸರಕಾರದ ಅಭಿವೃದ್ಧಿ ಯೋಜನೆಗಳ ಯಶಸ್ಸು ಆ ಯೋಜನೆಯನ್ನು ಯಾರಿಗಾಗಿ ರೂಪಿಸಲಾಗಿದೆಯೋ ಆ ಬಳಕೆದಾರರ ಅಥವಾ ಫಲಾನುಭವಿ ಜನಸಮುದಾಯವು ಯೋಜನೆಯ ಅನುಷ್ಠಾನದಲ್ಲಿ ತಳೆಯುವ ಆಸಕ್ತಿಯನ್ನು ಅವಲಂಭಿಸಿದೆ. ಸರಕಾರ ಮತ್ತು ಸಮುದಾಯದ ನಡುವೆ ಅರ್ಥಪೂರ್ಣ ಸಂವಹನ, ಸಮನ್ವಯ, ಸಮೀಪಗತ ಭಾವನೆಗಳಿದ್ದರೆ ಯೋಜನೆಯ ಉದ್ದೇಶ ಈಡೇರಲು ಸಾಧ್ಯ.

ಕರ್ನಾಟಕ ಸರಕಾರವು ಗ್ರಾಮೀಣ ಭಾಗದ ಜನತೆಯ ಅಭಿವೃದ್ಧಿಗೆ ನೂರಾರು ಯೋಜನೆಗಳನ್ನು ರೂಪಿಸಿದ್ದು ಕರ್ನಾಟಕದಾದ್ಯಂತ ಬಹುತೇಕ ಪರಿಚಯವಿರುವ ಜನಸಮುದಾಯದ ದೈನಂದಿನ ಅವಶ್ಯಕತೆಯಾದ ಶುದ್ಧ ಕುಡಿಯುವ ನೀರನ್ನು ಗ್ರಾಮೀಣ ಜನತೆಗೆ ನೀಡುವ ಉದ್ದೇಶದ ವಿಶ್ವ ಬ್ಯಾಂಕ್ ನೆರವಿನ ಜಲ ನಿರ್ಮಲ ಯೋಜನೆಯೂ ಒಂದು. ಕರ್ನಾಟಕದಲ್ಲಿ ಜನ ಸಮುದಾಯವನ್ನು ಎಲ್ಲಾ ಹಂತಗಳಲ್ಲಿ ಅಂದರೆ ಯೋಜನಾಪೂರ್ವದ ನಕ್ಷೆ ತಯಾರಿಕೆಯಿಂದ ಹಿಡಿದು ಯೋಜನೋತ್ತರದ ಗ್ರಾಮಾರ್ಪಣೆ ಕಾರ್ಯಾಕ್ರಮ (ಸಾಮಾಜಿಕ ಹಸ್ತಾಂತರ) ದವರೆಗೂ ಕ್ರೀಯಾಶೀಲವಾಗಿ ಪಾಲ್ಗೊಳ್ಳುವಂತೆ ಪ್ರೇರೇಪಿಸಿದ ಏಕೈಕ ಯೋಜನೆ ಎಂಬ ಹೆಗ್ಗಳಿಕೆ ಜಲ





ನಿರ್ಮಲ ಯೋಜನೆಗೆ ಇರುವುದು.

ಕರ್ನಾಟಕ ಸರಕಾರವು ಜಲ ನಿರ್ಮಲ ಯೋಜನೆಯನ್ನು ಉತ್ತರ ಕರ್ನಾಟಕದ ಗುಲ್ಬರ್ಗಾ, ಬೀದರ, ಬಿಜಾಪುರ, ಕೊಪ್ಪಳ, ರಾಯಚೂರು, ಬಾಗಲಕೋಟೆ, ಗದಗ, ಬೆಳಗಾವಿ, ಧಾರವಾಡ, ಹಾವೇರಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಜಾರಿಗೊಳಿಸಿದ್ದು ಬ್ಯಾಚ್ 1, 2 ಹಾಗೂ 3 ಹೀಗೆ ಮೂರು ಹಂತಗಳಲ್ಲಿ ಹನ್ನೊಂದು ಜಿಲ್ಲೆಗಳಲ್ಲಿ ಅನುಷ್ಠಾನಗೊಳ್ಳುತ್ತಿದೆ. ಬಹುತೇಕ ಎಲ್ಲಾ ಜಿಲ್ಲೆಗಳಲ್ಲಿಯೂ ಕಾಮಗಾರಿಗಳು ಮುಕ್ತಾಯಗೊಂಡಿದ್ದು ಇಲ್ಲವೇ ಮುಕ್ತಾಯದ ಹಂತದಲ್ಲಿವೆ.

ಜಲ ನಿರ್ಮಲ ಯೋಜನೆಯ ರೂಪುರೇಷೆ ಮತ್ತು ನಿಯಮಾವಳಿಗನುಗುಣವಾಗಿ ಯೋಜನೆಯಲ್ಲಿ ಕುಡಿಯುವ ನೀರಿನ ಯೋಜನೆಗಳು ಪೂರ್ಣಗೊಂಡ ಬಳಿಕ ಗ್ರಾಮದ ಜನಸಮುದಾಯವು ತನ್ನ ಒಡೆತನಕ್ಕೆ ಯೋಜನೆಯನ್ನು ತೆಗೆದುಕೊಂಡು ಅದರ ಸುಸ್ಥಿರತೆ ಹಾಗೂ ನಿರ್ವಹಣೆಯ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಜನಸಮುದಾಯವು ಯೋಜನೆಯ ಆರಂಭದ ಹಂತದಿಂದಲೂ ಯೋಜನಾ ಪ್ರಕ್ರಿಯೆಯಲ್ಲಿ ಸಕ್ರೀಯವಾಗಿ ಪಾಲ್ಗೊಂಡಿದ್ದರೆ ಯೋಜನೆಗಳ ಗ್ರಾಮಾರ್ಪಣೆ ಮತ್ತು ಸಮುದಾಯದ ನಿರ್ವಹಣೆ ಕಷ್ಟ ಸಾಧ್ಯವೇನಲ್ಲ. ಉತ್ತರ ಕನ್ನಡ ಜಿಲ್ಲೆಯಲ್ಲಿ ಜಲ ನಿರ್ಮಲ ಯೋಜನೆಯು ಅತ್ಯುತ್ತಮವಾಗಿ ಅನುಷ್ಠಾನಗೊಂಡಿರುವುದಲ್ಲದೆ ಸಮುದಾಯದ ಸಕ್ರೀಯ ಪಾಲ್ಗೊಳ್ಳುವಿಕೆ ಮತ್ತು ಅರ್ಥಪೂರ್ಣ ಸಂವಹನ, ಸಮನ್ವಯತೆಗಳಿಂದ ಯಶಸ್ವೀ ಯೋಜನೆಗಳಲ್ಲಿ ಅಗ್ರಸ್ಥಾನದಲ್ಲಿದೆ. ಜಲ ನಿರ್ಮಲ ಯೋಜನೆಯ ಅಂತಿಮ ಘಟ್ಟವು ಕುಡಿಯುವ ನೀರಿನ ಯೋಜನೆಗಳ ಭೌತಿಕ ಕಾಮಗಾರಿಗಳು ಮುಗಿದಾದ ಬಳಿಕ ಅದನ್ನು ತನ್ನ ವಶಕ್ಕೆ ತೆಗೆದುಕೊಳ್ಳುವ ಗ್ರಾಮ ಸಮುದಾಯವು ನಿರಂತರವಾಗಿ ಮೇಲ್ವಿಚಾರಣೆ, ದುರಸ್ತಿ ಮತ್ತು ನಿರ್ವಹಣೆಗಳಿಂದ ಅದನ್ನು ಸುಸ್ಥಿತಿಯಲ್ಲಿ ಇಡಬೇಕಾಗುತ್ತದೆ. ಮೇಲು ನೋಟಕ್ಕೆ ಇದು ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿ (VWSC – Village Water Supply & Sanitation Committee)ಯ ಹೊಣೆಗಾರಿಕೆ ಎಂದು ಕಂಡು ಬಂದರೂ ಅದು ಫಲಪ್ರದವಾಗುವುದು ನೀರನ್ನು ಬಳಸುತ್ತಿರುವ ಬಳಕೆದಾರರು, ವಾಣಿಜ್ಯ ಉದ್ದಿಮೆದಾರರು ಮತ್ತು ಇಡೀಯ ಗ್ರಾಮದ ಜನತೆಯ ಆಸಕ್ತಿ ಮತ್ತು ತೊಡಗಿಸಿಕೊಳ್ಳುವುದರ ಮೇಲೆ ಅವಲಂಬಿತವಾಗಿದೆ.

ಕರ್ನಾಟಕದಲ್ಲಿ ಜಲ ನಿರ್ಮಲ ಯೋಜನೆಯು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳುತ್ತಿರುವ ಜಿಲ್ಲೆಗಳಲ್ಲಿ ಒಂದಾದ ಉತ್ತರ ಕನ್ನಡ ಜಿಲ್ಲೆಗೆ ಸಮುದಾಯದ ಪಾಲ್ಗೊಳ್ಳುವಿಕೆ ಮತ್ತು ನಿರ್ವಹಣೆಯ ಪರಿಶೀಲನೆಗೆಂದು ಭೇಟಿ ನೀಡಿದ್ದ ಕರ್ನಾಟಕ



ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಂಸ್ಥೆಯ ಅಂದಿನ ಆಯುಕ್ತರಾದ ಮಾನ್ಯ ಶ್ರೀ ಶಂಭು ದಯಾಳ್ ಮೀನಾರವರು ಉತ್ತರ ಕನ್ನಡ ಜಿಲ್ಲೆಯ ಜಲ ನಿರ್ಮಲ ಯೋಜನೆಯಲ್ಲಿ ಸಮುದಾಯದ ಕ್ರೀಯಾಶೀಲ ಪಾತ್ರವನ್ನು ಕಂಡು ಮುಕ್ತ ಕಂಠದಿಂದ ಪ್ರಶಂಸಿಸಿದ್ದಾರೆ.

ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಂಸ್ಥೆಯ ಅಂದಿನ ಆಯುಕ್ತರಾದ ಮಾನ್ಯ ಶ್ರೀ ಶಂಭು ದಯಾಳ್ ಮೀನಾರವರು ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ವಂದಿಗೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಹೊಸಗದ್ದೆ ಗ್ರಾಮಕ್ಕೆ ಭೇಟಿ



ನೀಡಿ ಅಲ್ಲಿಯ ಕುಡಿಯುವ ನೀರಿನ ಯೋಜನೆಯ ಅನುಷ್ಠಾನವನ್ನು ಪರಿಶೀಲಿಸಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಅಂಕೋಲಾ ತಾಲ್ಲೂಕಿನ ವಂದಿಗೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಹೊಸಗದ್ದೆ ಗ್ರಾಮವು ಬ್ಯಾಚ್-1ರಲ್ಲಿ ಜಲ ನಿರ್ಮಲ ಯೋಜನೆಯನ್ನು ಅನುಷ್ಠಾನಗೊಳಿಸಿದ ಗ್ರಾಮವಾಗಿದ್ದು, ರೂ. 16,59,950/- ಗಳ ಯೋಜನಾ ವೆಚ್ಚದಲ್ಲಿ ಕೊಳವೆ ನೀರು ಸರಬರಾಜು (Piped Water Supply) ಯೋಜನೆಯನ್ನು ಅನಿಷ್ಠಾನಗೊಳಿಸಲಾಗಿದೆ. ಮೊದಲಿನಿಂದಲೂ ಅಂದರೆ ಯೋಜನೆಯ ಅನುಷ್ಠಾನವನ್ನು ಕೂಡಾ ಗ್ರಾಮ ನೀರು ಮತ್ತು ನೈರ್ಮಲ್ಯ ಸಮಿತಿಯು ನಿರ್ವಹಿಸಿ ಸ್ವಾಧೀನಕ್ಕೆ ತೆಗೆದುಕೊಂಡಿದ್ದರಿಂದ ಗ್ರಾಮಸ್ಥರಲ್ಲಿ ಯೋಜನೆಯು ನಮ್ಮದು ಎಂಬ ಭಾವನೆ ಇರುವುದರಿಂದ ಉತ್ತಮವಾಗಿ ನಿರ್ವಹಿಸುತ್ತಿದ್ದಾರೆ.

ಹೊಸಗದ್ದೆ ಗ್ರಾಮದಲ್ಲಿ 84 ಕುಟುಂಬಗಳಿಗಾಗಿ ಕುಡಿಯುವ ನೀರಿನ ಯೋಜನೆಯನ್ನು ಅನುಷ್ಠಾನಗೊಳಿಸಿದ್ದು ರೂ.4,78,232/- ಲಕ್ಷಗಳಲ್ಲಿ ಮೇಲ್ಮಟ್ಟದ ಜಲಾಗಾರ (Over Head Tank) ನಿರ್ಮಿಸಿದ್ದು ನಲ್ಲಿ ಸಂಪರ್ಕದ ಮೂಲಕ ಗ್ರಾಮದ ಬಳಕೆದಾರರ ಕುಟುಂಬಗಳಿಗೆ ನೀರು ಸರಬರಾಜು ಮಾಡಲಾಗುತ್ತಿದೆ. 84 ಕುಟುಂಬಗಳಲ್ಲಿ 75 ಕುಟುಂಬಗಳಿಗೆ ನಲ್ಲಿ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ.

ಹೊಸಗದ್ದೆ ಗ್ರಾಮದ ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿಯು ಆಸಕ್ತಿಯಿಂದ ಕಾರ್ಯ ನಿರ್ವಹಿಸುತ್ತಿರುವುದರಿಂದ ಯೋಜನೆಯು ನಿರ್ವಹಣೆಗಾಗಿ ಬಜೆಟ್‌ಅನ್ನು ರೂಪಿಸಿಕೊಂಡು ತನ್ನ ಆಯವ್ಯಯಗಳನ್ನು ಸಮರ್ಪಕವಾಗಿ ನಿರ್ವಹಿಸುತ್ತಿದೆ.

ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿಯು ಯೋಜನೆಯ ನಿರ್ವಹಣೆಗಾಗಿ ರೂ. 55,351/- ಗಳಿಗಾಗಿ ತನ್ನ ಬಜೆಟ್ ಅನ್ನು ಸಿದ್ಧ ಪಡಿಸಿಕೊಂಡಿದ್ದು ನೀರು ಬಿಡುವವರ ಸಂಬಳ, ವಿದ್ಯುಚ್ಛಕ್ತಿ ವೆಚ್ಚ, ನಿರ್ವಹಣೆ/ದುರಸ್ತಿಯ ವೆಚ್ಚ ಉಸ್ತುವಾರಿ ಮೇಲ್ವಿಚಾರಣೆ ಆಡಳಿತಾತ್ಮಕ ವೆಚ್ಚ, ಹೆಚ್ಚಿನ ನಿಧಿ ಮತ್ತು ತರಬೇತಿ ಎಂಬ 7 ಬಾಬತ್ತುಗಳಿಗೆ ಆಯವ್ಯಯ ಪಟ್ಟಿಯಲ್ಲಿ ಅವಕಾಶ ಕಲ್ಪಿಸಲಾಗಿದೆ. ರೂ.55,351/- ಗಳನ್ನು ನೀರು ಬಳಕೆದಾರರ ಕುಟುಂಬಗಳಿಂದ ನೀರಿನ ತೆರಿಗೆ ಸಂಗ್ರಹಿಸುವ ಮೂಲಕ ಸಂಪನ್ಮೂಲ ಕ್ರೋಢೀಕರಿಸಲಾಗುತ್ತಿದೆ.

ಬಳಕೆದಾರ ಕುಟುಂಬಕ್ಕೆ ಸರಬರಾಜು ಆಗುವ ನೀರಿನ ಪ್ರಮಾಣದ ಆಧಾರದ ಮೇಲೆ ನೀರಿನ ತೆರಿಗೆಯನ್ನು ವಿಧಿಸಲಾಗುತ್ತಿದೆ. 75 ಕುಟುಂಬಗಳಿಗೆ ಮಾಸಿಕ 30/-ರೂಗಳನ್ನು ಕನಿಷ್ಟ ಎಂದು ನಿರ್ಧರಿಸಿದ್ದು ನಂತರದ ಬಳಕೆಗೆ ಅನುಗುಣವಾಗಿ ಬಳಸಿದಷ್ಟು ನೀರಿನ ಶುಲ್ಕ ಪಾವತಿಸಬೇಕಾಗುತ್ತದೆ. ನೀರಿನ ಬಳಕೆಯ ಪ್ರಮಾಣವನ್ನು ಅಳೆಯಲು ಪ್ರತಿ ಗೃಹ ಸಂಪರ್ಕಕ್ಕೆ ಮೀಟರ್ ಅಳವಡಿಸಲಾಗಿದೆ. ಒಂದು ಘಟಕ ಗಣಾಂಶಕ್ಕೆ



8/- ರೂ. ಎಂದು ನಿಗದಿ ಪಡಿಸಿದ್ದು ಅದರಂತೆ ನೀರಿನ ತೆರಿಗೆಯನ್ನು ಸಂಗ್ರಹಿಸಲಾಗುತ್ತಿದೆ.

ಸರಾಸರಿ ವಿದ್ಯುತ್ ವೆಚ್ಚವು ರೂ. 1,800/-ರಿಂದ ರೂ.3,000/- ಗಳ ನಡುವೆ ಇದ್ದು, ನೀರು ಬಿಡುವವರಿಗೆ ಮಾಹೆಯಾನ ರೂ.1,000/-ಗಳ ಗೌರವಧನ ಪಾವತಿಸಲಾಗುತ್ತಿದೆ. ನೀರಿನ ತೆರಿಗೆ ವಸೂಲಿಗಾರರಿಗೆ ರೂ. 700/-ಗಳ ಮಾಸಿಕ ಗೌರವಧನ ನೀಡಲಾಗುತ್ತಿದೆ. ನೀರಿನ ತೆರಿಗೆಯನ್ನು ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿಯು ನಿಯತವಾಗಿ ಸಂಗ್ರಹಿಸುತ್ತಿದ್ದು ಅದಕ್ಕಾಗಿ ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ತೆರೆದಿದ್ದು

ಎಲ್ಲಾ ವ್ಯವಹಾರಗಳನ್ನು ಚೆಕ್‌ಗಳನ್ನು ನೀಡುವ ಮೂಲಕವೇ ಮಾಡಲಾಗುತ್ತಿದೆ. ಪ್ರತಿ ತಿಂಗಳು ರೂ. 3,450/– ಗಳಿಂದ 4,850/–ರೂ. ಗಳವರೆಗೆ ನೀರಿನ ತೆರಿಗೆ ಸಂಗ್ರಹಿಸಲಾಗುತ್ತಿದೆ.

ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿಯು, ಸಮಿತಿಯ ಕಾರ್ಯದರ್ಶಿಯವರಾದ ಗ್ರಾಮ ಪಂಚಾಯತಿ ಕಾರ್ಯದರ್ಶಿಯವರನ್ನು ಹೊರತುಪಡಿಸಿ, ಒಂಬತ್ತು ಜನ ಸದಸ್ಯರನ್ನು ಹೊಂದಿದ್ದು ಪ್ರತಿ ತಿಂಗಳು 5ನೇ ತಾರೀಖಿನಂದು ನಿಯತವಾಗಿ ಮಾಸಿಕ ಸಭೆಗಳನ್ನು ನಡೆಯಿಸಿ ಯೋಜನೆಯ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದೆ. ಕ್ಲೋರಿನೇಷನ್ ಘಟಕವು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು ನೀರಿನ ಗುಣಮಟ್ಟದ ಪರೀಕ್ಷೆಯ ಕಿಟ್ ಇವೇ ಮೊದಲಾದ ಸಲಕರಣೆಗಳನ್ನು ಸಮಿತಿಯು ಹೊಂದಿದೆ. ಸರಕಾರದಿಂದ ನಿಗದಿಪಡಿಸಿದ ಎಲ್ಲಾ ದಾಖಲೆ/ಕಡತಗಳನ್ನು ನಿರ್ವಹಿಸುವ ಮೂಲಕ ಹೊಸಗದ್ದೆ ಗ್ರಾಮದ ನೀರು ಮತ್ತು ನೈರ್ಮಲ್ಯ ಸಮಿತಿಯು ಮಾದರಿ ಸಮಿತಿಯಾಗಿ ಕೆಲಸ ನಿರ್ವಹಿಸುತ್ತಿದೆ.

ಹೊಸಗದ್ದೆಯ ಈ ಪ್ರಯೋಗ ಅನುಕರಣೀಯ, ಸ್ತುತ್ಯ. ಸರಕಾರದ ಯೋಜನೆಯೊಂದನ್ನು ತಮ್ಮ ಮಡಿಲಿಗೆ ಹಾಕಿಕೊಂಡು ಪೋಷಿಸುತ್ತಿರುವ ಹಾಗೂ ತಮ್ಮದೇ ಆಸ್ತಿ ಎಂದು ಪರಿಗಣಿಸಿರುವ ಪುಟ್ಟ ಗ್ರಾಮ ಹೊಸಗದ್ದೆಯ ಜನಸಮುದಾಯ ಅಭಿನಂದನಾರ್ಹರು.

ಉಪನಿರ್ದೇಶಕರು (ಕಾ)
ಜಿಲ್ಲಾ ನೆರವು ಘಟಕ, ಜಲನಿರ್ಮಲ ಯೋಜನೆ ಕಾರವಾರ ಜಿಲ್ಲೆ.

## ಮೊಬೈಲ್ ಸಂಖ್ಯೆ ನಮೂದಿಸಿ..

**ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದಂತಹ ವಿಚಾರಗಳನ್ನು ಲೇಖಕರು ಹಾಗೂ ಆಸಕ್ತರು ಲೇಖನಗಳ ರೂಪದಲ್ಲಿ 'ಕರ್ನಾಟಕ ವಿಕಾಸ' ಪತ್ರಿಕೆಗೆ ತಲುಪಿಸುತ್ತಿದ್ದಾರೆ. ಪತ್ರಿಕೆಗೆ ಆಯ್ಕೆಯಾದ ಲೇಖನಗಳ ಕರಡನ್ನು ಪರಿಶೀಲಿಸುವಲ್ಲಿ ಲೇಖಕರಿಂದ ಕೆಲವೊಮ್ಮೆ ಸ್ಪಷ್ಟೀಕರಣವನ್ನು ಅಥವಾ ಅಧಿಕ ಮಾಹಿತಿಯನ್ನು ಪಡೆಯುವ ಸಂದರ್ಭವಿರುತ್ತದೆ.**

**ಆದ್ದರಿಂದ ಲೇಖಕರು/ಆಸಕ್ತರು ಲೇಖನವನ್ನು ಪತ್ರಿಕೆಗೆ ತಲುಪಿಸುವಾಗ ಸಂಪೂರ್ಣ ಅಂಚೆ ವಿಳಾಸದೊಂದಿಗೆ ಮೊಬೈಲ್ ಸಂಖ್ಯೆಯನ್ನು ತಪ್ಪದೇ ನಮೂದಿಸಲು ಕೋರಿದೆ.**

**ಲೇಖನಗಳನ್ನು 'ನುಡಿ' ತಂತ್ರಾಂಶವನ್ನು ಬಳಸಿ kvrdpr@gmail.com**

**ಇ–ಮೇಲ್ ಹಾಗೂ ಕೆಳಕಂಡ ವಿಳಾಸಕ್ಕೆ ಅಂಚೆಯ ಮೂಲಕ ಕಳುಹಿಸಲು ಕೋರಿದೆ.**

**ಸಂಪಾದಕರು**
**ಕರ್ನಾಟಕ ವಿಕಾಸ**
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,**
**ನಂ. 309, 3ನೇ ಮಹಡಿ, 1ನೇ ಹಂತ, ಬಹುಮಹಡಿಗಳ ಕಟ್ಟಡ.**
**ಬೆಂಗಳೂರು–560001.**

**ದೂರವಾಣಿ : (080) 22353857**
**www.rdpr.kar.nic.in email: kvrdpr@gmail.com**

ಯಶೋಗಾಥೆ

# ಕುಡಿಯುವ ನೀರಿನ ಯೋಜನೆ – ಗ್ರಾಮ ಸಮುದಾಯದ ಹೊಸಗದ್ದೆ ಸಮರ್ಥ ನಿರ್ವಹಣೆ

–ಮನೋಹರ್.

ಉತ್ತರಕನ್ನಡ ಜಿಲ್ಲೆಯ ಕಾರವಾರ ತಾಲ್ಲೂಕಿನ ಅಸ್ನೋಟಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಸಾವಂತವಾಡ ಮುದೇವಾಡ ಗ್ರಾಮದಲ್ಲಿ ಕುಡಿಯುವ ನೀರಿನ ಯೋಜನೆಯನ್ನು ಸಮರ್ಥವಾಗಿ ನಿರ್ವಹಿಸುತ್ತಿರುವ ಬಗ್ಗೆ ಒಂದು ಚಿತ್ರಣ

ಕಾರವಾರ ತಾಲ್ಲೂಕಿನ ಅಸ್ನೋಟಿ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಸಾವಂತವಾಡ ಮುದೇವಾಡ ಗ್ರಾಮವು ತಾಲ್ಲೂಕು ಕೇಂದ್ರದಿಂದ 8 ಕಿ.ಮೀ. ದೂರವಿದ್ದು, ಗ್ರಾಮ ಬ್ಯಾಚ್–1ರಲ್ಲಿ ಸೇರಿರುತ್ತದೆ. ಗ್ರಾಮವು ಸುಮಾರು 414 ಮನೆಗಳನ್ನು ಹೊಂದಿದ್ದು, 1825 ಜನಸಂಖ್ಯೆಯನ್ನು ಹೊಂದಿರುತ್ತದೆ. ಜನರ ಮುಖ್ಯ ಕಸಬು ಕೃಷಿ, ಸಣ್ಣ ವ್ಯಾಪಾರವಾಗಿರುತ್ತದೆ.

ಗ್ರಾಮದಲ್ಲಿ ಮೊದಲು ಕುಡಿಯುವ ನೀರಿಗಾಗಿ 50,000 ಲೀ. ಸಾಮರ್ಥ್ಯದ ಜಿ.ಎಲ್.ಎಸ್.ಆರ್. ಹೊಂದಿದ್ದು, ಯೋಜನೆಯಡಿಯಲ್ಲಿ ಸದರೀ ಟ್ಯಾಂಕ್ ಮತ್ತು ಪೈಪ್‌ಲೈನ್ ದುರಸ್ತಿಗೊಳಿಸಲಾಗಿದೆ. ಹೆಚ್ಚುವರಿಯಾಗಿ ಗ್ರಾಮಸ್ಥರ ಬೇಡಿಕೆಗೆ ಅನುಗುಣವಾಗಿ 1 ಲಕ್ಷ ಸಾಮರ್ಥ್ಯದ ಮೇಲ್ಮಟ್ಟದ ಜಲಸಂಗ್ರಹಾಗಾರವನ್ನು ನಿರ್ಮಿಸಲಾಗಿದೆ. ಯೋಜನೆಯಡಿಯಲ್ಲಿ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ ಹಾಗೂ ಮುಂದಿನ ನಿರ್ವಹಣೆಗಾಗಿ ದಿನಾಂಕ 09–11–06 ರಂದು ಸದರಿ ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿಯವರಿಗೆ ಯೋಜನೆಯನ್ನು ಹಸ್ತಾಂತರಿಸಲಾಗಿದೆ.

ಸದರೀ ಯೋಜನೆಯಡಿಯಲ್ಲಿ ಗ್ರಾಮ ನೀರು ಮತು ನೈರ್ಮಲ್ಯ ಸಮಿತಿಯು ಕ್ರಿಯಾತ್ಮಕವಾಗಿ ಕಾರ್ಯನಿರ್ವಹಿಸುತ್ತಿದ್ದು, ಅಸ್ನೋಟಿ ಗ್ರಾಮ ಪಂಚಾಯತಿ ಅಧ್ಯಕ್ಷರೇ ಸಮಿತಿಯ ಅಧ್ಯಕ್ಷರಾಗಿದ್ದು, ಸಮಿತಿಯು ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಗೌರವಾಧ್ಯಕ್ಷರನ್ನು ಆರಿಸಿಕೊಂಡಿರುತ್ತಾರೆ.

ನೀರು ನೈರ್ಮಲ್ಯ ಸಮಿತಿಯವರು ಸಭೆ ಸೇರಿ ವಾರ್ಷಿಕ ಮುಂಗಡ ಪತ್ರವನ್ನು ತಯಾರಿಸುತ್ತಾರೆ. ವಾರ್ಷಿಕ ಮುಂಗಡ ಪತ್ರದ ಒಟ್ಟು ಮೊತ್ತ ರೂ.1,49,300/– ಎಲ್ಲಾ ಮನೆಗಳಿಗೆ ನಲ್ಲಿ ಸಂಪರ್ಕ ನೀಡುವ ಬಗ್ಗೆ ಸಮಿತಿಯವರು ಯೋಜಿಸಿರುತ್ತಾರೆ. ಮಾಸಿಕ ನೀರಿನ ತೆರಿಗೆ ಪ್ರತಿ ಮನೆಗೆ ರೂ.35/– ರಿಂದ ರೂ.40/–ಗಳೆಂದು ನಿಗದಿ ಪಡಿಸಿರುತ್ತಾರೆ.



ಈಗಾಗಲೇ ಯೋಜನೆಯ ಒಟ್ಟು 250 ಫಲಾನುಭವಿ ಮನೆಗಳ ಪೈಕಿ 200 ಮನೆಗಳಿಗೆ ಮನೆ ಸಂಪರ್ಕವನ್ನು ಕಲಿಸಲಾಗಿದೆ ಹಾಗೂ ಬಹುತೇಕ ಮನೆಸಂಪರ್ಕಗಳಿಗೆ ಮೀಟರಗಳನ್ನು ಅಳವಡಿಸಲಾಗಿದೆ. ನಿರ್ವಹಣೆ ಮಾಡಲು 2 ಜನ ನೀರು ನಿಯಂತ್ರಕರು ಮತ್ತು 1 ಕರವಸೂಲಿಗಾರರನ್ನು ನೇಮಕ ಮಾಡಿಕೊಂಡಿರುತ್ತಾರೆ.

ದಾಖಲಾತಿ ನಿರ್ವಹಣೆಗೆ ಸಂಬಂಧಿಸಿದಂತೆ, ಸೂಕ್ಷ್ಮವಾಗಿ ಪರಿಶೀಲಿಸಿದಾಗ ಉತ್ತಮವಾಗಿ ನಿರ್ವಹಣೆ ಮಾಡಿರುವುದರ ಬಗ್ಗೆ ಗಮನಿಸಲಾಗಿದೆ. ಎಲ್ಲಾ ಮನೆಗಳಿಗೂ ಕೂಡ ಮೀಟರ್ ಅಳವಡಿಸಿ ನೀರು ಸರಬರಾಜು ಮಾಡುವ ಹಿನ್ನೆಲೆಯಲ್ಲಿ ಈಗಾಗಲೇ 14 ಮನೆಗಳಿಗೆ ಮೀಟರ್ ಅಳವಡಿಸಿರುತ್ತಾರೆ.





ಮೀಟರ ಅಳವಡಿಸಿದ ಮನೆಗಳಿಗೆ ನೀರಿನ ತೆರಿಗೆಯನ್ನು 10,000 ಲೀಟರ್ ವರೆಗೆ (10 ಯೂನಿಟ್) ಎಂದು ಪರಿಗಣಿಸಿ, 10 ಯೂನಿಟ್ ವರೆಗೆ ರೂ.50/– ರಂತೆ ನಂತರ ಪ್ರತಿ ಯೂನಿಟ್‌ಗೆ ರೂ.5/– ರಂತೆ ವಿಧಿಸಲು ಯೋಜಿಸಿರುತ್ತಾರೆ. ಸಾವಂತವಾಡ ಮುದೇವಾಡ ಯೋಜನೆಯ ನೀರಿನ ತೆರಿಗೆ, ಮಾಸಿಕ ಬೇಡಿಕೆ 12,500/– ಆಗಿರುತ್ತದೆ. ನೀರಿನ ತೆರಿಗೆ ಸಂಗ್ರಹಣೆ ಒಟ್ಟು 86,345/– (ಶೇ. 87) ಆಗಿರುತ್ತದೆ.

ನೀರು ನೈರ್ಮಲ್ಯ ಸಮಿತಿಯವರು ಸಭೆಯಲ್ಲಿ ತೀರ್ಮಾನಿಸಿದಂತೆ ಕಟ್ಟುನಿಟ್ಟಿನ ತೀರ್ಮಾನಗಳನ್ನು ಯಶಸ್ವಿಯಾಗಿ ಜಾರಿಗೊಳಿಸಿ ಕುಡಿಯುವ ನೀರಿನ ಯೋಜನೆಯನ್ನು ಗ್ರಾಮೀಣ ಜನತೆಗೆ ತಲುಪಿಸುವಲ್ಲಿ ಮಹತ್ತರ ಪಾತ್ರವಹಿಸಿರುತ್ತಾರೆ. ಈ ನೀರಿ ಸಮಿಯು ಕಾರ್ಯನಿರ್ವಹಿಸುತ್ತಿರುವುದರಿಂದ ಅಸ್ನೋಟಿ ಗ್ರಾಮ ಪಂಚಾಯಿತಿಯು ನೀರಿನ ಸಮರ್ಥನಿರ್ವಹಣೆಗೆ ಒತ್ತು ನೀಡಿ ಮಾದರಿ ಗ್ರಾಮ ಪಂಚಾಯಿತಿ ಎಂದು ಹೆಸರುಪಡೆದಿರುವುದು ಸಾರ್ಥಕವಾಗಿದೆ.

ಉಪನಿರ್ದೇಶಕರು (ಕಾ) ಜಿಲ್ಲಾ ನೆರವು ಘಟಕ, ಜಲನಿರ್ಮಲ ಯೋಜನೆ ಕಾರವಾರ ಜಿಲ್ಲೆ


## ಇವುಗಳೂ ನಿಮಗಿಷ್ಟವಾಗಬಹುದು

* ಜ್ಞಾನ ದೀವಿಗೆ: ಸತ್ಯಶಿವ ದರ್ಶನ
* ಜ್ಞಾನ ದೀವಿಗೆ: ಅರಿವಿನ ಕನ್ನಡಿ
* ಜ್ಞಾನ ದೀವಿಗೆ: ಸಂಪತ್ತಿಗೆ ಏನರ್ಥ?
* ಜ್ಞಾನ ದೀವಿಗೆ: ಧನಲೋಭಿಯ ದುರ್ಗತಿ
* ಜ್ಞಾನ ದೀವಿಗೆ: ಮನೆಯ ಉಗ್ರಾಣವಲ್ಲ
* ಜ್ಞಾನ ದೀವಿಗೆ: ಸ್ವರ್ಗ ಇನ್ನೆಲ್ಲಿ?
* ಜ್ಞಾನ ದೀವಿಗೆ: ಭಾವಶುದ್ಧಿಯೇ ಭಾಗ್ಯ
* ಜ್ಞಾನ ದೀವಿಗೆ: ಈ ಜಗವು ಚೈತನ್ಯದ ಚಿಲುಮೆ
* ಜ್ಞಾನ ದೀವಿಗೆ: ಪ್ರಪಂಚವು ಅಮೂಲ್ಯ
* ಜ್ಞಾನ ದೀವಿಗೆ: ದೇವಪರದೆ–ಜೀವಚಿತ್ರಗಳು

ಯಶೋಗಾಥೆ

## ಘನ ತ್ಯಾಜ್ಯ ವಸ್ತು ವಿಲೇವಾರಿಗಾಗಿ ಮಾದರಿ ಹುಲಕೋಟಿ ಗ್ರಾಮ ಪಂಚಾಯತಿ

ಗದಗ್ ತಾಲ್ಲೂಕು ಮತ್ತು ಜಿಲ್ಲೆಗೆ ಸೇರಿದ ಹುಲಕೋಟಿ ಗ್ರಾಮಪಂಚಾಯಿತಿಯು ಸಾಧಿಸಿರುವ ಪ್ರಗತಿಯ ಕಿರುಪರಿಚಯ.

ಹುಲಕೋಟಿ ಗ್ರಾಮ ಪಂಚಾಯತಿಯು ಗದಗ ತಾಲೂಕ ಗದಗ ಜಿಲ್ಲೆಗೆ ಸೇರಿದ್ದು ಗದಗದಿಂದಾ 9 ಕೀ.ಮೀ. ದೂರದಲ್ಲಿರುತ್ತದೆ. ಹುಲಕೋಟಿ ಗ್ರಾಮ ಪಂಚಾಯತಿ ಒಂದೇ ಗ್ರಾಮವನ್ನು ಒಳಗೊಂಡಿರುತ್ತದೆ. ಇಲ್ಲಿನ ಶೇ.75 ರಷ್ಟು ಕುಟುಂಬಗಳು ವ್ಯವಸಾಯವನ್ನು ಅವಲಂಬಿಸಿರುತ್ತವೆ. ಗ್ರಾಮ ಪಂಚಯತಿಯ ಒಟ್ಟು ಜನಸಂಖ್ಯೆ 11013.ಗ್ರಾಮ ಪಂಚಾಯತಿಯ ಸದಸ್ಯರ ಸಂಖ್ಯೆ 25 ಇದ್ದು ಇದರಲ್ಲಿ 10 ಜನ ಮಹಿಳಾ ಸದಸ್ಯರಿರುತ್ತಾರೆ.

ಸ್ವಚ್ಛತೆ ಹಾಗೂ ನೈರ್ಮಲ್ಯ ಉತ್ತಮ ಆರೋಗ್ಯದ ಅಡಿಪಾಯ "ಎಂಬ ಧ್ಯೇಯದಡಿ ಗ್ರಾಮದಲ್ಲಿ ಸಾರ್ವಜನಿಕರ ಸಹಭಾಗಿತ್ವದಲ್ಲಿ ಗ್ರಾಮ ಪಂಚಾಯತ್ ಕಮೀಟಿಯವರು ಶ್ರಮದಾನದ ಮೂಲಕ ಗ್ರಾಮದಲ್ಲಿ ಸ್ವಚ್ಛತೆ ಹಾಗೂ ನೈರ್ಮಲ್ಯವನ್ನು ಕಾಪಾಡಿಕೊಂಡು ಹೋಗುತ್ತಿರುವದು ವಿಶೇಷವಾಗಿರುತ್ತದೆ. 3 ಮಕ್ಕಳ ಉದ್ಯಾನವನ, ಹಿಂದೂ ಮುಸ್ಲಿಂ ಸಮಾಜದ ಒಟ್ಟಿಗೆ ಇರುವ ಸುಸಜ್ಜಿತ ಸ್ಮಶಾನ(ಮುಕ್ತಿವನ) ಹೊಂದಿದ್ದು,ಇದೀಗ ಈ ಗ್ರಾಮ ರಾಜ್ಯ ಮತ್ತು ರಾಷ್ಟ್ರಕ್ಕೆ ಮಾದರಿಯಾಗಿ ರಾಷ್ಟ್ರೀಯ ಮತ್ತು ರಾಜ್ಯ ಪುರಸ್ಕಾರಗಳನ್ನು ಪಡೆದ ಕೀರ್ತಿ ಹುಲಕೋಟಿ ಗ್ರಾಮ ಪಂಚಾಯಿತಿಗೆ ಸಲ್ಲುತ್ತದೆ.

### ಸಂಪೂರ್ಣ ನೈರ್ಮಲ್ಯ ಯೋಜನೆ

ಹುಲಕೋಟಿ ಗ್ರಾಮ ಪಂಚಾಯತಿಯು ಸಂಪೂರ್ಣ ನೈರ್ಮಲ್ಯ ಯೋಜನೆ ಅಡಿ ವಿವಿಧ ಯೋಜನೆಗಳನ್ನು ರೂಪಿಸಿ ಅದರಲ್ಲಿ ಯಶಸ್ವಿಯಾಗಿದೆ. ರಾಷ್ಟ್ರೀಯ ನಿರ್ಮಲಗ್ರಾಮ ಪುರಸ್ಕಾರವನ್ನು ಪಡೆದುಕೊಂಡಿದೆ.





* ಗ್ರಾಮದಲ್ಲಿ ಬಯಲು ಮಲವಿಸರ್ಜನೆ ನಿಷೇದ
* ಗ್ರಾಮದ ಪ್ರತಿ ಮನೆಗೆ ಶೌಚಾಲಯ ಕಡ್ಡಾಯ
* ಎಲ್ಲಾ ಶಾಲೆಗಳಿಗೆ ಮತ್ತು ಅಂಗನವಾಡಿಗಳಿಗೆ ಶೌಚಾಲಯ
* ಘನ ಹಾಗೂ ದ್ರವ ತ್ಯಾಜ್ಯ ವಸ್ತುಗಳ ಸಮರ್ಪಕ ವಿಲೇವಾರಿ
* ಶ್ರಮದಾನದ ಮೂಲಕ ಸ್ವಚ್ಚತೆಯ ಕಾರ್ಯಕ್ರಮ

ನಿರಂತರ ಪರಿಶ್ರಮದಿಂದ ಪ್ರತಿಫಲ ಸಿಗುತ್ತದೆ ಎಂಬುದಕ್ಕೆ ಹುಲಕೋಟಿ ಗ್ರಾಮವೇ ಸಾಕ್ಷಿ. ಇಲ್ಲಿಯ ಜನರು ತಮ್ಮ ದೈನಿಂದಿನ ನಿತ್ಯ ಕರ್ಮಗಳನ್ನು ಪೂರೈಸಿಕೊಳ್ಳಲು ಬಯಲನ್ನೇ ಅವಲಂಬಿಸಿದ್ದರು. ಗ್ರಾಮದ ಬೆರಳೆಣಿಕೆಯಷ್ಟು ಮಂದಿ ಶ್ರೀಮಂತರು ತಮ್ಮ ತಮ್ಮ ಮನೆಗಳಲ್ಲಿ ಶೌಚಾಲಯಗಳನ್ನು ನಿರ್ಮಿಸಿಕೊಂಡಿದ್ದರು. ಆದರೆ ಬಡ ಮತು ಮಧ್ಯಮ ವರ್ಗದ ಜನರಿಗೆ ಬಯಲಲ್ಲಿ ಮಲ ವಿಸರ್ಜನೆ ಮಾಡುವದು ಕಿರಿಕಿರಿಯಾಗುತ್ತಿತ್ತು. ಇನ್ನು ಹೆಂಗಳೆಯರ ಪಾಡಂತೂ ಹೇಳತೀರದು. ಇಂತಹ ಸಂದರ್ಭದಲ್ಲಿ ಗ್ರಾಮದ ನೆರವಿಗೆ ಬಂದದ್ದು ಜಲನಿರ್ಮಲಯೋಜನೆ ಹಾಗೂ ಸಂಪೂರ್ಣ ಸ್ವಚ್ಚತ ಅಂಧೋಲನ. ಗ್ರಾಮದಲ್ಲಿ ವಿನೂತನ ಮರ್ಗೋಪಾಯಗಳನ್ನು ಅನುಸರಿಸುವ ಮೂಲಕ ಪಂಚಾಯತಿಯ ವ್ಯಾಪ್ತಿಯ ಪ್ರತಿಯೊಂದು ಮನೆಗೆ ಶೌಚಾಲಯ ಹೊಂದುವಂತೆ ಜನರಿಗೆ ಮನೆಮನೆಗೆ ಹೋಗಿ ವಿಶಿಷ್ಠ ರೀತಿಯಲ್ಲಿ ಪ್ರೇರಣೆಯನ್ನು ನೀಡಲಾಯಿತು. ಇದರ ಜೊತೆಗೆ ಸ್ವಚ್ಚತಾ ಜಾತಾ ಬೀದಿನಾಟಕ, ಶಾಲೆಗಳಲ್ಲಿ ಶುಚಿತ್ವದ ಬಗ್ಗೆ ತರಬೇತಿ ಮೂಲಕ ಇತ್ಯಾದಿ ಕಾರ್ಯಕ್ರಮಗಳಿಂದ ಮನವರಿಕೆ ಮಾಡಿಕೊಡಲಾಯಿತು.

### ಘನ ತ್ಯಾಜ್ಯ ವಸ್ತುಗಳ ವಿಲೇವಾರಿ

ಹುಲಕೋಟಿ ಗ್ರಾಮ ಪಂಚಾಯತಿಯ ಎಲ್ಲಾ ವಾರ್ಡಗಳಲ್ಲಿ 145 ಕಸದ ತೊಟ್ಟಿಗಳನ್ನು ಜಲನಿರ್ಮಲ ಯೋಜನೆ ಅಡಿಯಲ್ಲಿ ಇರಿಸಲು ಕ್ರಮಕೈಗೊಳ್ಳಲಾಗಿತ್ತು. ಗ್ರಾಮಸ್ಥರೆಲ್ಲರು ತಮ್ಮ ಮನೆಯ ಕಸಕಡ್ಡಿಗಳನ್ನು ಇದರಲ್ಲಿ ಹಾಕುತ್ತಿದ್ದರು. ಇದರ ಜೊತೆಗೆ ಮುಸುರಿ ಪದಾರ್ಥಗಳನ್ನು ಕಸದ ತೊಟ್ಟಿಯಲ್ಲಿಯೇ ಹಾಕುತ್ತಿರುವದರಿಂದ ಕಸದ ತೊಟ್ಟಿಯಿಂದಾ ದುರ್ವಾಸನೆ ಉಂಟಾಗಿ ಕಸದ ತೊಟ್ಟಿ ಇರುವ ಅಕ್ಕಪಕ್ಕದ ಜನರಿಗೆ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಲು ಪ್ರಾರಂಭಿಸಿತು. ಅಲ್ಲದೇ ಇದನ್ನು ವಿಲೇವಾರಿ ಸ್ಥಳಕ್ಕೆ ತುಂಬಿ ಸಾಗಿಸುವದು ಕಷ್ಟವಾಗತೊಡಗಿತು. ಇದನ್ನು ಮನಗಂಡು ಗ್ರಾಮ ಪಂಚಯತಿ ಕಮೀಟಿಯವರು ಪ್ರತಿಯೊಂದು ಮನೆಗೆ ಪ್ಲ್ಯಾಸ್ಟಿಕ್ ಕಸದ ತೊಟ್ಟಿಯನ್ನು ಪೂರೈಸಿ ತ್ಯಾಜ್ಯವಸ್ತು ಸಂಗ್ರಹಿಸಲು ತಿರ್ಮಾನಿಸಲಾಯಿತು. ಕಳೆದ 2 ವರ್ಷಗಳಲ್ಲಿ ಗ್ರಾಮದ ಎಲ್ಲಾ ಮನೆಗಳಿಗೆ ಕಸದ ತೊಟ್ಟಿಗಳನ್ನು ಗ್ರಾಮ ಪಂಚಾಯತಿಯ ಮೂಲಕ ವಿತರಿಸಲಾಗಿದೆ. ಇದರ ಜೊತೆಗೆ ಒಂದು ಗೋಣಿ ಚೀಲವನ್ನು ಕೂಡಾ ಕೊಡಲಾಗಿದೆ. ಕೊಳೆಯಬಹುದಾದ ಪದಾರ್ಥಗಳನ್ನು ಡಸ್ಟಬಿನ್‌ಗಳಲ್ಲಿ ಹಾಕಲು ಹಾಗೂ ಕೊಳೆಯಲಾಗದ ಪದಾರ್ಥಗಳು ಅಂದರೆ, ಪ್ಲ್ಯಾಸ್ಟಿಕ್, ಹಾಳೆ,ಗ್ಲಾಸು ಇತ್ಯಾದಿಗಳನ್ನು ಗೋಣಿ ಚೀಲದಲ್ಲಿ ಹಾಕಲು ಪ್ರತಿಯೊಂದು ಮನೆಗೆ ಗ್ರಾಮ ಪಂಚಾಯತಿ ಸದಸ್ಯರು ಹಾಗೂ ಗ್ರಾ.ನೀ.ಸ.ಮತ್ತು ನೈ.ಸಮಿತಿಯವರು ತಿಳುವಳಿಕೆ ನೀಡಲಾಯಿತು .



ಡಸ್ಟಬಿನ್‌ಗಳಲ್ಲಿ ಸಂಗ್ರಹವಾದ ತ್ಯಾಜ್ಯವನ್ನು ವಾರದಲ್ಲಿ 2 ಸಲ ಗ್ರಾಮದ ಪ್ರತಿಯೊಂದು ಮನೆಗೆ ಟ್ರ್ಯಾಕ್ಟರ(ಗ್ರಾಮ ಪಂಚಯತಿ ಸ್ವಂತ ವಾಹನ) ಮೂಲಕ ಸಂಗ್ರಹಿಸಿ ವಿಲೇವಾರಿ ಸ್ಥಳಕ್ಕೆ ಹಾಕಲಾಗುತ್ತಿದೆ.ಪ್ಲ್ಯಾಸ್ಟಿಕ್ ಗ್ಲಾಸು ಇವುಗಳನ್ನು ಒಂದು ಸ್ಥಳದಲ್ಲಿ ಸಂಗ್ರಹಿಸಿ ಮಾರಾಟ ಮಾಡಲಾಗುತ್ತಿದೆ.ಜಿಲ್ಲಾ ನೆರವು ಘಟಕದಿಂದ ತ್ಯಾಜ್ಯವಸ್ತು ವಿಲೇವಾರಿ ಸ್ಥಳದಲ್ಲಿ ಯರೇಹುಳು ಗೊಬ್ಬರ ತಯಾರಿಕ ಘಟಕ ಸ್ಥಾಪಿಸಲು ಮತ್ತು ಪ್ಲ್ಯಾಸ್ಟಕ್ ಪದಾರ್ಥಗಳನ್ನು ಕಾಂಪ್ರೆಸ್ ಮಾಡಿ ಇಟ್ಟಿಗೆ

ರೂಪದಲ್ಲಿ ತಯಾರಿಸುವ ಮಶಿನ್ ಖರೀದಿಸಲು ರೂ.21.00 ಲಕ್ಷಗಳ ಕ್ರಿಯಾಯೋಜನೆಯನ್ನು ಕೂಡ ತಯಾರಿಸಲಾಗಿದೆ.

### ದ್ರವತ್ಯಾಜ್ಯ ವಿಲೇವಾರಿ

ಹುಲಕೋಟಿ ಗ್ರಾಮ ಪಂಚಾಯತಿಯು ದ್ರವ ತ್ಯಾಜ್ಯ ವಿಲೇವಾರಿಯಲ್ಲಿ ರಾಜ್ಯದಲ್ಲಿಯೇ ಮುಂಚೂಣಿಯಲ್ಲಿದೆ ಅಂದರೆ ತಪ್ಪಾಗಲಾರದು. ಕಾರಣ ಇಷ್ಟೆ, ರಾಜ್ಯದಲ್ಲಿಯೆ ಪೂರ್ಣ ಪ್ರಮಾಣದಲ್ಲಿ ಒಳಚರಂಡಿಯನ್ನು ಹೊಂದಿದ ಎಕೈಕ ಗ್ರಾಮ ಹುಲಕೋಟಿ. ವಿಶ್ವಬ್ಯಾಂಕ ನೆರವಿನ ಜಲ ನಿರ್ಮಲ ಯೋಜನೆ ಅಡಿಯಲ್ಲಿ ರೂ.320.00 ಲಕ್ಷಗಳಲ್ಲಿ ಈ ಒಳಚರಂಡಿಯ (ಅಂತರ ಜಾಲ 42ಕಿ.ಮೀ. & 1500 ಮ್ಯಾನ್ ಹೋಲ್ ಚೇಂಬರ್) ವ್ಯವಸ್ಥೆಯನ್ನು ಗ್ರಾಮದಲ್ಲಿ ಸಾರ್ವಜನಿಕರ ಸಹಬಾಗಿತ್ವದಲ್ಲಿ ಕಲ್ಪಿಸಿಕೊಡಲಾಗಿದೆ. ಗ್ರಾಮದ ಪ್ರತಿಯೊಂದು ಮನೆಗಳ ಬಚ್ಚಲು ಮೋರಿ ಹಾಗೂ ಶೌಚಲಯಗಳನ್ನು ಒಳಚರಂಡಿಗೆ ಜೋಡಣೆ ಮಾಡಲಾಗಿದೆ. ಹೀಗಾಗಿ ಗ್ರಾಮದಲ್ಲಿ ರಸ್ತೆಯ ಮೇಲೆ ಅಥವ ಇನ್ನಾವುದೆ ಸ್ಥಳಗಳಲ್ಲಿ ನೀರು ನಿಲ್ಲುವದು ಗಲೀಜು ಆಗುವ ಪ್ರಸಂಗ ಇರದಾಗಿದೆ.ಸಾಮಾನ್ಯವಾಗಿ ಚರಂಡಿಯ ನೀರನ್ನು ಗ್ರಾಮದ ಪಕ್ಕಕ್ಕೆ ಇರುವ ಹಳ್ಳ ಕೊಳ್ಳ ಅಥವಾ ಸರುವಿಗೆ ಬಿಡುವಂತ ವ್ಯವಸ್ಥೆಯನ್ನು ನಾವು ಪ್ರತಿಯೊಂದು ಗ್ರಾಮ, ನಗರ ಪ್ರದೇಶಗಳಲ್ಲಿ ಕಾಣುವ ಸಂಗತಿಯಾಗಿದೆ. ಆದರೆ ಈ ಗ್ರಾಮದಲ್ಲಿ ಒಳಚರಂಡಿಯ ಎಲ್ಲಾ ನೀರನ್ನು ಎಸ್.ಟಿ.ಪಿ.(ಸೀವೇಜ ಟ್ರೀಟಮೆಂಟ ಪ್ಲ್ಯಾಂಟ) ನಲ್ಲಿ ಸಂಗ್ರಹಿಸಿ ಸ್ವಾಭಾವಿಕವಾಗಿ ಶುದ್ಧೀಕರಿಸಿ ಶುದ್ಧೀಕರಿಸಿದ ನೀರನ್ನು ಅಕ್ಕಪಕ್ಕದ ರೈತರ ಜಮೀನುಗಳಿಗೆ ಪೂರೈಸುತ್ತಿರುವದು ಫಿಷೇಶವಾಗಿದೆ. ಇದರಿಂದಾಗಿ ಗ್ರಾಮದ ಪಕ್ಕಕ್ಕೆ ಹರಿಯುವ ಹಳ್ಳದ ಜಲಮಾಲಿನ್ಯವನ್ನು ತಡೆದಂತಗಿದೆ ಮತ್ತು ಕೆಲವೊಂದು ರೈತಾಪಿ ಜನರಿಗೆ ತಮ್ಮ ಜಮೀನಿನಲ್ಲಿ ಈ ಶುದ್ಧೀಕರಿಸಿದ ನೀರಿನಿಂದ ಮಾವು, ತೆಂಗು ,ಪೇರಲ, ಚಿಕ್ಕು ಇತ್ಯಾದಿ ಬೆಳೆಗಳಿಗೆ ಅನುಕೂಲವಾಗಿದೆ.

### ಕುಡಿಯುವ ನೀರಿನ ಶುದ್ಧಿರಣ ಘಟಕ (ಆರ್.ಓ.ಯುನಿಟ್)

ಹುಲಕೋಟಿ ಗ್ರಾಮದಲ್ಲಿ ಸಾರ್ವಜನಿಕರಿಗೆ ಶುದ್ಧವಾದ ಕುಡಿಯುವ ನೀರು ಪೂರೈಸಲು ಕುಡಿಯುವ ನೀರಿನ ಶುದ್ಧೀಕರಣ ಘಟಕವನ್ನು ಗ್ರಾಮ ಪಂಚಾಯತಿಯು ರೂರಲ್ ಮೆಡಿಕಲ್ ಅಸೋಸಿಯೇಷನ್ ಹಾಗೂ ಕೆ.ಎಚ್.ಪಾಟೀಲ ಪ್ರತಿಷ್ಠಾನದೊಂದಿಗೆ ಜಂಟಿಯಾಗಿ ಸ್ಥಾಪಿಸಲಾಗಿದೆ. ಜನರಿಗೆ ಶುದ್ದನೀರು ಕುಡಿಯುವದರಿಂದ ಯಾವ ರೀತಿ ಆರೋಗ್ಯಕ್ಕೆ ಅನುಕೂಲಕರ ಎಂಬ ತಿಳುವಳಿಕೆ ನೀಡಲಾಗಿದೆ. ಎಸ್.ಸಿ.ಹಾಗೂ ಎಸ್.ಟಿ. ಕುಟುಂಬದವರಿಗೆ 20ಲೀಟರ ಕ್ಯಾನನ್ನು ಗ್ರಾ.ಪಂ.ಶೇ20ರ ರಿಯಾಯಿತಿ ದರದಲ್ಲಿ ವಿತರಿಸಲಾಗಿದೆ. ಶುದ್ಧ ನೀರಿನ ಬಳಕೆಯಿಂದಾಗಿ ನೀರಿನಿಂದ ಹರಡಬಹುದಾದ ಕಾಯಿಲೆಗಳಾದ ವಾಂತಿಬೇದಿ, ಮಲೇರಿಯಾ, ಕಾಲರಾ ಪ್ಲೋರೊಸಿಸ್ ಇತ್ಯಾದಿ ಕಾಯಿಲೆಗಳ ಪ್ರಮಾಣ ಗಣನೀಯವಾಗಿ ಇಳಿಮುಖವಾಗಿವೆ. ವಯೋವೃದ್ದರಲ್ಲಿ ಮೊಣಕಾಲುನೋವು, ಸಂದು ನೋವು ಈ ನೀರಿನ ಸೇವನೆಯಿಂದ ಕಡಿಮೆಯಾಗಿದೆ ಎಂದು ಜನರ ಅಭಿಪ್ರಾಯವಾಗಿದೆ.

ಒಟ್ಟಾರೆಯಾಗಿ ಹುಲಕೋಟಿ ಗ್ರಾಮದಲ್ಲಿ ಘನ ಹಾಗೂ ದ್ರವ ತ್ಯಾಜ್ಯ ವಸ್ತುಗಳ ಸಮರ್ಪಕ ವಿಲೇವಾರಿ, ಸ್ವಚ್ಛವಾದ ರಸ್ತೆ, ಎಲ್ಲಾ ಶಾಲೆ ಅಂಗನವಾಡಿಗಳಲ್ಲಿ ಸುಸಜ್ಜಿತವಾದ ಶೌಚಾಲಯಗಳು. ಜನರಲ್ಲಿ ಸ್ವಚ್ಛತೆಯ ಕುರಿತು ಇರುವ ತಿಳುವಳಿಕೆಯಿಂದಾಗಿ, ಸ್ವಚ್ಛತೆಯ ಸುಸ್ಥಿರತೆಯನ್ನು ಕಾಪಾಡಿಕೊಳ್ಳಲು ಅನುಕೂಲವಾಗಿದೆ.

### ಕರವಸೂಲಿ

ಹುಲಕೋಟಿ ಗ್ರಾಮ ಪಂಚಾಯತಿಯ ವಾರ್ಷಿಕ ರೂ 42.00 ಲಕ್ಷ ತೆರಿಗೆ ಬೇಡಿಕೆ ಇದ್ದು ವಸೂಲಾತಿಯು ಚೆನ್ನಾಗಿರುತ್ತದೆ. ಗ್ರಾಮಸ್ಥರು ಸ್ವಯಂ ಪ್ರೇರಿತರಾಗಿ ಗ್ರಾಮ ಪಂಚಾಯತ್ ಕಾರ್ಯಾಲಯಕ್ಕೆ ತಾವೇ ಬಂದು ತೆರಿಗೆಗಳನ್ನು ಪಾವತಿ ಮಾಡುವ ರೂಡಿಯನ್ನು ಬೆಳೆಸಿಕೊಂಡಿರುತ್ತಾರೆ. ಗ್ರಾಮ ಪಂಚಯತಿಯು ಕೂಡಾ ಸಾರ್ವಜನಿಕರಿಗೆ ತೃಪ್ತಿಕರವಾಗಿ ಸೇವೆಯನ್ನು ಒದಗಿಸುವಲ್ಲಿ ಮಾದರಿಯಾಗಿದೆ, ಮತ್ತು ಪಿಯಾಸ ಅಡಿಯಲ್ಲಿ ಪ್ರಶಸ್ತಿಯನ್ನು ಕೂಡಾ ಪಡೆದಿದೆ.

ಗ್ರಾಮ ಪಂಚಾಯತ್ ಕಾರ್ಯಾಲಯ ಹುಲಕೋಟಿ ಮಕ್ಕಳ ಉಧ್ಯಾನವನ (ಕೃಷ್ಣಾ ಕಾಲೋನಿ, ಹುಲಕೋಟಿ)ವನ್ನು ನಿರ್ಮಿಸಿದೆ.

### ಮುಕ್ತಿವನ (ಸ್ಮಶಾನ), ಹುಲಕೋಟಿ

ಗ್ರಾಮದ ಪ್ರತಿಮನೆಗಳಿಗೆ ಕಸದ ತೊಟ್ಟಿಗಳ ವಿತರಣೆ ಮಾಡಿದ್ದು ಗ್ರಾಮದ ಪ್ರತಿಮನೆಗಳಿಗೆ ಕಸದ ತೊಟ್ಟಿಗಳ ವಿತರಣೆ ಮಾಡಿದ್ದು ಶೇ.20ರ ರಿಯಾಯಿತಿ ದರದಲ್ಲಿ ಎಸ್.ಸಿ/ಎಸ್.ಟಿ ಕುಟುಂಬದವರಿಗೆ ಶುದ್ಧ ಕುಡಿಯುವ ನೀರಿನ ಕ್ಯಾನ ವಿತರಣೆ ಮಾಡಲಾಗಿದೆ. ಗ್ರಾಮಪಂಚಾಯಿತಿ ಟ್ರ್ಯಾಕ್ಟರ್‌ಮೂಲಕ ಕಸವಿಲೇವಾರಿ, ಕುಡಿಯುವನೀರಿನ ಶುದ್ಧೀಕರಣ ಘಟಕದ ಸ್ಥಾಪನೆಗಳಿಂದ ಹುಲಕೋಟಿ ಗ್ರಾಮಪಂಚಾಯಿತಿಯು ಮಾದರಿ ಗ್ರಾಮ ಪಂಚಾಯಿತಿ ಎನಿಸಿಕೊಂಡಿದೆ.



# ಕುಷ್ಠರೋಗ–ಮೂಢ ನಂಬಿಕೆಗಳಿಂದ ದೂರವಿಡಿ




**ವಾಮನರಾವ್**
Mobile: 9035756330


ಚರ್ಮದ ಮೇಲೆ ತಿಳಿ ಬಿಳಿ ಕೆಂಪು ಮಿಶ್ರಿತ ಮಚ್ಚೆಗಳು, ಮಚ್ಚೆಗಳ ಮೇಲೆ ಸ್ಪರ್ಶಜ್ಞಾನ ಇರುವುದಿಲ್ಲ. ಜೊತೆಗೆ ಚರ್ಮದ ಮೇಲೆ ಬೆವರು ಸುರಿಯುವುದಿಲ್ಲ.

ಕುಷ್ಠರೋಗವೆಂದು ಹೇಳಿದ ತಕ್ಷಣ ಜನ ಬೆಚ್ಚಿಬೀಳುವರು. ಕಾರಣ ಜನರಲ್ಲಿರುವ ಅವೈಜ್ಞಾನಿಕ ಮೂಢ ನಂಬಿಕೆಗಳು. ಅವು ಅವರಲ್ಲಿ ಮನೆಮಾಡಿಕೊಂಡಿವೆ. ಇದೊಂದು ಪುರಾತನ ಕಾಯಿಲೆ. ಅಂದು ಇದಕ್ಕೆ ನಿರ್ದಿಷ್ಟವಾದ ವೈದ್ಯಕೀಯ ಚಿಕಿತ್ಸೆ ಇರಲಿಲ್ಲ. ಹೀಗಾಗಿ ಕಾಲ ಕಳೆದಂತೆಲ್ಲಾ ರೋಗಿಯು ತನ್ನ ರೂಪ ವಿಕಾರ ರೂಪ ಪಡೆದುಕೊಳ್ಳುತ್ತಿದ್ದ. ಈ ರೋಗಿಗಳನ್ನು ಮನೆಯಲ್ಲಿ, ಅಷ್ಟೇಕೆ ಗ್ರಾಮಗಳಲ್ಲಿಯೂ ಸಹ ವಾಸಿಸಲು ಅವಕಾಶ ನೀಡದೆ ಹೊರಹಾಕಲಾಗುತ್ತಿತ್ತು. ಈ ರೋಗವು ಪಾಪ–ಶಾಪಗಳಿಂದ ಬರುತ್ತದೆಂದು ಜನರು ತಿಳಿದುಕೊಂಡಿದ್ದರು. ಇದರ ಪರಿಣಾಮದಿಂದ ಜನರು ಕಾಯಿಲೆ ವಾಸಿಮಾಡಿಕೊಳ್ಳಲು ದೇವರ ಮೊರೆ ಹೋಗುತ್ತಿದ್ದರು. ನಂತರದ ದಿನಗಳಲ್ಲಿ ಈ ರೋಗದ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ದೊರೆತು ಉತ್ತಮ ಔಷಧಗಳು ಸಹ ಲಭ್ಯವಾಗಿವೆ. ಈಗ ಇದೊಂದು ಸಾಮಾನ್ಯ ರೋಗವೆಂದು ಮತ್ತು ಈ ರೋಗಕ್ಕೆ ನಿರ್ದಿಷ್ಟವಾದ ಚಿಕಿತ್ಸೆಯಿದೆ ಎಂದು ತಿಳಿದು ಹಲವಾರು ಮೂಢನಂಬಿಕೆಗಳಿಂದ ಹೊರ ಬರಲು ಸಾಧ್ಯವಾಯಿತು. ಈ ರೋಗಕ್ಕೆ ಜಾತಿ, ಧರ್ಮ, ಲಿಂಗ, ಪ್ರದೇಶ, ಶ್ರೀಮಂತ–ಬಡವ, ಸಣ್ಣವರು–ದೊಡ್ಡವರು ಎಂಬ ಭೇದ–ಭಾವವಿಲ್ಲದೆ ರೋಗ ನಿರೋಧಕ ಶಕ್ತಿ ಕಡಿಮೆಯಿರುವ ಎಲ್ಲರಿಗೂ ಬರುವ ರೋಗ.

ಕುಷ್ಠರೋಗವು"ಮೈಕೋ ಬ್ಯಾಕ್ಟೀರಿಯಾ ಲೆಪ್ರಾ" ಎಂಬ ಒಂದು ರೋಗಾಣುವಿನಿಂದ ಬರುತ್ತದೆಂದು ನಾರ್ವೆ ದೇಶದ ವೈದ್ಯ ವಿಜ್ಞಾನಿ ಡಾ॥ ಹ್ಯಾನ್ಸನ್ 1873ರಲ್ಲಿ ಕಂಡುಹಿಡಿದು ಮನುಕುಲಕ್ಕೆ ದೊಡ್ಡ ಉಪಕಾರ ಮಾಡಿದ ಮಹಾ ಮಾನವತಾವಾದಿ ಎಂದು ಹೇಳಿದರೆ ತಪ್ಪಾಗಲಾರದು. ಇದು ಗಾಳಿಯಿಂದ ಹರಡುತ್ತದೆ. ಅಂದರೆ ಒಬ್ಬ ಕುಷ್ಠರೋಗಿ ಕೆಮ್ಮಿದಾಗ, ಸೀನಿದಾಗ ಕೋಟಿಗಟ್ಟಲೆ ರೋಗಾಣುಗಳು ಗಾಳಿಯಲ್ಲಿ ಸೇರಿಕೊಂಡು ಆ ಗಾಳಿಯನ್ನು ಆರೋಗ್ಯವಂತ ರೋಗ ನಿರೋಧಕ ಶಕ್ತಿ ಕಡಿಮೆ ಇರುವ ಮನುಷ್ಯ ಸೇವಿಸುವುದರಿಂದ ಕುಷ್ಠ ರೋಗವು ಬರುತ್ತದೆ. ಆದರೆ ಈ ರೋಗವು ಎಲ್ಲರಿಗೂ ಬರುವುದಿಲ್ಲ. ಒಟ್ಟು ಜನಸಂಖ್ಯೆಯಲ್ಲಿ ಶೇ. 97 ರಷ್ಟು ಜನರಿಗೆ ರೋಗ ನಿರೋಧಕ ಶಕ್ತಿ ಇರುವುದರಿಂದ ಇವರಿಗೆ ಈ ರೋಗ ಬರುವುದಿಲ್ಲ. ಉಳಿದ ಶೇ. 3 ರಷ್ಟು ಜನರಿಗೆ ಮಾತ್ರ ಕುಷ್ಠರೋಗ ತಗುಲುವುದು. ಜನಸಾಮಾನ್ಯರಲ್ಲಿ ಈ ರೋಗದ ಬಗ್ಗೆ ಅಭಿಪ್ರಾಯ ಬದಲಾಗತೊಡಗಿದೆ. ಇಂದು ಈ ರೋಗವು ಸಂಪೂರ್ಣವಾಗಿ ತಡೆಗಟ್ಟಿ ಹಲವಾರು ಅನಾಹುತಗಳನ್ನು ತಡೆಗಟ್ಟಿದಂತಾಗಿದೆ.

ಈ ರೋಗದ ಪ್ರಥಮ ಲಕ್ಷಣಗಳೆಂದರೆ ಚರ್ಮದ ಮೇಲೆ ತಿಳಿ ಬಿಳಿ ಕೆಂಪು ಮಿಶ್ರಿತ ಮಚ್ಚೆಗಳು, ಮಚ್ಚೆಗಳ ಮೇಲೆ ಸ್ಪರ್ಶಜ್ಞಾನ ಇರುವುದಿಲ್ಲ. ಜೊತೆಗೆ ಚರ್ಮದ ಮೇಲೆ ಬೆವರು ಸುರಿಯುವುದಿಲ್ಲ. ಈ ಸ್ಥಿತಿಯಲ್ಲಿ ರೋಗಿಯು

ಔಷಧದ ಚಿಕಿತ್ಸೆ ಪಡೆದಲ್ಲಿ, ರೋಗಿಯು ಸಂಪೂರ್ಣ ಗುಣಮುಖ ಹೊಂದುವನು ಮತ್ತು ಯಾವುದೇ ಅಂಗವಿಕಲತೆ ಅಥವಾ ವಿರೂಪವಾಗುವುದಿಲ್ಲ. ಈ ರೋಗವು ಚರ್ಮದ ಮತ್ತು ನರ ಸಂಬಂಧಿ ಕಾಯಿಲೆ. ಸಾರ್ವಜನಿಕರು ಇದನ್ನು ತಿಳಿದುಕೊಂಡಲ್ಲಿ ತಮ್ಮ ಮನೆಯಲ್ಲಿ ಯಾರಿಗಾದರೂ ಇಂಥಹ ಮಚ್ಚೆಗಳಿದ್ದರೆ, ವೈದ್ಯರಲ್ಲಿ ತೋರಿಸಿ ಉಚಿತವಾಗಿ ವೈದ್ಯಕೀಯ ಚಿಕಿತ್ಸೆ ಪಡೆಯಬಹುದು. ಈಗಾಗಲೇ ಈ ರೋಗವು ಇತರೆ ಕಾಯಿಲೆಗಳಂತೆ ಸಾಮಾನ್ಯ ಕಾಯಿಲೆಯಾಗಿದೆ. ಇಂದು ಕರ್ನಾಟಕದಲ್ಲಿ ಈ ರೋಗ ಪ್ರತಿ 10000 ಜನಕ್ಕೆ ಒಂದಕ್ಕಿಂತ ಕಡಿಮೆ ಪ್ರಮಾಣದಲ್ಲಿರುವುದು ಒಂದು ಸಂತಸದ ಸಂಗತಿ ಎಂದು ಹೇಳಲು ಸಂತಸವಾಗುತ್ತದೆ. ಕಾರಣ ರೋಗವು ಈ ಸ್ಥಿತಿಯಲ್ಲಿದ್ದರ, ರೋಗವು ಹರಡಲು ಸಾಧ್ಯವಿಲ್ಲ.

ಕುಷ್ಠರೋಗಗಳಲ್ಲಿ ಎರಡು ವಿಧಗಳಿವೆ. ಒಂದು ಮತ್ತೊಬ್ಬರಿಗೆ ಹರಡಿ ಸಾಂಸರ್ಗಿಕ ರೀತಿಯದ್ದಾಗಿದ್ದರೆ, ಎರಡನೆಯದು ಬೇರೆಯವರಿಗೆ ಹರಡದ ಅಸಾಂಸರ್ಗಿಕ ರೀತಿಯದ್ದಾಗಿದೆ. ಮೊದಲನೆ ಮತ್ತು ಎರಡನೆ ರೀತಿಯ ಕುಷ್ಠ ರೋಗಿಗಳಿಗೆ ಕ್ರಮವಾಗಿ 1 ವರ್ಷ ಮತ್ತು 6 ತಿಂಗಳು ಬಹು ಔಷಧಿ ಚಿಕಿತ್ಸೆ ನೀಡಿದಲ್ಲಿ ಅಂಗವಿಕಲತೆ ತಡೆಗಟ್ಟಿ ರೋಗವು ಸಂಪೂರ್ಣವಾಗಿ ವಾಸಿಯಾಗುವುದು. ಕುಷ್ಠರೋಗಿಗಳಿಗೆ ನೀಡುತ್ತಿರುವ ಔಷಧಗಳು ಮೂರು ಬಗೆಯದು. ಈ ಮೊದಲು ಒಂದೇ ಬಗೆಯ ಔಷಧ ಅಂದರೆ ಡೆಪ್ಸೋನ್ ಔಷಧವನ್ನು 5 ವರ್ಷಗಳವರೆಗೆ ಚಿಕಿತ್ಸೆ ನೀಡಲಾಗುತ್ತಿದ್ದು ಇದರಿಂದ ರೋಗಿಗಳ ದೀರ್ಘಾವಧಿ ಚಿಕಿತ್ಸೆಗೆ ಹೊಂದಿಕೊಳ್ಳದೆ ಮಧ್ಯದಲ್ಲಿಯೇ ಚಿಕಿತ್ಸೆ ಬಿಟ್ಟು ಬಿಡುತ್ತಿದ್ದುದರ ಪರಿಣಾಮ ಕಾಯಿಲೆಯು ಮತ್ತಷ್ಟು ಉಲ್ಬಣಗೊಂಡು ಕಾಯಿಲೆ ವಾಸಿಯಾಗದೆ ಅಂಗವಿಕಲತೆ ಉಂಟಾಗುತ್ತಿತ್ತು. ಆದರೆ ಈಗ ಮೂರು ಬಗೆಯ ಔಷಧಿಗಳು ನೀಡುತ್ತಿರುವುದರಿಂದ ಔಷಧಿ ಸೇವನೆಯ ಕಾಲ ಕೇವರ 6 ತಿಂಗಳಿಂದ 1 ವರ್ಷದವರೆಗೆ ಸೀಮಿತವಾಯಿತು. ರೋಗಿಗಳು ಔಷಧ ಸೇವನೆಯ ಕಾಲಾವಧಿ ಕಡಿಮೆಯಾಗಿರುವುದರಿಂದ ಉತ್ತಮ ರೀತಿಯಲ್ಲಿ ಪ್ರತಿಕ್ರಿಯಿಸುತ್ತಿದ್ದು, ರೋಗಿಗಳು ಸಂಪೂರ್ಣವಾಗಿ ನಿಯಮಿತವಾಗಿ ಔಷಧ ಸೇವಿಸುತ್ತಿರುವುದರಿಂದ, ಈ ರೋಗವನ್ನು ತಡೆಗಟ್ಟಲು ಸಾಧ್ಯವಾಗಿದೆ.

ಎಲ್ಲಾ ಕಾಯಿಲೆಗಳಿಗೆ ಒಂದು ರೀತಿಯ ಸಮಸ್ಯೆಯಿದ್ದರೆ, ಈ ರೋಗಕ್ಕೆ ಬಹುಮುಖ ಸಮಸ್ಯೆಗಳಿವೆ. ಆದುದರಿಂದ ಸರ್ಕಾರ ಈ ರೋಗದ ನಿರ್ಮೂಲನೆಗೆ ಹೆಚ್ಚಿನ ಆದ್ಯತೆ ನೀಡಿದೆ. ಈಗ ಈ ರೋಗ ಸಂಪೂರ್ಣ ಹತೋಟಿಯಲ್ಲಿದೆ. ಮಹಾತ್ಮಗಾಂಧಿಯವರು ಕುಷ್ಠರೋಗಿಗಳನ್ನು ತಮ್ಮ ಆಶ್ರಮದಲ್ಲಿ ಇರಿಸಿಕೊಂಡು ಚಿಕಿತ್ಸೆ ನೀಡುತ್ತಿದ್ದರು. ಜೊತೆಗೆ ಸಾಂತ್ವನ ಹೇಳುತ್ತಿದ್ದರು. ಹೀಗೆ ಮಹಾತ್ಮಗಾಂಧಿಯವರು ಕುಷ್ಠರೋಗಿಗಳಿಗೆ ತೋರುತ್ತಿದ್ದ ಪ್ರೀತಿ, ವಿಶ್ವಾಸದಿಂದ ಅವರ ಮರಣದ ದಿನವನ್ನು ಕುಷ್ಠರೋಗ ದಿನವನ್ನಾಗಿ ದೇಶಾದ್ಯಂತ ಆಚರಿಸಲಾಗುತ್ತಿದೆ. ಈ ದಿನದಂದು ಜನರಲ್ಲಿ ರೋಗದ ಬಗ್ಗೆ ಸರಿಯಾದ ವೈಜ್ಞಾನಿಕ ಅಂಶಗಳನ್ನು ತಿಳಿಸಿ ಮೂಢನಂಬಿಕೆಗಳನ್ನು ದೂರಮಾಡಿ ಚಿಕಿತ್ಸೆ ಪಡೆದು ಆರೋಗ್ಯವಂತ ಜೀವನ ನಡೆಸಲು ಪ್ರೋತ್ಸಾಹಿಸುವುದು.

ಈ ಹಿಂದ ಕುಷ್ಠರೋಗವು ಒಬ್ಬ ವ್ಯಕ್ತಿಗೆ ತಗುಲಿದರೆ ಈ ರೋಗದ ಆಧಾರದ ಮೇಲೆ ವಿವಾಹ ವಿಚ್ಛೇದನ ಪಡೆಯಲು ಕಾನೂನಿನಲ್ಲಿ ಅವಕಾಶವಿತ್ತು. ಆದರೆ ಇಂದು ಒಳ್ಳೆಯ ಗುಣಮಟ್ಟದ ಔಷಧಗಳ ಲಭ್ಯತೆಯಿಂದ ರೋಗವನ್ನು ಸಂಪೂರ್ಣವಾಗಿ ವಾಸಿ ಮಾಡಬಹುದು. ಈ ಅಂಶವನ್ನು ಗಣನೆಗೆ ತೆಗೆದುಕೊಂಡು ಕುಷ್ಠರೋಗ ಆಧಾರವಾಗಿಟ್ಟುಕೊಂಡು ವಿವಾಹ ವಿಚ್ಛೇದನ ನೀಡುವ ನಿಯಮವನ್ನು ರದ್ದುಪಡಿಸಿರುತ್ತಾರೆ. ಒಂದು ಮಾತನ್ನು ನಾನು ಇಲ್ಲಿ ಹೇಳಲೇಬೇಕು. ಕುಷ್ಠರೋಗವನ್ನು ಔಷಧದಿಂದ ಗುಣಪಡಿಸಬಹುದು. ಆದರೆ ಮನಸ್ಸಿಗೆ ಅಂಟಿದ ನೋವನ್ನು ನಾವು ನೀವು ಮಾತ್ರ ನಿವಾರಿಸಬಹುದು. ಆದುದರಿಂದ ಈ ರೋಗವನ್ನು ನಿರ್ಮೂಲನೆ ಮಾಡಲು ಎಲ್ಲರೂ ಸಕ್ರಿಯವಾಗಿ ಪಾಲ್ಗೊಳ್ಳಬೇಕಾಗಿದೆ.

**ಶ್ರೀದತ್ತ ನಿಲಯ, 11ನೇ ಅಡ್ಡ ರಸ್ತೆ, ಜಯನಗರ ಪೂರ್ವ,**
**ತುಮಕೂರು – 572102.**

ಸುತ್ತೋಲೆ

## ಕರ್ನಾಟಕ ಸರ್ಕಾರ

ನಂ.ಗ್ರಾಅಪ/611/ಗ್ರಾಪಂಕಾ 2011

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 04-01-2013

## ಸುತ್ತೋಲೆ

**ವಿಷಯ** : ಜಿಲ್ಲಾ ಮಂತ್ರಿಗಳು, ಸ್ಥಳೀಯ ಶಾಸಕರು, ಹಾಗೂ ಚುನಾವಣಾ ಕ್ಷೇತ್ರದ ಸಂಸತ್ ಸದಸ್ಯರು, ಇತರೆ ಸಚಿವರು/ಸಂಸದರು/ವಿಧಾನ ಸಭಾ ಸದಸ್ಯರು/ವಿಧಾನ ಪರಿಷತ್ತಿನ ಸದಸ್ಯರುಗಳನ್ನು ಸರ್ಕಾರದ ಸಮಾರಂಭಗಳಿಗೆ ಆಹ್ವಾನಿಸುವ ಬಗ್ಗೆ.

**ಉಲ್ಲೇಖ** :

1. ಕರ್ನಾಟಕ ರಾಜ್ಯದ ಆಧ್ಯತಾ ಪಟ್ಟಿಯ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 2ಹೆಚ್‌ಡಬ್ಲ್ಯೂಪಿ 91, ದಿನಾಂಕ: 11-11-1993.
2. ಸರ್ಕಾರದ ತಿದ್ದೋಲೆ ಸಂಖ್ಯೆ: ಸಿಆಸುಇ 2 ಹೆಚ್‌ಡಬ್ಲ್ಯೂಪಿ 91, ದಿನಾಂಕ: 20-09-1994.
3. ಸರ್ಕಾರದ ಸೇರ್ಪಡೆ ಸಂಖ್ಯೆ: ಸಿಆಸುಇ 1 ಹೆಚ್‌ಡಬ್ಲ್ಯೂಪಿ 2005, ದಿನಾಂಕ: 22-02-2007.
4. ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 58 ರಾರಾಆ 2008, ದಿನಾಂಕ : 29-09-2009.
5. ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 55 ರಾರಾಆ 2009, ದಿನಾಂಕ: 23-06-2009.
6. ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 02 ಹೆಚ್‌ಡಬ್ಲ್ಯೂಪಿ 2010, ದಿನಾಂಕ: 07-12-2010.
7. ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 20 ರಾರಾಆ 2012 (ಭಾಗ), ದಿನಾಂಕ: 27-06-2012.
8. ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 66 ಹೆಚ್‌ಡಬ್ಲ್ಯೂಪಿ 2012, ದಿನಾಂಕ : 17-09-2012.

***********

ಪ್ರಜಾಪ್ರಭುತ್ವದಲ್ಲಿ ಸಚಿವರು, ಚುನಾಯಿತ ಪ್ರತಿನಿಧಿಗಳಾದ ಸಂಸತ್ ಸದಸ್ಯರು, ಸ್ಥಳೀಯ ಶಾಸಕರುಗಳು, ಇತರೆ ಸಂಸದರು/ವಿಧಾನ ಸಭಾ ಸದಸ್ಯರು/ವಿಧಾನ ಪರಿಷತ್ತಿನ ಸದಸ್ಯರುಗಳನ್ನು ಜಿಲ್ಲೆ ಹಾಗೂ ತಾಲ್ಲೂಕುಗಳಲ್ಲಿ ಏರ್ಪಡಿಸುವ ರಾಷ್ಟ್ರೀಯ ಹಾಗೂ ಇತರೆ ಸರ್ಕಾರದ ಸಮಾರಂಭಗಳಿಗೆ ಆಹ್ವಾನಿಸುವ ಮತ್ತು ಸಮಾರಂಭದಲ್ಲಿ ನೀಡುವ ಸ್ಥಾನ ಮಾನದ ಬಗ್ಗೆ ವಿಸ್ತೃತ ಸೂಚನೆಗಳನ್ನು ಉಲ್ಲೇಖಿತ ಸರ್ಕಾರದ ಅಧಿಸೂಚನೆ ಮತ್ತು ಸುತ್ತೋಲೆಗಳಲ್ಲಿ ಸರ್ಕಾರವು ನೀಡಿದೆ.

ಮೇಲ್ಕಂಡ ಸೂಚನೆಗಳನ್ನು ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ತಪ್ಪದೇ ಪಾಲಿಸಬೇಕಾಗುತ್ತದೆ.

ಆದಾಗ್ಯೂ ಹಲವಾರು ಜಿಲ್ಲಾ/ತಾಲ್ಲೂಕು/ಗ್ರಾಮ ಪಂಚಾಯಿತಿಗಳು ಏರ್ಪಡಿಸುವಂತಹ ಸರ್ಕಾರಿ ಸಮಾರಂಭಗಳಿಗೆ ಜಿಲ್ಲಾ ಮಂತ್ರಿಗಳು, ಸ್ಥಳೀಯ ಶಾಸಕರು, ಹಾಗೂ ಚುನಾವಣಾ ಕ್ಷೇತ್ರದ ಸಂಸತ್ ಸದಸ್ಯರು, ಇತರೆ ಸಚಿವರು/ಸಂಸದರು/ವಿಧಾನ ಸಭಾ ಸದಸ್ಯರು/ವಿಧಾನ ಪರಿಷತ್ತಿನ ಸದಸ್ಯರು, ಜಿಲ್ಲಾ ಪಂಚಾಯಿತಿ ಅಧ್ಯಕ್ಷರನ್ನು ಆಹ್ವಾನಿಸದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ವಿಷಯವನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದೆ.

ಆದುದರಿಂದ ಜಿಲ್ಲಾ/ತಾಲ್ಲೂಕು/ಗ್ರಾಮ ಪಂಚಾಯಿತಿಗಳು ಏರ್ಪಡಿಸುವಂತಹ ಸರ್ಕಾರಿ ಸಮಾರಂಭಗಳಿಗೆ ಜಿಲ್ಲಾ ಮಂತ್ರಿಗಳು, ಸ್ಥಳೀಯ ಶಾಸಕರು, ಹಾಗೂ ಚುನಾವಣಾ ಕ್ಷೇತ್ರದ ಸಂಸತ್ ಸದಸ್ಯರು, ಇತರೆ ಸಚಿವರು/ಸಂಸದರು/ವಿಧಾನ ಸಭಾ ಸದಸ್ಯರು/ವಿಧಾನ ಪರಿಷತ್ತಿನ ಸದಸ್ಯರು, ಜಿಲ್ಲಾ ಪಂಚಾಯಿತಿ ಅಧ್ಯಕ್ಷರನ್ನು ಕಡ್ಡಾಯವಾಗಿ ಆಹ್ವಾನಿಸಿ ಸಮಾರಂಭದಲ್ಲಿ ಅಗತ್ಯ ಸ್ಥಾನಮಾನ ನೀಡುವಂತೆ ಸೂಚಿಸಿದೆ.

ಇದಲ್ಲದೆ ಜಿಲ್ಲಾ/ತಾಲ್ಲೂಕು/ಗ್ರಾಮ ಪಂಚಾಯಿತಿಗಳು ಏರ್ಪಡಿಸುವಂತಹ ಸರ್ಕಾರಿ ಸಮಾರಂಭಗಳಿಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿ/ಸರ್ಕಾರದ ಕಾರ್ಯದರ್ಶಿಗಳ ಅನುಮತಿ ಪಡೆಯದೆ ಆಹ್ವಾನ ಪತ್ರಿಕೆಗಳಲ್ಲಿ ಹೆಸರನ್ನು ನಮೂದಿಸುತ್ತಿರುವುದೂ ಸಹ ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಇದು ಸಮಂಜಸವಾದ ಕ್ರಮವಾಗಿರುವುದಿಲ್ಲ. ಆದುದರಿಂದ ಸರ್ಕಾರದ ಪ್ರಧಾನ ಕಾರ್ಯದರ್ಶಿ/ಸರ್ಕಾರದ ಕಾರ್ಯದರ್ಶಿ ರವರ ಅನುಮತಿ ಪಡೆಯದೆ ಆಹ್ವಾನ ಪತ್ರಿಕೆಗಳಲ್ಲಿ ಅವರ ಹೆಸರನ್ನು ನಮೂದಿಸಬಾರದೆಂದೂ ಸಹ ಸೂಚಿಸಿದೆ.

ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ಹಂತದಲ್ಲಿ ಬರುವ ಜಿಲ್ಲಾ ಮಟ್ಟದ ಅಧಿಕಾರಿಗಳು, ತಾಲ್ಲೂಕು ಮಟ್ಟದ ಅಧಿಕಾರಿಗಳು ಮತ್ತು ಗ್ರಾಮ ಮಟ್ಟದ ಅಧಿಕಾರಿ/ನೌಕರರಿಗೆ ಈ ಸುತ್ತೋಲೆಯನ್ನು ಕಳುಹಿಸುವುದಲ್ಲದೆ ಜಿಲ್ಲಾ/ತಾಲ್ಲೂಕು ಮಟ್ಟದಲ್ಲಿ ನಡೆಯುವ ಸಭೆಗಳಲ್ಲಿ ಎಲ್ಲರಿಗೂ ಮನದಟ್ಟು ಮಾಡಲು ಕ್ರಮ ವಹಿಸುವಂತೆ ಸೂಚಿಸಿದೆ. ಶಿಷ್ಟಾಚಾರ ಸಂಹಿತೆಯನ್ನು ಉಲ್ಲಂಘಿಸಿದಲ್ಲಿ ಸಂಬಂಧಪಟ್ಟವರನ್ನು ವೈಯಕ್ತಿಕ ಜವಾಬ್ದಾರರನ್ನಾಗಿ ಮಾಡುವುದಲ್ಲದೆ ಅಂಥವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು.

**(ಡಾ: ಇ.ವಿ. ರಮಣ ರೆಡ್ಡಿ)**
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಸುತ್ತೋಲೆ

**ಕರ್ನಾಟಕ ಸರ್ಕಾರ**

ನಂ.ಗ್ರಾಅಪ/09/ಗ್ರಾಪಂಅ 2012

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 07-01-2013

## ಸುತ್ತೋಲೆ

ವಿಷಯ : ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳು ನಡೆಸುವ ಶಾಸನಬದ್ಧ ಸಭೆಗಳ ನಡವಳಿಗಳನ್ನು ಸಾರ್ವಜನಿಕ ಮಾಹಿತಿಗಾಗಿ ಪ್ರಕಟಿಸುವ ಬಗ್ಗೆ.

ಉಲ್ಲೇಖ : ಸರ್ಕಾರದ ಕಾರ್ಯದರ್ಶಿ (ಪಂ.ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರ ಅರೆ ಸರ್ಕಾರಿ ಪತ್ರ ಸಂಖ್ಯೆ: ಗ್ರಾಅಪ 05 ಗಣಕ ಕೋಶ 2010, ದಿನಾಂಕ: 08-10-2012.

****************

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 3 ರಲ್ಲಿ ಗ್ರಾಮ ಪಂಚಾಯಿತಿಗಳು ವಾರ್ಡ್ ಸಭೆ, ಪ್ರಕರಣ 3-ಎ ರಲ್ಲಿ ಗ್ರಾಮ ಸಭೆ, ಪ್ರಕರಣ 52 ರಲ್ಲಿ ಗ್ರಾಮ ಪಂಚಾಯಿತಿಯ ಸಭೆ ಮತ್ತು ವಿಶೇಷ ಸಭೆ, ಪ್ರಕರಣ 61 ರಲ್ಲಿ ಸ್ಥಾಯಿ ಸಮಿತಿ ಸಭೆ ಮತ್ತು ಪ್ರಕರಣ 61-ಎ ರಲ್ಲಿ ಇತರೆ ಸಮಿತಿ ಸಭೆಗಳನ್ನು ನಡೆಸಲು ಅವಕಾಶ ಕಲ್ಪಿಸಲಾಗಿದೆ. ಪ್ರಸ್ತುತ ಸದರಿ ಸಭೆಗಳಲ್ಲಿನ ನಡವಳಿಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಪ್ ಲೋಡ್ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ. ಆದುದರಿಂದ ಸದರಿ ಸಭೆಗಳ ನಡವಳಿಗಳನ್ನು ಕೂಡಲೇ ಪಂಚತಂತ್ರ ತಂತ್ರಾಂಶದಲ್ಲಿ ಕಡ್ಡಾಯವಾಗಿ ಸ್ಕ್ಯಾನ್ ಮಾಡಿ ಅಪ್ ಲೋಡ್ ಮಾಡಲು ಕ್ರಮ ವಹಿಸುವಂತೆ ಎಲ್ಲಾ ಗ್ರಾಮ ಪಂಚಾಯಿತಿಗಳ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಸೂಚಿಸಲಾಗಿದೆ.

2. ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಗ್ರಾಮ ಪಂಚಾಯತ್‌ಗಳಿಗೆ ಸಂಬಂಧಿಸಿದ ಎಲ್ಲಾ ಮಾಹಿತಿಗಳನ್ನು ಪಂಚತಂತ್ರದಲ್ಲಿ ಅಳವಡಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿದೆ ಹಾಗೂ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರತಿ ಮಾಹೆ ನಡೆಸುವ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಸಭೆಯಲ್ಲಿ ಪಂಚತಂತ್ರ ತಂತ್ರಾಂಶದ ಮಾಹಿತಿಯನ್ನಾಧರಿಸಿಯೇ ಎಲ್ಲಾ ವಿಷಯಗಳ ಬಗ್ಗೆ ಪರಿಶೀಲನೆ ನಡೆಸುವುದು. ಉದಾ: ಕರ ವಸೂಲಾತಿ ವರದಿ, ಗ್ರಾಮ ಸಭೆಗಳ ನಿರ್ಣಯಗಳು, ಗ್ರಾಮ ಪಂಚಾಯಿತಿ ಸಭೆಯ ನಿರ್ಣಯಗಳು ಇತ್ಯಾದಿ.,

3. ಎಲ್ಲಾ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರತಿ ಮಾಹೆ ಜರುಗಿಸುವ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳ ಸಭೆಯಲ್ಲಿ ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಿರುವ ಕುರಿತು ಕಡ್ಡಾಯವಾಗಿ ಪರಿಶೀಲನೆ ನಡೆಸುವಂತೆ ಸೂಚಿಸಿದೆ.

4. ಮುಂದುವರೆದು, ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 141 ರಲ್ಲಿ ತಾಲ್ಲೂಕು ಪಂಚಾಯಿತಿಯ ಸಭೆ ಮತ್ತು ವಿಶೇಷ ಸಭೆ, ಪ್ರಕರಣ 149 ರಲ್ಲಿ ಸ್ಥಾಯಿ ಸಮಿತಿ ಸಭೆ ಮತ್ತು ಪ್ರಕರಣ 149 ರಲ್ಲಿ ಸ್ಥಾಯಿ ಸಮಿತಿಗಳ ಪ್ರಕಾರ್ಯಗಳ ಬಗ್ಗೆ ತಿಳಿಸಲಾಗಿದೆ. ಸದರಿ ಸಭೆಗಳನ್ನು ತಾಲ್ಲೂಕು ಪಂಚಾಯಿತಿಗಳು ನಡೆಸಿ ಕೈಗೊಂಡ ತೀರ್ಮಾನದ ನಡವಳಿಗಳನ್ನು ಕೂಡಲೇ ಸ್ಕ್ಯಾನ್ ಮಾಡಿ ಜಿಲ್ಲಾ ಪಂಚಾಯಿತಿ ವೆಬ್ ಸೈಟ್‌ನಲ್ಲಿ ಕಡ್ಡಾಯವಾಗಿ ಅಪ್ ಲೋಡ್ ಮಾಡುವಂತೆ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಿದೆ.

5. ಹಾಗೆಯೇ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 180 ರಲ್ಲಿ ಜಿಲ್ಲಾ ಪಂಚಾಯಿತಿಯ ಸಭೆ ಮತ್ತು ವಿಶೇಷ ಸಭೆ, ಪ್ರಕರಣ 186 ರಲ್ಲಿ ಸ್ಥಾಯಿ ಸಮಿತಿ ಸಭೆ ಮತ್ತು ಪ್ರಕರಣ 187 ರಲ್ಲಿ ಸ್ಥಾಯಿ ಸಮಿತಿಗಳ ಪ್ರಕಾರ್ಯಗಳ ಬಗ್ಗೆ ತಿಳಿಸಲಾಗಿದೆ. ಸದರಿ ಸಭೆಗಳನ್ನು ನಡೆಸಿ ಕೈಗೊಂಡ ತೀರ್ಮಾನದ ನಡವಳಿಗಳನ್ನು ಕೂಡಲೇ ಜಿಲ್ಲಾ ಪಂಚಾಯಿತಿ ವೆಬ್ ಸೈಟ್‌ನಲ್ಲಿ ಸ್ಕ್ಯಾನ್ ಮಾಡಿ ಕಡ್ಡಾಯವಾಗಿ ಅಪ್ ಲೋಡ್ ಮಾಡುವಂತೆ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಿದೆ.

6. ಮೇಲ್ಕಂಡ ಎಲ್ಲಾ ಸೂಚನೆಗಳನ್ನು ಎಲ್ಲಾ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ತಪ್ಪದೆ ಪಾಲಿಸುವಂತೆ ಸೂಚಿಸಿದೆ.

(ವಿ. ರಶ್ಮಿ)
ಸರ್ಕಾರದ ಕಾರ್ಯದರ್ಶಿ (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 11 ಗ್ರಾಪಂಅ 2013

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 10–01–2013

# ಸುತ್ತೋಲೆ

ವಿಷಯ : ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ 2011 ನ್ನು ಪರಿಣಾಮಕಾರಿಯಾಗಿ ಹಾಗೂ ಕ್ರಮಬದ್ಧವಾಗಿ ಜಾರಿಗೊಳಿಸುವ ಬಗ್ಗೆ.

ಉಲ್ಲೇಖ :
1. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 39 ಜಿಪಸ 2012, ದಿನಾಂಕ:02–04–2012.
2. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 39 ಜಿಪಸ 2012 (ಭಾಗ–3) ದಿನಾಂಕ:14–03–2012.
3. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 119 ನಾಸೇಖಾ 2012 ದಿನಾಂಕ:26–10–2012.
4. ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 231 ನಾಸೇಖಾ 2012 ದಿನಾಂಕ:29–12–2012

****************

ರಾಜ್ಯದ 5627 ಗ್ರಾಮ ಪಂಚಾಯತಿಗಳಲ್ಲಿ ದಿನಾಂಕ:02–04–2012 ರಿಂದ ಸಕಾಲ ಸೇವೆಯನ್ನು ಜಾರಿಗೊಳಿಸಲಾಗಿದ್ದು, ಸದರಿ ಸೇವೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಗೆ ಸಂಬಂಧಿಸಿದಂತೆ 1) ಕರನಿರ್ಧರಣಾ ಪಟ್ಟಿಯ ಬದಲಾವಣೆ 2) ಕಟ್ಟಡ ಲೈಸೆನ್ಸ್ 3) ಸಾಮಾನ್ಯ ಲೈಸೆನ್ಸ್ (ವಾಣಿಜ್ಯ ಲೈಸೆನ್ಸ್) 4) ಕುಡಿಯುವ ನೀರಿನ ನಿರ್ವಹಣೆ 5) ಬೀದಿ ದೀಪಗಳ ನಿರ್ವಹಣೆ 6) ಗ್ರಾಮ ನೈರ್ಮಲ್ಯ ನಿರ್ವಹಣೆ 7) ಜನಗಣತಿ, ಬೆಳೆಗಣತಿ, ಜಾನುವಾರು ಗಣತಿ, ಬಡತನ ರೇಖೆಗಿಂತ ಕಡಿಮೆ ಇರುವ ವ್ಯಕ್ತಿಗಳಿಗೆ ಸಂಬಂಧಿಸಿದ ದಸ್ತಾವೇಜುಗಳು ಮತ್ತು ಗ್ರಾಮ ಪಂಚಾಯತಿಯಿಂದ ಕಡ್ಡಾಯವಾಗಿ ನಿರ್ವಹಿಸಬೇಕಾದ ಇತರ ದಸ್ತಾವೇಜುಗಳನ್ನು ನೀಡುವುದು. 8) ಅಕುಶಲ ಕಾರ್ಮಿಕರಿಗೆ ಉದ್ಯೋಗವನ್ನು ಒದಗಿಸುವುದು (ಎಂ.ಜಿ.ಎನ್.ಆರ್.ಇ.ಜಿ.ಎ.) 9) ಎಸ್ಕಾಂಗೆ ನಿರಾಕ್ಷೇಪಣಾ ಪ್ರಮಾಣ ಪತ್ರ ಮತ್ತು 10) ಅಭಿವೃದ್ಧಿ ಯೋಜನೆಗಳಡಿಯಲ್ಲಿ ಕಾರ್ಯನಿರ್ವಹಿಸಿದ್ದಕ್ಕಾಗಿ ಈ ಪಾವತಿಗಳನ್ನೊಳಗೊಂಡಂತೆ 10 ಸೇವೆಗಳನ್ನು ಒದಗಿಸುವಂತೆ ಉಲ್ಲೇಖ (1) ರ ಸುತ್ತೋಲೆಯಲ್ಲಿ ತಿಳಿಸಲಾಗಿರುತ್ತದೆ.

ಉಲ್ಲೇಖ (3) ರ ಸರ್ಕಾರದ ಅಧಿಸೂಚನೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಗೆ ಸಂಬಂಧಿಸಿದಂತೆ ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಕಾಮಗಾರಿಗಳಲ್ಲಿ ಕೆಲಸ ಮಾಡಲು ಅರ್ಜಿ ಸಲ್ಲಿಸಿದ ಅಕುಶಲ ಕಾರ್ಮಿಕರ ನೊಂದಣಿ ಮತ್ತು ಉದ್ಯೋಗ ಚೀಟಿಗಳನ್ನು ನೀಡುವ ಸೇವೆಯನ್ನು ಒದಗಿಸುವಂತೆ ತಿಳಿಸಲಾಗಿರುತ್ತದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಗೆ ಸಂಬಂಧಿಸಿದಂತೆ ಪ್ರಸ್ತುತ 11 ಸೇವೆಗಳನ್ನು ಸಕಾಲ ಸೇವೆಯಡಿ ಒದಗಿಸಲಾಗುತ್ತಿದೆ.

ಉಲ್ಲೇಖ (2) ರ ಸುತ್ತೋಲೆಯಲ್ಲಿ ಸಕಾಲದಡಿ ಸೇವೆಗಳನ್ನು ಸಾರ್ವಜನಿಕರಿಗೆ ನೀಡಲು ಗ್ರಾಮ ಪಂಚಾಯತಿ

ಅಭಿವೃದ್ಧಿ ಅಧಿಕಾರಿಯನ್ನು ಗೊತ್ತುಪಡಿಸಿದ ಅಧಿಕಾರಿಯಾಗಿ ಮತ್ತು ಸಂಬಂಧಪಟ್ಟ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಯನ್ನು ಸಕ್ಷಮ ಪ್ರಾಧಿಕಾರಿಯನ್ನಾಗಿ ಹಾಗೂ ಸಂಬಂಧಪಟ್ಟ ಜಿಲ್ಲಾ ಪಂಚಾಯತಿಯ ಉಪಕಾರ್ಯದರ್ಶಿ (ಗ್ರಾಮ ಪಂಚಾಯತಿ ಆಡಳಿತ ವಿಷಯಗಳನ್ನು ನಿರ್ವಹಿಸುವವರು) ಮೇಲ್ಮನವಿ ಪ್ರಾಧಿಕಾರವನ್ನಾಗಿ ಮಾಡಲಾಗಿದೆ.

ಸಕಾಲದಡಿ ಗ್ರಾ.ಅ.ಪಂ.ರಾಜ್ ಇಲಾಖೆಯಲ್ಲಿ ಗುರುತಿಸಿರುವ ಸೇವೆಗಳನ್ನು ಗ್ರಾಮ ಪಂಚಾಯತಿಗಳು ನಿಗದಿತ ಕಾಲಮಿತಿಯಲ್ಲಿ ಒದಗಿಸುತ್ತಿರುವ ಬಗ್ಗೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಇವರು ಉಸ್ತುವಾರಿ ನಡೆಸಲು ತಿಳಿಸಲಾಗಿದೆ. ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳುತ್ತಿರುವ ಬಗ್ಗೆ ಉಪಕಾರ್ಯದರ್ಶಿ (ಗ್ರಾಮ ಪಂಚಾಯತಿ ಆಡಳಿತ ವಿಷಯಗಳನ್ನು ನಿರ್ವಹಿಸುವವರು) ಇವರು ಉಸ್ತುವಾರಿ ನಡೆಸಲು ತಿಳಿಸಲಾಗಿದೆ.

ಗ್ರಾ.ಅ.ಪಂ.ರಾಜ್ ಇಲಾಖೆಗೆ ಸಂಬಂಧಿಸಿದಂತೆ ಸಕಾಲ ಸೇವೆ ಬಗ್ಗೆ ಸಮಗ್ರ ಮೇಲುಸ್ತುವಾರಿ ನಡೆಸುವುದು. ಮತ್ತು ಯಶಸ್ವಿ ಅನುಷ್ಠಾನಕ್ಕೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ಇವರನ್ನು ಸಂಪೂರ್ಣ ಜವಾಬ್ದಾರರನ್ನಾಗಿ ಮಾಡಲಾಗಿದೆ.

ಉಲ್ಲೇಖ (4) ರ ಸುತ್ತೋಲೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಹಾಗೂ ತಾಲ್ಲೂಕು ಮಟ್ಟದ ಕಛೇರಿಗಳಲ್ಲಿ ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ 2011 ನ್ನು ಪರಿಣಾಮಕಾರಿಯಾಗಿ ಹಾಗೂ ಕ್ರಮಬದ್ಧವಾಗಿ ಜಾರಿಗೊಳಿಸದೆ ಇರುವುದನ್ನು ಗಮನಿಸಲಾಗಿದೆ. ಸಕಾಲ ಬಗ್ಗೆ ನಾಮಫಲಕಗಳನ್ನು ಅಳವಡಿಸದೆ ಇರುವುದು, ತಾಂತ್ರಿಕ ಸಮಸ್ಯೆಗಳಿಂದ ಸೇವೆಗಳನ್ನು ನೀಡದೆ ಇರುವುದು, ಅಧಿಕಾರಿಗಳು ತಮ್ಮ ಅಧೀನ ಸಿಬ್ಬಂದಿಗಳ ಕಾರ್ಯಚಟುವಟಿಕೆಗಳ ಬಗ್ಗೆ ಸೂಕ್ತ ಮೇಲ್ವಿಚಾರಣೆ ಮಾಡದೆ ಇರುವುದು ಕಂಡು ಬಂದಿರುವುದಾಗಿ ತಿಳಿಸಲಾಗಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಗೆ ಸಂಬಂಧಿಸಿದಂತೆ ಜಿಲ್ಲಾ ಮಟ್ಟದಲ್ಲಿ ಹಾಗೂ ತಾಲ್ಲೂಕು ಮಟ್ಟದ ಕಛೇರಿಗಳಲ್ಲಿ ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ 2011 ನ್ನು ಪರಿಣಾಮಕಾರಿಯಾಗಿ ಹಾಗೂ ಕ್ರಮಬದ್ಧವಾಗಿ ಜಾರಿಗೊಳಿಸಲು ಈ ಕೆಳಕಂಡ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ, ಉಪ ಕಾರ್ಯದರ್ಶಿ (ಅಭಿವೃದ್ಧಿ) ರವರಿಗೆ, ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮತ್ತು ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಸೂಚಿಸಿದೆ.

1. ಎಲ್ಲಾ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ ಕಛೇರಿಗಳು ಸಕಾಲ ಸೇವೆಯಡಿ ಒದಗಿಸುವ ಸೇವೆಯ ವಿವರಗಳ ಸಕಾಲ ಫಲಕಗಳನ್ನು ಪ್ರದರ್ಶಿಸತಕ್ಕದ್ದು.

2. ಸಕಾಲದಡಿ ಒದಗಿಸುವ ಸೇವೆಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಗ್ರಾಮ ಪಂಚಾಯತಿಗಳು ನಡೆಸುವ ಎಲ್ಲಾ ಗ್ರಾಮ ಸಭೆಗಳಲ್ಲಿ ಸಕಾಲ ಸೇವೆಯಲ್ಲಿ ನಾಗರಿಕರಿಗೆ ನೀಡುವ ಸೌಲಭ್ಯಗಳ ಬಗ್ಗೆ ಪ್ರಚಾರ ಮಾಡುವುದು ಹಾಗೂ ಕಾಲ್ ಸೆಂಟರ್ ಸಂಖ್ಯೆಯನ್ನು (080–4455 4455) ಗ್ರಾಮ ಪಂಚಾಯತಿ ಕಛೇರಿಯಲ್ಲಿ ಪ್ರಕಟಿಸುವುದು.

3. ಹೆಸರಿಸಲಾದ ಅಧಿಕಾರಿ / ಸಕ್ಷಮ ಅಧಿಕಾರಿ / ಮೇಲ್ಮನವಿ ಪ್ರಾಧಿಕಾರ ಕಛೇರಿಗಳಲ್ಲಿ ಸಕಾಲ ಸೇವೆಗಳ ಬಗ್ಗೆ ಸೂಚನಾ ಫಲಕಗಳನ್ನು ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ 2011 ರ ಕಲಂ 3(2) ರಂತೆ ಕಡ್ಡಾಯವಾಗಿ ಅಳವಡಿಸುವುದು. ಈ ಸೂಚನೆಯನ್ನು ಅನುಷ್ಠಾನಗೊಳಿಸಲು ಅಧಿಕಾರಿ / ಸಿಬ್ಬಂದಿಗಳು ನಿರ್ಲಕ್ಷ್ಯತೆ ತೋರಿದಲ್ಲಿ ಅವರ ವಿರುದ್ಧ ಶಿಸ್ತಿನ ಕ್ರಮವನ್ನು ಜರುಗಿಸುವುದು.

4. ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ಅಧೀನ ಕಛೇರಿಗಳಿಗೆ

ಅನಿರೀಕ್ಷಿತ ಭೇಟಿ ನೀಡಿ ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮದ ನಿಯಮಗಳ ಉಲ್ಲಂಘನೆ ಆಗದಿರುವುದನ್ನು ಖಚಿತಪಡಿಸಿಕೊಳ್ಳುವುದು. ಉಲ್ಲಂಘನೆ ಮಾಡಿದ ಅಧಿಕಾರಿ / ಸಿಬ್ಬಂದಿಗಳ ವಿರುದ್ಧ ಶಿಸ್ತು ಕ್ರಮ ವಹಿಸುವುದು.

5. ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ 2011 ರ ಕಲಂ 5(1) ರಂತೆ ಸಲ್ಲಿಕೆಯಾಗುವ ಪ್ರತಿಯೊಂದು ಅರ್ಜಿಗೂ 15 ಅಂಕಿಗಳ ಸ್ವೀಕೃತಿ ಪತ್ರವನ್ನು ಕಡ್ಡಾಯವಾಗಿ ಅರ್ಜಿದಾರರಿಗೆ ನೀಡುವುದು.

6. ನಿಗದಿಪಡಿಸಿರುವ ಅವಧಿಯೊಳಗೆ ಗ್ರಾಮ ಪಂಚಾಯತಿಯು ಸಕಾಲ ಅಧಿನಿಯಮದಡಿ ಸೇವೆಗಳನ್ನು ಒದಗಿಸುವುದು.

7. ಸಕಾಲ ಸೇವೆಯಡಿ ಅರ್ಜಿಯನ್ನು ತಿರಸ್ಕರಿಸಿದರೆ, ಯಾವ ಕಾರಣಕ್ಕಾಗಿ ಅರ್ಜಿಯನ್ನು ತಿರಸ್ಕರಿಸಲಾಗಿದೆ ಎಂಬುದರ ಬಗ್ಗೆ ವಿಳಂಬ ಮಾಡದೆ ಅರ್ಜಿದಾರರಿಗೆ ಹಿಂಬರಹ ನೀಡುವುದು.

8. ಸರ್ವರ್ ನಿಷ್ಕ್ರಿಯಗೊಂಡಲ್ಲಿ ಹಾಗೂ ಇತರೆ ತಾಂತ್ರಿಕ ಸಮಸ್ಯೆಗಳಿದ್ದಲ್ಲಿ ಇ-ಮೇಲ್ / ದೂರವಾಣಿ / ಎಸ್.ಎಂ.ಎಸ್. ಮೂಲಕ ಸಕಾಲ ಮಂಡಳಿಯ ಹಾಗೂ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರ ಗಮನಕ್ಕೆ ತರುವುದು. ಯಾವುದೇ ಕಾರಣಕ್ಕೂ ತಾಂತ್ರಿಕ ಸಮಸ್ಯೆಗಳಿಂದ ನಾಗರೀಕರಿಗೆ ಸಕಾಲ ಸೇವೆಗಳನ್ನು ನೀಡುವಲ್ಲಿ ಒಂದು ದಿನಕ್ಕಿಂತ ಹೆಚ್ಚಾಗಿ ವಿಳಂಬವಾಗಬಾರದು.

9. ಸಕಾಲ ಸೇವೆಯಡಿ ಗ್ರಾಮ ಪಂಚಾಯತಿಯು ಅರ್ಜಿದಾರರಿಂದ ಅರ್ಜಿಯನ್ನು ಸ್ವೀಕರಿಸುವುದು. ಯಾವುದೇ ಕಾರಣಕ್ಕೂ ದಲ್ಲಾಳಿಗಳಿಂದ ಹತ್ತಾರು ಅರ್ಜಿಗಳನ್ನು ಒಟ್ಟಾಗಿ ಪಡೆಯತಕ್ಕದ್ದಲ್ಲ.

10. ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕಡ್ಡಾಯವಾಗಿ ಸಕಾಲ ಯಶಸ್ವಿ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಪ್ರತಿ ತಿಂಗಳು ಜಿಲ್ಲಾ ಪಂಚಾಯತಿಯ ಉಪ ಕಾರ್ಯದರ್ಶಿ (ಅಭಿವೃದ್ಧಿ), ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಸಭೆ ನಡೆಸಿ ಪ್ರಗತಿ ಪರಿಶೀಲನೆ ನಡೆಸಿ ಸಭೆಯ ನಡವಳಿಯನ್ನು ಸಕಾಲ ಮಂಡಳಿಗೆ ಕಳುಹಿಸುವುದು.

11. ಕರ್ನಾಟಕ ಪಂ.ರಾಜ್ ಅಧಿನಿಯಮ 1993 ರ ಪ್ರಕರಣ 232 ರಂತೆ ತಾಲ್ಲೂಕು ಪಂಚಾಯತಿಯ ಸಂಬಂಧದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಮತ್ತು ಗ್ರಾಮ ಪಂಚಾಯತಿ ಸಂಬಂಧದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಯು ಪರಿವೀಕ್ಷಣೆ ಮತ್ತು ಮೇಲ್ವಿಚಾರಣೆ ಮಾಡುವುದು.

Rashmi V.

(ವಿ.ರಶ್ಮಿ)

ಸರ್ಕಾರದ ಕಾರ್ಯದರ್ಶಿ (ಪಂ.ರಾಜ್)

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಸುತ್ತೋಲೆ

## ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 553 ಗ್ರಾಪಂಅ 2012

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 10-01-2013

## ಸುತ್ತೋಲೆ

ವಿಷಯ : ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಅನಧಿಕೃತ ಆಸ್ತಿಗಳ ನೋಂದಣಿ ನಿಯಂತ್ರಿಸುವ ಬಗ್ಗೆ.

ಉಲ್ಲೇಖ :

1. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 12278/2007 ರಲ್ಲಿ ನೀಡಿರುವ ಆದೇಶ ದಿನಾಂಕ: 07-07-2012.
2. ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್‌ಡಿಪಿ 15 ಬಿಎಸಿ 92, ದಿನಾಂಕ: 16-11- 1992.
3. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 380 ಗ್ರಾಪಂಅ 2002, ದಿನಾಂಕ: 24-05-2003.
4. ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್‌ಡಿ 174 ಮುನೋಮು 2005, ದಿನಾಂಕ: 23-08-2005.
5. ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್‌ಡಿ 344 ಮುನೋಮು 2008, ದಿನಾಂಕ: 06-04-2009.
6. ಸರ್ಕಾರದ ಆದೇಶ ಸಂಖ್ಯೆ: ವಇ 55 ಹೆಚ್‌ಎಎಸ್ 2011, ದಿನಾಂಕ: 30-01-2012.
7. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 553 ಗ್ರಾಪಂಅ 2012, ದಿನಾಂಕ: 28-12-2012.
8. ದಿನಾಂಕ: 04-12-2012 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿ.
9. ದಿನಾಂಕ: 19-12-2012 ರಂದು ತಾಂತ್ರಿಕ ಸಮಿತಿಯ ಅಧ್ಯ ಕ್ಷರ ಅಧ್ಯ ಕ್ಷತೆಯಲ್ಲಿ ನಡೆದ ಕಾರ್ಯಾಗಾರದ ನಡವಳಿ.
10. ಅಧ್ಯಕ್ಷರು, ತಾಂತ್ರಿಕ ಸಮಿತಿ ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಾರ್ವಜನಿಕ ಉದ್ದಿಮೆಗಳ ಇಲಾಖೆ, ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ: ಡಿಪಿಇ 523 ಪಿಆರ್‌ಎಸ್ 2012, ದಿನಾಂಕ: 20-12-2012 ಮತ್ತು ಅ.ಸ.ಪ. ಸಂಖ್ಯೆ: ಡಿಪಿಇ 419 ಪಿಆರ್‌ಎಸ್ 2012, ದಿನಾಂಕ: 29-12-2012.

***************

ಉಲ್ಲೇಖ (1) ರಲ್ಲಿನ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಲ್ಲಿ ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಭೂ ಪರಿವರ್ತನೆ ಆದೇಶ ಇಲ್ಲದ ಮತ್ತು ಬಡಾವಣೆ ನಕ್ಷೆ ಅನುಮೋದನೆ ಇಲ್ಲದ ಆಸ್ತಿಗಳ ಕಾನೂನುಬಾಹಿರ ನೋಂದಣಿಯನ್ನು ತಡೆಹಿಡಿಯುವ ಸಲುವಾಗಿ ಒಂದು ವ್ಯವಸ್ಥೆಯನ್ನು ರೂಪಿಸುವಂತೆ ಹಾಗೂ ಅನಧಿಕೃತ ಆಸ್ತಿಗಳ ನೋಂದಣಿಯನ್ನು ಕೂಡಲೇ ನಿಲ್ಲಿಸುವಂತೆ ಆದೇಶಿಸಿರುತ್ತದೆ.

2. ಈ ಆದೇಶದ ಪಾಲನೆಯನ್ನು ಮಾಸಿಕ ವಿಚಾರಣೆಗಳ ಮುಖಾಂತರ ಮಾನ್ಯ ಉಚ್ಚನ್ಯಾಯಾಲಯವು ಮೇಲುಸ್ತುವಾರಿ (Monitor) ಮಾಡುತ್ತಿದೆ. ಇದಲ್ಲದೆ ಅನಧಿಕೃತ ಆಸ್ತಿ ನೋಂದಣಿ ಆಗದಿರುವಂತೆ ಖಾತ್ರಿಪಡಿಸಿಕೊಳ್ಳುವ ಸಲುವಾಗಿ ಮಾಹಿತಿ ತಂತ್ರಜ್ಞಾನದ ಮುಖಾಂತರ ತಂತ್ರಾಂಶ ಅಭಿವೃದ್ಧಿ ಪಡಿಸುವಂತೆ ಸಹ ಮಾನ್ಯ ನ್ಯಾಯಾಲಯವು ಆದೇಶಿಸಿದೆ. ಅದರಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ರವರ ಅಧ್ಯಕ್ಷತೆಯಲ್ಲಿ ಉಲ್ಲೇಖ (8) ರಂತೆ ದಿನಾಂಕ: 04–12–2012 ರಂದು ನಡೆದ ಸಭೆಯ ನಡವಳಿಯಂತೆ ಮಾಹಿತಿ ತಂತ್ರಜ್ಞಾನ ವ್ಯವಸ್ಥೆ ಮತ್ತು ನೀತಿ ರೂಪಿಸಲು ಶ್ರೀ ರಾಜೀವ್ ಚಾವ್ಲಾ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಾರ್ವಜನಿಕ ಉದ್ದಿಮೆಗಳ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ಒಂದು ತಾಂತ್ರಿಕ ಸಮಿತಿಯನ್ನು ರಚಿಸಲು ನಿರ್ಣಯಿಸಲಾಗಿತ್ತು. ಅದರಂತೆ ದಿನಾಂಕ: 10–12–2012 ರ ನಗರಾಭಿವೃದ್ಧಿ ಇಲಾಖೆಯ ಆದೇಶದಲ್ಲಿ ತಾಂತ್ರಿಕ ಸಮಿತಿಯನ್ನು ರಚಿಸಲಾಗಿರುತ್ತದೆ.

3. ಈ ಹಿನ್ನೆಲೆಯಲ್ಲಿ, ಪೈಲಟ್ ಪ್ರಾಜೆಕ್ಟ್‌ಗಾಗಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಬರುವ ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸಂಬಂಧಿಸಿದ ಆಯ್ದ 20 ಗ್ರಾಮ ಪಂಚಾಯಿತಿಗಳಲ್ಲಿ ಆನ್–ಲೈನ್ ವ್ಯವಸ್ಥೆ ಮೂಲಕ ನಮೂನೆ–9 ಮತ್ತು 11 ನ್ನು ನೀಡಲು ತಂತ್ರಾಂಶ ಅಭಿವೃದ್ಧಿಪಡಿಸಲು ಉದ್ದೇಶಿಸಿ ತಾಂತ್ರಿಕ ಸಮಿತಿಯ ಅಧ್ಯಕ್ಷರು ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆಯ ಅಧಿಕಾರಿಗಳ ಸಮ್ಮುಖದಲ್ಲಿ ದಿನಾಂಕ: 19–12–2012 ರಂದು ಸಂಬಂಧಪಟ್ಟ ಗ್ರಾಮ ಪಂಚಾಯಿತಿಗಳ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಉಪ ಕಾರ್ಯದರ್ಶಿಗಳಿಗೆ ಒಂದು ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು. ತದನಂತರ ತಾಂತ್ರಿಕ ಸಮಿತಿಯ ಅಧ್ಯಕ್ಷರು ದಿನಾಂಕ: 31–12–2012 ಮತ್ತು 01–01–2013 ರಂದು ಮೇಲ್ಕಂಡ ಗ್ರಾಮ ಪಂಚಾಯಿತಿಗಳ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಉಪ ಕಾರ್ಯದರ್ಶಿಗಳ ಸಮ್ಮುಖದಲ್ಲಿ ಸದರಿ ಗ್ರಾಮ ಪಂಚಾಯಿತಿಗಳಲ್ಲಿ ದಾಖಲಾಗಿರುವ ಅನಧಿಕೃತ ಆಸ್ತಿಗಳ ವಿವರಗಳನ್ನು ಪರಿಶೀಲಿಸಿರುತ್ತಾರೆ. ಆ ಸಂದರ್ಭದಲ್ಲಿ ಹಲವಾರು ಪ್ರಕರಣಗಳಲ್ಲಿ ಗ್ರಾಮ ಪಂಚಾಯಿತಿಯಿಂದ ನಮೂನೆ–9 ಮತ್ತು 11 ನ್ನು ಪಡೆಯದೆ ನಕಲಿ ನಮೂನೆ–9 ಮತ್ತು 11 ನ್ನು ಉಪನೋಂದಾಣಾಧಿಕಾರಿಯವರಿಗೆ ಸಲ್ಲಿಸಿ ಆಸ್ತಿ ನೋಂದಣಿ ಮಾಡಿರುವುದು ಕಂಡು ಬಂದಿರುತ್ತದೆ. ಇದಲ್ಲದೆ ವಿವಿಧ ಪ್ರಕರಣಗಳಲ್ಲಿ ಸ್ಪಷ್ಟ ಸೂಚನೆಗಳು ಇದ್ದರೂ ಸಹ ಬಡಾವಣೆ ನಕ್ಷೆ ಅನುಮೋದನೆ ಗ್ರಾಮ ಪಂಚಾಯಿತಿ ಹಂತದಲ್ಲಿ ನಡೆಯುತ್ತಿರುವುದು ಕಂಡು ಬಂದಿದ್ದು, ಈ ಸಂಬಂಧ ಉಲ್ಲೇಖ (7) ರ ಸುತ್ತೋಲೆಯನ್ನು ಮತ್ತೊಮ್ಮೆ ಪುನರುಚ್ಚರಿಸುತ್ತಾ ಎಲ್ಲಾ ಪ್ರಕರಣಗಳಲ್ಲಿಯೂ ಸದರಿ ಸುತ್ತೋಲೆಯಲ್ಲಿನ ಮಾರ್ಗಸೂಚಿಯಂತೆ ಕ್ರಮ ವಹಿಸುವಂತೆ ಸೂಚಿಸಿದೆ.

4. ಆನ್–ಲೈನ್ ತಂತ್ರಾಂಶ ಅಭಿವೃದ್ಧಿ ಕಾರ್ಯವು ಸುಮಾರು 2 ತಿಂಗಳ ಅವಧಿಯಲ್ಲಿ ಪೂರ್ಣಗೊಳ್ಳಬಹುದಾಗಿದ್ದು, ಈ ಮಧ್ಯೆ ಈ ಎರಡು ತಿಂಗಳ ಸಮಯದಲ್ಲಿಯೂ ಸಹ ಅನಧಿಕೃತ ಆಸ್ತಿಗಳ ನೋಂದಣಿ ಆಗದಿರುವಂತೆ ನೋಡಿಕೊಳ್ಳುವ ಜವಾಬ್ದಾರಿ ಸರ್ಕಾರದ ಮೇಲಿರುತ್ತದೆ.

5. ಈ ಸಂಬಂಧ ಉಲ್ಲೇಖಿತ ಸರ್ಕಾರದ ಸುತ್ತೋಲೆಗಳಲ್ಲಿ ಸ್ಪಷ್ಟ ನಿರ್ದೇಶನಗಳನ್ನು ನೀಡಿದ್ದರೂ ಸಹ, ಗ್ರಾಮ ಪಂಚಾಯಿತಿಗಳು ಸದರಿ ನಿರ್ದೇಶನಗಳನ್ನು ಪಾಲಿಸದಿರುವುದು ಕಂಡು ಬಂದಿರುತ್ತದೆ.

6. ಉಲ್ಲೇಖ (5) ರ ಕಂದಾಯ ಇಲಾಖೆಯ ಸುತ್ತೋಲೆಯಂತೆ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿನ ಆಸ್ತಿಗಳನ್ನು ಗ್ರಾಮ ಪಂಚಾಯತಿಯು ನೀಡುವ ನಮೂನೆ 9 ಮತ್ತು ನಮೂನೆ 11ನ್ನು ಆಧರಿಸಿ ಉಪನೋಂದಣಾಧಿಕಾರಿಯವರು ನೋಂದಣಿ ಮಾಡುತ್ತಿರುವುದು ಕಂಡು ಬರುತ್ತದೆ. ಆದುದರಿಂದ ರಾಜ್ಯದಲ್ಲಿನ ಎಲ್ಲಾ ಗ್ರಾಮ ಪಂಚಾಯತಿಗಳು ನಮೂನೆ 9 ಮತ್ತು ನಮೂನೆ 11 ನ್ನು ನೀಡುವ ಸಂಬಂಧ ತಕ್ಷಣದಿಂದ ಜಾರಿಗೆ ಬರುವಂತೆ ಈ ಕೆಳಕಂಡ ವಿಧಾನವನ್ನು ಅನುಸರಿಸತಕ್ಕದ್ದೆಂದು ಈ ಮೂಲಕ ಸೂಚಿಸಿದೆ.

(ಅ) ಯಾವುದೇ ನಾಗರೀಕನು ತನ್ನ ಆಸ್ತಿಗಾಗಿ ನಮೂನೆ 9 ಅಥವಾ ನಮೂನೆ 11 ನ್ನು ಕೇಳಿದಾಗ ಸದರಿ ಆಸ್ತಿಯು ಅಧಿಕೃತವಾದದ್ದೇ ಅಥವಾ ಅಲ್ಲವೇ ಎಂಬುದನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ಪರಿಶೀಲಿಸುವುದು. ಈ ಸಂಬಂಧ ಈಗಾಗಲೇ ಉಲ್ಲೇಖ (2) (3) (6) ಮತ್ತು (7) ರ ಸುತ್ತೋಲೆ/ಆದೇಶಗಳಲ್ಲಿ ತಿಳಿಸಿರುವಂತೆ ಈ ಕೆಳಗೆ ನಮೂದಿಸಿರುವ ಆಸ್ತಿಗಳು ಅಧಿಕೃತ ಆಸ್ತಿಗಳಾಗಿರುತ್ತವೆ.

(ಆ) ಮೂಲ/ಹಳೆಯ ಗ್ರಾಮ ಠಾಣಾ ವ್ಯಾಪ್ತಿಯ ಒಳಗಿರುವ ಆಸ್ತಿ/ನಿವೇಶನ. (ತಹಶೀಲ್ದಾರ್ ರವರು ನೀಡುವ Rough Sketch ನಂತೆ– ಉಲ್ಲೇಖ (4) ರ ಸುತ್ತೋಲೆಯಂತೆ)

(ಇ) ಬಸವ ವಸತಿ ಯೋಜನೆ, ಗ್ರಾಮೀಣ ಅಂಬೇಡ್ಕರ್ ಯೋಜನೆ ಮತ್ತು ಇಂದಿರಾ ಆವಾಸ್ ಯೋಜನೆ ಮನೆಗಳ ನಿರ್ಮಾಣಕ್ಕಾಗಿ ವಸತಿ ಇಲಾಖೆಯು ಹೊರಡಿಸಿರುವ ಸರ್ಕಾರದ ಆದೇಶ ಸಂಖ್ಯೆ: ಎಚ್‌ಡಿ 55 ಹೆಚ್‌ಎಎಸ್ 2011 ದಿನಾಂಕ: 30–01–2012 ರಂತೆ ಸೃಜಿಸುವ ಆಸ್ತಿ.

(ಈ) ಭೂ ಪರಿವರ್ತನೆಯಾದ ವ್ಯವಸಾಯದ ಜಮೀನಿನಲ್ಲಿ ನಗಾರಾಭಿವೃದ್ಧಿ ಇಲಾಖೆಯ ಸಕ್ಷಮ ಯೋಜನಾ ಪ್ರಾಧಿಕಾರದಿಂದ ಬಡಾವಣೆ ನಕ್ಷೆ ಅನುಮೋದನೆಯೊಂದಿಗೆ ಸೃಜಿಸಲಾದ ಆಸ್ತಿ.

7. ಒಂದು ಆಸ್ತಿಯು ಗ್ರಾಮ ಠಾಣಾ ವ್ಯಾಪ್ತಿಯೊಳಗೆ ಇದ್ದಲ್ಲಿ ಅಂತಹ ಆಸ್ತಿಗೆ ನೀಡುವ ಪ್ರಮಾಣ ಪತ್ರದಲ್ಲಿ ಸದರಿ ಆಸ್ತಿಯು ಗ್ರಾಮಠಾಣಾ ವ್ಯಾಪ್ತಿಯಲ್ಲಿ ಹಾಲಿ ಇರುವ ಆಸ್ತಿಯೆಂದು ಸ್ಪಷ್ಟವಾಗಿ ನಮೂದಿಸಿರಬೇಕು. ಹಲವಾರು ಗ್ರಾಮ ಪಂಚಾಯತಿಗಳು ಗ್ರಾಮಗಳ ಗ್ರಾಮಠಾಣಾ ನಕಾಶೆ (Spatial-map) ಹೊಂದಿಲ್ಲದಿರುವುದರಿಂದ ಒಂದು ಆಸ್ತಿಯು ಗ್ರಾಮ ಠಾಣಾ ವ್ಯಾಪ್ತಿಯೊಳಗೆ ಇದೆಯೇ ಅಥವಾ ಇಲ್ಲವೇ ಎಂಬುದನ್ನು ಕಂಡು ಹಿಡಿಯಲು ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಕಷ್ಟಸಾಧ್ಯವಾಗುತ್ತದೆ. ಕರ್ನಾಟಕ ಭೂ ಕಂದಾಯ ಕಾಯ್ದೆ ಅಡಿಯಲ್ಲಿ ಗ್ರಾಮ ಠಾಣಾ ಪ್ರದೇಶದ ಸರ್ವೆ ದಾಖಲೆಗಳನ್ನು ನಿರ್ವಹಿಸುವ ಜವಾಬ್ದಾರಿ ಕಂದಾಯ ಇಲಾಖೆಗೆ ಸಂಬಂಧಿಸಿರುತ್ತದೆ. ಅದರಂತೆ ಒಂದು ಆಸ್ತಿಯು ಗ್ರಾಮ ಠಾಣಾ ವ್ಯಾಪ್ತಿಯೊಳಗೆ ಇದೆಯೇ ಎಂದು ಸ್ಥಳ ತನಿಖೆ ಮಾಡಿಸಿ ವರದಿ ನೀಡುವಂತೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ತಹಶೀಲ್ದಾರರನ್ನು ಕೋರಬೇಕಾಗುತ್ತದೆ. ತಹಶೀಲ್ದಾರರು ಗ್ರಾಮ ಠಾಣಾದೊಳಗೆ ಸದರಿ ಆಸ್ತಿಯ ಸ್ಥಳವನ್ನು ಗುರುತಿಸುವ Rough Sketch ತಯಾರಿಸಿ ಆಸ್ತಿಯ ಸರಹದ್ದುಗಳ ವಿವರಗಳನ್ನು ಸಹ ನೀಡಬೇಕಾಗುತ್ತದೆ. ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ಇಂತಹ ಸರ್ವೆ ಮಾಡಿಕೊಡಲು ಕೋರಿದಾಗ ಅವರ ಕೋರಿಕೆಯಂತೆ ಕ್ರಮ ವಹಿಸುವಂತೆ ತಹಶೀಲ್ದಾರರಿಗೆ ಸೂಚನೆ ನೀಡುವಂತೆ ಕಂದಾಯ ಇಲಾಖೆಯನ್ನು ಕೋರುವಂತೆ ಅನಧಿಕೃತ ಆಸ್ತಿಗಳ ನಿಯಂತ್ರಣ ಕಾರ್ಯಕ್ಕಾಗಿ ನೋಡಲ್ ಇಲಾಖೆಯಾಗಿರುವ ನಗರಾಭಿವೃದ್ಧಿ ಇಲಾಖೆಯನ್ನು ಪ್ರತ್ಯೇಕವಾಗಿ ಕೋರಲಾಗುತ್ತಿದೆ. ಈ ಸಂಬಂಧ ಉಲ್ಲೇಖ (4) ರಲ್ಲಿನ ಸುತ್ತೋಲೆಯಲ್ಲಿನ ಸೂಚನೆಗಳನ್ನು ಸಹ ಪಾಲಿಸುವುದು.

8. ಉಲ್ಲೇಖ (6) ರ ಸರ್ಕಾರದ ಆದೇಶದಂತೆ, ಬಸವ ವಸತಿ ಯೋಜನೆ, ಗ್ರಾಮೀಣ ಅಂಬೇಡ್ಕರ್ ಯೋಜನೆ ಮತ್ತು ಇಂದಿರಾ ಆವಾಸ್ ಯೋಜನೆ ಅಡಿಯಲ್ಲಿ ಆಸ್ತಿ ಸೃಜನೆಯಾಗಿದ್ದಲ್ಲಿ ನಮೂನೆ 9 ನ್ನು ನೀಡುವಾಗ ಜೊತೆಯಲ್ಲಿ ಆದೇಶದ ವಿವರ, ಆದೇಶ ಹೊರಡಿಸಿದ ಪ್ರಾಧಿಕಾರದ ಹೆಸರು, ಆದೇಶದ ಸಂಖ್ಯೆ ಮತ್ತು ದಿನಾಂಕ ನಮೂದಿಸಿ ಹೆಚ್ಚುವರಿ ಪ್ರಮಾಣ ಪತ್ರ ನೀಡುವುದು.

9. ಕೃಷಿ ಭೂಮಿ, ಕೃಷಿಯೇತರ ಭೂಮಿಯಾಗಿ ಪರಿವರ್ತನೆಯಾದ ನಂತರ, ನಗರಾಭಿವೃದ್ಧಿ ಇಲಾಖೆಯ ಸಕ್ಷಮ ಪ್ರಾಧಿಕಾರದಿಂದ ಬಡಾವಣೆ ನಕ್ಷೆ ಅನುಮೋದನೆಯಾಗಿ ನಿವೇಶನಗಳನ್ನು ಸಕ್ಷಮ ಪ್ರಾಧಿಕಾರದಿಂದ ಬಿಡುಗಡೆಗೊಳಿಸಿದ ನಂತರ ಸದರಿ ದಸ್ತಾವೇಜುಗಳ ಮೂಲ ಪ್ರತಿ ಹಾಜರುಪಡಿಸಿದ ನಂತರ ಗ್ರಾಮ ಪಂಚಾಯಿತಿಯು ಮೂಲ ದಾಖಲಾತಿಗಳನ್ನು ಅಂದರೆ ಭೂ ಪರಿವರ್ತನೆ ಆದೇಶ ಮತ್ತು ಬಡಾವಣೆ ನಕ್ಷೆ/ವಿನ್ಯಾಸಗಳಿಗೆ ತಾಳೆ ನೋಡಿ, ಸರಿಯಿದ್ದಲ್ಲಿ ಅಂತಹ ನಿವೇಶನಗಳಿಗೆ ಸಂಬಂಧಿಸಿದಂತೆ ಮಾತ್ರ ನಮೂನೆ–9 ಮತ್ತು ನಮೂನೆ–11 ನ್ನು ನೀಡತಕ್ಕದ್ದು.

10. ಆಸ್ತಿಯು, ಉಲ್ಲೇಖಿತ ಸುತ್ತೋಲೆಗಳಲ್ಲಿ ತಿಳಿಸಿರುವಂತೆ ಮತ್ತು ಮೇಲೆ ವಿವರಿಸಿದಂತೆ ಅಧಿಕೃತವಾದದ್ದೆಂದು ಕಂಡು ಬಂದಲ್ಲಿ ಮಾತ್ರ ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ನಮೂನೆ–9 ನ್ನು ನೀಡುವುದು ಮತ್ತು ಜೊತೆಗೆ ಭೂಪರಿವರ್ತನೆ ಆದೇಶದ ವಿವರ, ಆದೇಶ ನೀಡಿದ ಪ್ರಾಧಿಕಾರದ ಹೆಸರು, ಆದೇಶದ ಸಂಖ್ಯೆ, ದಿನಾಂಕದ ವಿವರ ಮತ್ತು ಬಡಾವಣೆ ನಕ್ಷೆ ಅನುಮೋದನೆ ವಿವರ ಹಾಗೂ ಸ್ಥಳೀಯ ಯೋಜನಾ ಪ್ರಾಧಿಕಾರದ ಹೆಸರು, ಆದೇಶದ ಸಂಖ್ಯೆ ಮತ್ತು ದಿನಾಂಕ ಇತ್ಯಾದಿಗಳೊಂದಿಗೆ ನಮೂದಿಸಿ ಪ್ರಮಾಣ ಪತ್ರವನ್ನು ಸಹ ನೀಡುವುದು. ಈ ಪ್ರಮಾಣ ಪತ್ರದಲ್ಲಿ ನಮೂನೆ–9ರ ಸಂಘಡ ನೀಡಬೇಕಾದ ಪ್ರಮಾಣ ಪತ್ರದ ನಮೂನೆಯನ್ನು ಈ

ಸುತ್ತೋಲೆಯ ಅನುಬಂಧ–1ರಲ್ಲಿ ಲಗತ್ತಿಸಿದೆ. ನಮೂನೆ–9 ರಲ್ಲಿ ನೀಡಬೇಕಾದ ಪ್ರಮಾಣ ಪತ್ರದ ನಮೂನೆಯನ್ನು ಅರ್ಜಿದಾರನಿಗೆ, ಸಂಬಂಧಿಸಿದ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಸಂಬಂಧಿಸಿದ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಸಂಬಂಧಿಸಿದ ಉಪ ನೋಂದಣಾಧಿಕಾರಿಗೆ ಕಳುಹಿಸತಕ್ಕದ್ದು ಮತ್ತು ಗ್ರಾಮ ಪಂಚಾಯಿತಿಯ ರವಾನೆ ಪುಸ್ತಕದಲ್ಲಿ ಕಡ್ಡಾಯವಾಗಿ ನಮೂದಿಸತಕ್ಕದ್ದು.

11. ಆಸ್ತಿಯು ಅನಧಿಕೃತವೆಂದು ಕಂಡು ಬಂದಲ್ಲಿ (ಅಂದರೆ ಮೇಲೆ ನಮೂದಿಸಿದ ಮೂರು ವಿಧದ ಆಸ್ತಿಗಳ ಪೈಕಿ ಯಾವೊಂದು ವಿಧಕ್ಕೂ ಸೇರಿಲ್ಲದಿದ್ದಲ್ಲಿ) ನಮೂನೆ 9 ನ್ನು ನೀಡತಕ್ಕದ್ದಲ್ಲ ಮತ್ತು ಇಂತಹ ಜಮೀನಿನಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ಗ್ರಾಮ ಪಂಚಾಯಿತಿಯಿಂದ ನಾಗರೀಕ ಸೌಲಭ್ಯ ನೀಡುತ್ತಿದ್ದಲ್ಲಿ ಮಾತ್ರ ಕೇವಲ ನಮೂನೆ 11ನ್ನು ಮಾತ್ರ ನೀಡತಕ್ಕದ್ದು. " ಈ ನಮೂನೆಯ ಮೇಲೆ "ಈ ಕಂದಾಯ ಸ್ವೀಕೃತಿಯು ಈ ಆಸ್ತಿಯ ಮೇಲೆ ತೆರಿಗೆ ಪಾವತಿದಾರರಿಗೆ ಯಾವುದೇ ರೀತಿಯ ಮಾಲೀಕತ್ವದ ಹಕ್ಕನ್ನು ದೃಢೀಕರಿಸುವುದಿಲ್ಲ." ಎಂಬ ಮೊಹರನ್ನು ಹಾಕತಕ್ಕದ್ದು.  ಈ ಸಂಬಂಧ ಉಲ್ಲೇಖ (3) ರ ಸರ್ಕಾರದ ಸುತ್ತೋಲೆಯಲ್ಲಿನ ಸೂಚನೆಗಳನ್ನೂ ಸಹ ಪಾಲಿಸುವುದು.

12. ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006 ರ ನಿಯಮ 28 ರಲ್ಲಿ ಪ್ರತಿಯೊಂದು ಗ್ರಾಮ ಪಂಚಾಯಿತಿಯು ಅಧಿನಿಯಮದ ಪ್ರಕರಣ 199ಕ್ಕನುಗುಣವಾಗಿ ಭೂಮಿ ಮತ್ತು ಕಟ್ಟಡಗಳಿಗೆ ತೆರಿಗೆ ಬೇಡಿಕೆಯನ್ನು ನಿರ್ಧರಿಸುವ ಉದ್ದೇಶದಿಂದಾಗಿ ನಮೂನೆ 9 ರಲ್ಲಿ ತೆರಿಗೆ ನಿರ್ಧರಣೆ ಪಟ್ಟಿಯನ್ನು ಸಿದ್ಧಗೊಳಿಸಿ ಗ್ರಾಮ ಪಂಚಾಯಿತಿ ಕಛೇರಿಯಲ್ಲಿ ಇಟ್ಟಿರತಕ್ಕದ್ದೆಂದೂ ಮತ್ತು ನಿಯಮ 30 ರಲ್ಲಿ ಭೂಮಿ ಮತ್ತು ಕಟ್ಟಡದ ತೆರಿಗೆಗಳ ಬೇಡಿಕೆ ಮತ್ತು ವಸೂಲಿ ರಿಜಿಸ್ಟರ್‌ನ್ನು ತೆರಿಗೆ ನಿರ್ಧರಣೆ ಪಟ್ಟಿ ಆಧಾರದ ಮೇಲೆ ಸಿದ್ಧಗೊಳಿಸಬೇಕು ಎಂದು ತಿಳಿಸಿದ್ದರೂ, ಸಹ ಹಲವಾರು ಗ್ರಾಮ ಪಂಚಾಯಿತಿಗಳು ತೆರಿಗೆ ನಿರ್ಧರಣೆ ಪಟ್ಟಿ ರಿಜಿಸ್ಟರ್ (ನಮೂನೆ–9) ಮತ್ತು ಭೂಮಿ ಮತ್ತು ಕಟ್ಟಡದ ತೆರಿಗೆಗಳ ಬೇಡಿಕೆ ಮತ್ತು ವಸೂಲಿ ರಿಜಿಸ್ಟರ್ (ನಮೂನೆ–11) ನಿರ್ವಹಿಸದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.  ಆದುದರಿಂದ ಎಲ್ಲಾ ಗ್ರಾಮ ಪಂಚಾಯಿತಿಗಳು ತಪ್ಪದೆ ತೆರಿಗೆ ನಿರ್ಧರಣೆ ಪಟ್ಟಿ ರಿಜಿಸ್ಟರ್ (ನಮೂನೆ–9) ಮತ್ತು ಭೂಮಿ ಮತ್ತು ಕಟ್ಟಡದ ತೆರಿಗೆಗಳ ಬೇಡಿಕೆ ಮತ್ತು ವಸೂಲಿ ರಿಜಿಸ್ಟರ್ (ನಮೂನೆ–11) ಗಳನ್ನು ಕಡ್ಡಾಯವಾಗಿ ನಿರ್ವಹಿಸುವಂತೆ ಸೂಚಿಸಿದೆ.

13. ನೋಂದಣಿಯಾದ ಆಸ್ತಿಗಳಿಗೆ ಸಂಬಂಧಿಸಿದಂತೆ ಉಪನೋಂದಾಣಾಧಿಕಾರಿಯವರು ಗ್ರಾಮ ಪಂಚಾಯಿತಿಗೆ ನೀಡುವ ಎ–ಖಟುಠಿ ಅನ್ನು ಪರಿಶೀಲಿಸಿ ಸದರಿ ಆಸ್ತಿಯನ್ನು ಅಧಿಕೃತವಾಗಿ ಗ್ರಾಮ ಪಂಚಾಯಿತಿಯಿಂದ ನೀಡಿರುವ ನಮೂನೆ–9 ಮತ್ತು 11 ನ್ನು ಆಧರಿಸಿ ನೋಂದಣಿ ಮಾಡಲಾಗಿದೆಯೇ ಎಂಬುದನ್ನು ದೃಢೀಕರಿಸಿಕೊಳ್ಳುವುದು. ಒಂದು ವೇಳೆ ಸದರಿ ಆಸ್ತಿಯನ್ನು ನಕಲಿ ನಮೂನೆ 9 ಮತ್ತು 11 ನ್ನು ಬಳಸಿ ನೋಂದಣಿ ಮಾಡಿದ್ದಲ್ಲಿ ಅದನ್ನು ಕೂಡಲೇ ಸಂಬಂಧಪಟ್ಟ ಉಪನೋಂದಾಣಾಧಿಕಾರಿಯವರ ಗಮನಕ್ಕೆ ತರುವುದು.  ಇಂತಹ ಪ್ರಕರಣಗಳಲ್ಲಿ ಯಾವ ರೀತಿಯ ಕ್ರಮ ವಹಿಸಬೇಕು ಎಂಬ ಬಗ್ಗೆ ಉಪನೋಂದಣಾಧಿಕಾರಿಯವರಿಗೆ ಸೂಚನೆ ನೀಡಲು ಕಂದಾಯ ಇಲಾಖೆಯನ್ನು ಕೋರಲಾಗುತ್ತಿದ್ದು, ಈ ಸಂಬಂಧ ಕಂದಾಯ ಇಲಾಖೆಯಿಂದ ಸ್ಪಷ್ಟೀಕರಣ/ ಮಾಹಿತಿ ಸ್ವೀಕೃತವಾದ ನಂತರ ತಿಳಿಸಲಾಗುವುದು.

14. ಮೇಲ್ಕಂಡ ಎಲ್ಲಾ ಸೂಚನೆಗಳನ್ನು ಹಾಗೂ ಉಲ್ಲೇಖಿತ ಸುತ್ತೋಲೆಗಳಲ್ಲಿನ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಎಲ್ಲಾ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಎಲ್ಲಾ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಗ್ರಾಮ ಪಂಚಾಯಿತಿಗಳ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಮತ್ತೊಮ್ಮೆ ಸೂಚಿಸುತ್ತಾ, ಇದರಲ್ಲಿ ಯಾವುದೇ ಲೋಪ ಉಂಟಾದಲ್ಲಿ ಅವರುಗಳನ್ನೇ ನೇರವಾಗಿ ಜವಾಬ್ದಾರರನ್ನಾಗಿ ಮಾಡಿ ಶಿಸ್ತು ಕ್ರಮ ಜರುಗಿಸಲಾಗುವುದೆಂದು ತಿಳಿಸಿದೆ.



**(ಪಿ.ಕುಮಾರ್)**
**ನಿರ್ದೇಶಕರು (ಪಂ.ರಾಜ್) ಮತ್ತು ಪದನಿಮಿತ್ತ ಸರ್ಕಾರದ**
**ಉಪ ಕಾರ್ಯದರ್ಶಿ ಗ್ರಾಮೀಣಾಭಿವೃದ್ದಿ ಮತ್ತು ಪಂ.ರಾಜ್ ಇಲಾಖೆ.**

## ಅನುಬಂಧ–1

### ನಮೂನೆ 9 ಕ್ಕೆ (ಅಧಿಕೃತ ಆಸ್ತಿ) ಲಗತ್ತುಗಳು.

**ಆಸ್ತಿಯ ವಿಧ (ಅನ್ವಯಿಸುವುದನ್ನು ಗುರುತುಮಾಡಿ)**

1. ಮೂಲ / ಹಳೆಯ ಗ್ರಾಮ ಠಾಣಾ ವ್ಯಾಪ್ತಿ.
2. ವಸತಿ ಇಲಾಖೆಯ ಸರ್ಕಾರಿ ಆದೇಶ ಸಂಖ್ಯೆ ಎಚ್‌ಡಿ 55 ಹೆಚ್‌ಎಎಸ್ 2011 ದಿನಾಂಕ: 30–01–2012 ರಂತೆ ಬಸವ ವಸತಿ ಯೋಜನೆ, ಗ್ರಾಮೀಣ ಅಂಬೇಡ್ಕರ್ ಯೋಜನೆ ಮತ್ತು ಇಂದಿರಾ ಆವಾಸ್ ಯೋಜನೆಯ ಮನೆಗಳು.
3. ಭೂಪರಿವರ್ತನೆ ಆದೇಶ ಮತ್ತು ಸಕ್ಷಮ ಸ್ಥಳೀಯ ಯೋಜನಾ ಪ್ರಾಧಿಕಾರದಿಂದ ಅನುಮೋದಿತ ಆಸ್ತಿ.

ಆಸ್ತಿಯ ವಿಧ(1) ಆಗಿದ್ದಲ್ಲಿ

ಆಸ್ತಿಯು ಹಳೆಯ ಗ್ರಾಮ ಠಾಣಾದ ಭಾಗವಾಗಿರುವುದಾಗಿ ನಮೂದಿಸಿ ತಹಶೀಲ್ದಾರರು ನೀಡಿದ ಆದೇಶ ಸಂಖ್ಯೆ________________ಮತ್ತು ದಿನಾಂಕ:____________

**ಆಸ್ತಿಯ ವಿಧ (2) ಆಗಿದ್ದಲ್ಲಿ**

ಬಸವ ವಸತಿ ಯೋಜನೆ, ಗ್ರಾಮೀಣ ಅಂಬೇಡ್ಕರ್ ಯೋಜನೆ ಮತ್ತು ಇಂದಿರಾ ಆವಾಸ್ ಯೋಜನೆಯ ಮಂಜೂರಾತಿ ಆದೇಶ ಸಂಖ್ಯೆ--------------------- ದಿನಾಂಕ------------- ಮತ್ತು ಆದೇಶ ನೀಡಿದ ಪ್ರಾಧಿಕಾರದ ಹೆಸರು----------------------------------------------

**ಆಸ್ತಿಯ ವಿಧ (3) ಆಗಿದ್ದಲ್ಲಿ**

ಭೂಪರಿವರ್ತನೆ ಆದೇಶ ಸಂಖ್ಯೆ---------------- ದಿನಾಂಕ---------------- ಮತ್ತು ಆದೇಶ ನೀಡಿದ ಪ್ರಾಧಿಕಾರದ ಹೆಸರು-----------------------------

ಬಡಾವಣೆ ನಕ್ಷೆ ಮಂಜೂರಾತಿ ಸಂಖ್ಯೆ-----------------ದಿನಾಂಕ------------ಮತ್ತು ಅನುಮೋದನೆ ನೀಡಿದ ನಗರಾಭಿವೃದ್ಧಿ ಇಲಾಖೆಯ ಸಕ್ಷಮ ಪ್ರಾಧಿಕಾರದ ಹೆಸರು ------------------------------ -----------------------------

### ದೃಢೀಕರಣ

ನಮೂನೆ–9 ಹಾಗೂ ಅದಕ್ಕೆ ಸಂಬಂಧಿಸಿದಂತೆ ಅನುಬಂಧ–1 ರಲ್ಲಿನ ಮಾಹಿತಿಗಳು ಅಧಿಕೃತವಾಗಿದ್ದು, ಸದರಿ ಮಾಹಿತಿಯು ಕಛೇರಿ ದಾಖಲಾತಿಗಳಾದ _______ ಸಾಲಿನ ನಮೂನೆ–9 ವಹಿಯಲ್ಲಿನ _______ಪುಟ ಸಂಖ್ಯೆಯ ____ ಕ್ರಮ ಸಂಖ್ಯೆಯಲ್ಲಿ ನಮೂದಾಗಿದ್ದು, _______ ರವರು ದೃಢೀಕರಿಸಿರುತ್ತಾರೆ. ಈ ನಮೂನೆ ನೀಡುವಾಗ __________ ವರ್ಷದ ವಿತರಣಾ ವಹಿಯ _______ ಪುಟದಲ್ಲಿನ _______ ಕ್ರಮ ಸಂಖ್ಯೆಯಲ್ಲಿ ನಮೂದಾಗಿದೆ.

____________________ ಪಂಚಾಯತಿ ಅಭಿವೃದ್ಧಿ ಅಧಿಕಾರಿ

____________________ ಗ್ರಾಮ ಪಂಚಾಯತಿ

____________________ ತಾಲ್ಲೂಕು

____________________ ಜಿಲ್ಲೆ.



ಡಾ|| ಡಿ.ಕೆ. ಜೈನ್ ಭಾ.ಆ.ಸೆ. ಜಂಟಿ ಕಾರ್ಯದರ್ಶಿಗಳು ಗ್ರಾಮೀಣಾಭಿವೃದ್ಧಿ ಮಂತ್ರಾಲಯ ನವದೆಹಲಿ. ಇವರು ರಾಜ್ಯದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾತರಿ ಯೋಜನೆಯಲ್ಲಿ ಸಾಧಿಸಿರುವ ಪ್ರಗತಿ ಹಾಗೂ ಯೋಜನೆಯ ಅನುಷ್ಠಾನ ಕುರಿತು ಸಭೆ ನಡೆಸಿದರು. ಈ ಸಂದರ್ಭದಲ್ಲಿ ಡಾ|| ಇ.ವಿ. ರಮಣರೆಡ್ಡಿ ಭಾ.ಆ.ಸೆ. ಪ್ರಧಾನ ಕಾರ್ಯದರ್ಶಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ. ಮತ್ತು ಶ್ರೀ ಮುನೀಶ್ ಮೌದ್ಗಿಲ್ ನಿರ್ದೇಶಕರು. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ ಇಲಾಖಾ ಅಧಿಕಾರಿಗಳು ಮತ್ತು ಪ್ರತಿನಿಧಿಗಳು ಉಪಸ್ಥಿತರಿದ್ದರು.



# KARNATAKA VIKAS : FEBRUARY 2013

A Monthly Magazine for Rurla Development and Panchayat Raj Department, Government of Karnataka
Regd. No. KA/BGGPO/2531/2012-14, Licence to Post "Without Prepayment" WPP-32
RNI No. 28103/1974 Total No. of Page-52. Posted at Bangalore GPO on 9th, 10th, 11 of every month





Published by :
**Director {Panchayat Raj}**
Rural Development and
Panchayat Raj Department

Name of the Printer
**T. NAGARAJ**

Printed by :
**ABHIMAANI PUBLICATION Ltd.,**
No. 2/4, Dr. Rajkumar Road,
Rajajinagar, Bangalore-560 010.
Ph : 23123141

Place & Publication :
**KARNATAKA VIKAS**
No. 309, 3rd Floor, Gate No. 1, Multistoried Building
Dr. Ambedkar Veedhi, Bangalore - 560 001.

Owned by :
Director {Panchayat Raj}
Rural Development and
Panchayat Raj Department

Name of the Editor :
**Y. Mahankalappa**

**ಬೆಲೆ : 5 ರೂಪಾಯಿಗಳು**
**Price : Rs. 5-00**